ಅಭಿಜ್ಞಾನ
ಭಾರತತೀರ್ಥ 2

ವಾಲ್ಮೀಕಿಪ್ರತಿಭೆ



ಸಾ. ಕೃ. ರಾಮಚಂದ್ರರಾವ್

ಭಾರತತೀರ್ಥ - 2

ವಾಲ್ಮೀಕಿಪ್ರತಿಭೆ

ಸಾ. ಕೃ. ರಾಮಚಂದ್ರರಾವ್

2008

ಇಪ್ಪತ್ತೈದನೆಯ ಪ್ರಕಟನೆ

ಅಭಿಜ್ಞಾನ

ಬೆಂಗಳೂರು - 560 019

✆ 080 - 2242 14 14, 94484 94949

abhijnanam@yahoo.com

abhijnanabooks@yahoo.com

VĀLMĪKIPRATIBHE (An Essay on Vālmīki's Rāmāyaṇa), by Prof. S. K. Ramachandra Rao, Published by Abhijñāna, Bangalore - 560 019, INDIA.
Email: abhijnanam@yahoo.com, abhijnanabooks@yahoo.com
First Edition: 1967 Pages: 68 Price: Rs. 45
First Reprint (from Abhijnana): 2008

© *All rights reserved*

ಪುಟಗಳು: 68
ಬೆಲೆ: ರೂ. 45
ಪ್ರಥಮ ಆವೃತ್ತಿ: 1967
ಪ್ರಥಮ ಪುನರ್ಮುದ್ರಣ: 2008 (ಅಭಿಜ್ಞಾನದಿಂದ)
ಮುಖಪುಟವಿನ್ಯಾಸ: ಪ್ರಥಮ್ ವರ್ಲ್ಡ್

ISBN: 978-81-88278-17-6

ಸಂಪರ್ಕ ವಿಳಾಸ:

ಎಸ್. ಸೂರ್ಯಪ್ರಕಾಶ ಪಂಡಿತ್
ನಂ. 2, ದತ್ತಾತ್ರೇಯ ದೇವಸ್ಥಾನದ ರಸ್ತೆ
ಪೈಪ್‌ಲೈನ್, ಮಲ್ಲೇಶ್ವರಂ
ಬೆಂಗಳೂರು - 560 003
✆ 94484 94949

ಅಕ್ಷರಜೋಡಣೆ: ಗಾಯತ್ರಿ ಪ್ರಿಂಟ್ಸ್, ಬೆಂಗಳೂರು - 560 050
✆ 26699367

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಅಭಿಜ್ಞಾನದ ಮಾತು

ಋಷಿಕವಿಯೆ ನಮೋ ನೀಂ ಮಾ-
ನುಷಸತ್ತ್ವದ ಖಚಲಕನಕಕೇತುವ ತೋರ್ದಯ್ ।
ದಶರಥಸುತ ಪ್ರಪಂಚದ
ವಸತಿ ಪ್ರಾಕಾರ ವೀಥಿ ವನ ದುರ್ಗಗಳೊಳ್ ॥

—ಶ್ರೀರಾಮಪರೀಕ್ಷಣಂ, ಡಿವಿಜಿ

ಭಾರತೀಯ ಜನಮಾನಸದ ಮೇಲೆ ಎಂದೂ ಮಾಸದಂಥ ಗಾಢವಾದ ಪ್ರಭಾವವನ್ನು ಮೂಡಿಸಿರುವ ಮಹಾಕೃತಿಗಳೇ ರಾಮಾಯಣ ಮತ್ತು ಮಹಾಭಾರತ. ಇವೆರಡು ಜೀವಕಾವ್ಯಗಳು ಕೇವಲ ಭಾರತಕ್ಕಷ್ಟೇ ಸಲ್ಲುವಂಥವಲ್ಲ, ಇವು ಸಮಸ್ತಮನುಕುಲಕ್ಕೇ ಆವಶ್ಯಕವೂ ಪೋಷಕವೂ ಆದ ರಸಸಾಗರಗಳೇ ಹೌದು. ನಮ್ಮಲ್ಲಂತೂ ರಾಮಾಯಣ-ಮಹಾಭಾರತಗಳು ಕೇವಲ ಓದು-ಬರಹವನ್ನು ಬಲ್ಲವರಿಗಷ್ಟೇ ಸೊತ್ತಾಗಿಲ್ಲ, ಅಕ್ಷರಜ್ಞಾನವಿಲ್ಲದವರಿಗೂ ಸಹ ಇವು ಸಹಜವಾಗಿಯೇ ಜೀವನದ ಅವಿಭಾಜ್ಯ ಅಂಗವಾಗಿವೆ. ಇದು ಈ ಮಹಾಕಾವ್ಯಗಳ ಅಂತಸ್ಸತ್ತ್ವವನ್ನು ಮಹತ್ತ್ವವನ್ನು ಪ್ರಭಾವಕ್ಕೂ ಜೀವಂತಸಾಕ್ಷ್ಯಗಳಾಗಿವೆ. ಶ್ರೀರಾಮ-ಶ್ರೀಕೃಷ್ಣರು ಭಾರತೀಯರಿಗೆ ಯುಗಯುಗಗಳಿಂದಲೂ ಆದರ್ಶಪುರುಷರಾಗಿದ್ದಾರೆ, ಅವತಾರಮೂರ್ತಿಗಳೆನಿಸಿದ್ದಾರೆ, ಅರ್ಚಾವಿಗ್ರಹಗಳಾಗಿದ್ದಾರೆ.

ಶ್ರೀರಾಮಚರಿತೆಯೇ ರಾಮಾಯಣ. ಇದು ನಮ್ಮ ಪಾಲಿಗಂತೂ ಆದಿಕಾವ್ಯ. ಆದಿಕಾವ್ಯವೆಂದಮಾತ್ರಕ್ಕೆ ಇದು ಕಾವ್ಯದ ಒಂದು ಪ್ರಯೋಗವಾಗಿಯೋ, ಆರಂಭದ ಬಾಲಪಾಠವಾಗಿಯೋ, ರಸ-ಧ್ವನಿ-ಔಚಿತ್ಯಗಳಿರದ ಅರಚಾಟವಾಗಿಯೋ ಆಗಿರದೆ ಪರಿಪೂರ್ಣ ಮಹಾಕಾವ್ಯವಾದದ್ದು ದಿಟವಾಗಿಯೂ ಸೃಷ್ಟಿಯ ಅದ್ಭುತವೇ ಸರಿ; ಇದು ಈ ಮಹಾಕೃತಿಯ ಅಲೌಕಿಕತೆಗೊಂದು ಮೆರುಗನ್ನು ಒದಗಿಸಿದೆಯೆನ್ನಬಹುದು. ಡಿವಿಜಿಯವರ ಮಾತನ್ನು ಇಲ್ಲಿ ನೋಡಬಹುದು—"ಶ್ರೀಮದ್ರಾಮಾಯಣವು ಕಾವ್ಯಮಾತ್ರವಲ್ಲ, ಆದಿಕಾವ್ಯ. ಅದರ ಆದಿತ್ವವು ಕಾಲಮಾನಮಾತ್ರದ್ದಲ್ಲ; ಗುಣಾಧಿಕ್ಯದಿಂದಲೂ ಸಿದ್ಧವಾದದ್ದು. ಪ್ರಪಂಚದ ಸಾಹಿತ್ಯಚರಿತ್ರೆಯಲ್ಲಿ ಇದು ಒಂದು ಆಚ್ಚರಿಯ ಸಂಗತಿ. ಪ್ರಪಂಚದಲ್ಲಿ ನಮಗೆ ದೊರೆತಿರುವ ಮೊಟ್ಟಮೊದಲನೆಯ ಕಾವ್ಯವೇ ಕಾವ್ಯದ ಸಲ್ಲಕ್ಷಣಗಳಿಗೆ ಆದರ್ಶವೂ ಆಗಿದೆ..... ಸರ್ವಾಂಗ

ಪರಿಪೂರ್ಣವೂ ಸರ್ವಾಂಗಸುಂದರವೂ ಆದ ಒಂದು ಸಮಗ್ರಕಾವ್ಯವನ್ನು ಪ್ರಥಮವಾಗಿ ನಿರ್ಮಿಸಿದ ಯಶಸ್ಸು ವಾಲ್ಮೀಕಿಯದು."

ತಪಸ್ಸಿನ ಅಚಲತೆಗೆ ಸಂಕೇತವೇ ವಲ್ಮೀಕ, ಹುತ್ತ: ಇಂಥ ಜ್ಞಾನನಿಷ್ಠತಪಸ್ಸಿನಿಂದ ಆವಿರ್ಭಾವಗೊಂಡ ಪ್ರತಿಭಾಮೂರ್ತಿಯೆ ಋಷಿಕವಿ ವಾಲ್ಮೀಕಿಗಳು. ಅವರ ಪ್ರತಿಭಾಜ್ಞಾನಚಕ್ಷುವಿಗೆ ಸಾಕ್ಷಾತ್ಕಾರವಾದ ಮಹಾತತ್ತ್ವವೇ ಶ್ರೀರಾಮಚರಿತೆ. ತಮ್ಮ ಅಂತರಂಗದಲ್ಲಿಯೇ ನಿಕ್ಷಿಪ್ತವಾಗಿದ್ದ ಇದು ಜಗತ್ತಿಗೂ ಬೆಳಕಾಗಿ ಮೂಡಿಕೊಂಡಿದ್ದು ರಾಮಾಯಣದ ರೂಪದಲ್ಲಿ. ಇಂಥ ರಾಮಾಯಣವನ್ನೂ, ಈ ಶಾಶ್ವತಕೃತಿಯ ಕರ್ತೃ ವಾಲ್ಮೀಕಿಮುನಿಗಳ ಪ್ರತಿಭೆಯನ್ನೂ ಪರಿಚಯಿಸುವ ಪ್ರಯತ್ನವೇ ವಾಲ್ಮೀಕಿಪ್ರತಿಭೆ.

ವಾಲ್ಮೀಕಿಪ್ರತಿಭೆಯ ಲೇಖಕರು ಆಚಾರ್ಯ ಪ್ರೊ. ಸಾ. ಕೃ. ರಾಮಚಂದ್ರ ರಾಯರು; ಭಾರತೀಯತೆಯ ಮೂರ್ತರೂಪದಂತಿದ್ದವರು; ರಾಮಾಯಣವಂತೂ ಇವರ ಅತ್ಯಂತ ಪ್ರಿಯಗ್ರಂಥಗಳಲ್ಲಿ ಪ್ರಮುಖವೆನಿಸಿತ್ತು. ರಾಯರು ಭೌತಿಕವಾಗಿ ಇಂದು ನಮ್ಮೊಂದಿಗಿಲ್ಲದಿದ್ದರೂ ಇವರ ಚೇತನ ಸದಾ 'ಅಭಿಜ್ಞಾನ'ಕ್ಕೆ ಶಕ್ತಿಯನ್ನು ಒದಗಿಸುತ್ತಲೇ ಬಂದಿದೆ; ಇಷ್ಟಕ್ಕೂ ಋಷಿತತ್ತ್ವಕ್ಕೆ ಅಂತ್ಯವೆಂಬುದು ಇರದೆನ್ನಿ. ರಾಮಚಂದ್ರರಾಯರು ಭಾರತೀಯವಿದ್ಯೆಯ ಹತ್ತುಹಲವು ಶಾಖೆಗಳಲ್ಲಿ ಪರಿಣತರು; ಇನ್ನೂರಕ್ಕೂ ಹೆಚ್ಚು ಮೌಲಿಕ ಗ್ರಂಥಗಳನ್ನು ಕನ್ನಡ-ಇಂಗ್ಲಿಷ್‌ಭಾಷೆಗಳಲ್ಲಿ ರಚಿಸಿದವರು. ರಾಯರ ಸಾರಸ್ವತಸಿದ್ಧಿ-ಸಾಧನೆಯ ತಪಃಶಕ್ತಿಯು ಸದಾ ನಮ್ಮ ಚಟುವಟಿಕೆಗಳಿಗೆ ತೇಜಸ್ಸನ್ನೂ ಬಲವನ್ನೂ, ಒಳ್ಳೆಯ ಬದುಕಿನ ಬಗೆಗೆ ವಿಶ್ವಾಸವನ್ನೂ ನಂಬಿಕೆಯನ್ನೂ ಒದಗಿಸುವ ದಿಟವಾದ ಭಾರತತೀರ್ಥವೇ ಹೌದು.

'ವಾಲ್ಮೀಕಿಪ್ರತಿಭೆ' ಮೊದಲು ಪ್ರಕಟವಾದದ್ದು 1967ರಲ್ಲಿ. ಆ ಆವೃತ್ತಿಯನ್ನೇ ಇಲ್ಲಿ ಪುನರ್ಮುದ್ರಿಸಿದ್ದೇವೆ. ರಾಯರೇ ಈಗ ಇದ್ದಿದ್ದರೆ ಖಂಡಿತವಾಗಿ ಇದರಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡುತ್ತಿದ್ದರೆಂಬುದರಲ್ಲಿ ಅನುಮಾನವಿಲ್ಲ; ಉದಾಹರಣೆಗೆ, ಆರ್ಯ-ದ್ರಾವಿಡವಾದವನ್ನು ಕುರಿತು ರಾಯರ ಅಭಿಪ್ರಾಯ ಅವರ ಮೊದಲಿನ ನಿಲವಿಗಿಂತಲೂ ಅನಂತರದಲ್ಲಿ ಬದಲಾಗಿದ್ದಿತು. ಆದುದರಿಂದ, ಇಂಥದೊಂದು ಅವಕಾಶ ತಪ್ಪಿಹೋದದ್ದು ಸಾರಸ್ವತಲೋಕಕ್ಕೆ ಆದ ನಷ್ಟವೇ ಎನ್ನಬಹುದು.

ಈ ಕೃತಿಯನ್ನು ಪ್ರಕಟಿಸಲು ಅನುಮತಿಯನ್ನು ನೀಡಿರುವುದಲ್ಲದೆ, ಅಭಿಜ್ಞಾನಕ್ಕೆ ಸದಾ ಬೆಂಬಲವಾಗಿರುವ ಪ್ರೊ. ಸಾ. ಕೃ. ರಾಮಚಂದ್ರರಾವ್ ಮೆಮೋರಿಯಲ್ ಟ್ರಸ್ಟ್‌ನ ಎಲ್ಲ ಬಂಧುಗಳಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಎಂದಿನಂತೆ ಈ ಯೋಜನೆಯಲ್ಲೂ ಸಕ್ರಿಯವಾಗಿ ಭಾಗಿಯಾಗಿ, ಹಲವು ವಿಧಗಳಲ್ಲಿ ಸಹಕರಿಸುವ ಮಿತ್ರ ಶ್ರೀ ಬಿ. ಎಸ್. ಸೂರ್ಯಪ್ರಕಾಶ್ ಅವರಿಗೆ

ನನ್ನ ನಮನಗಳು. ಅಭಿಜ್ಞಾನದ ಎಲ್ಲ ಮಿತ್ರರನ್ನೂ ಈ ಸಂದರ್ಭದಲ್ಲಿ ನೆನೆಯುತ್ತಿದ್ದೇನೆ.

ಅಕ್ಷರವನ್ನು ಜೋಡಿಸಿಕೊಟ್ಟಿರುವ ಗಾಯತ್ರಿ ಪ್ರಿಂಟ್ಸ್‌ನ ಬಂಧುಗಳಿಗೂ, ವಿಶೇಷವಾಗಿ ಶ್ರೀ ರಜನೀಶ್ ಅವರಿಗೂ, ಮುದ್ರಕರಾದ 'ಲಕ್ಷ್ಮಿ ಮುದ್ರಣಾಲಯ' ಇವರಿಗೂ, ಆಕರ್ಷಕ ಮುಖಪುಟವನ್ನು ವಿನ್ಯಾಸಮಾಡಿ ಕೊಟ್ಟಿರುವ ಪ್ರಥಮ್ ವರ್ಲ್ಡ್ ಇವರಿಗೂ ನನ್ನ ವಂದನೆಗಳು.

ಆತ್ಮೀಯರಾದ ಓದುಗರೇ, ನಿಮ್ಮ ಬೆಂಬಲವೇ ನಮಗೆ ಶ್ರೀರಕ್ಷೆ. ಅಭಿಜ್ಞಾನವನ್ನು ನಿರಂತರವಾಗಿ ಪ್ರೋತ್ಸಾಹಿಸುತ್ತ ಬಂದಿರುವ ತಮ್ಮೆಲ್ಲರಿಗೂ ನಮ್ಮ ಅನಂತ ನಮನಗಳು. ಈ ಗ್ರಂಥಮಾಲಿಕೆಯ ಬಗೆಗೂ, ಈ ಕೃತಿಯ ಬಗೆಗೂ ದಯವಿಟ್ಟು ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ನಮಗೆ ತಲಪಿಸಬೇಕಾಗಿ ಕೋರುತ್ತಿದ್ದೇನೆ.

ಎಂದರೋ ಮಹಾನುಭಾವುಲು ಅಂದರಿಕಿ ವಂದನಮುಲು

ಮಹಾಶಿವರಾತ್ರಿ
5-3-2008
ಬೆಂಗಳೂರು

—ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ-ಪ್ರಕಾಶಕ
panditsurya@yahoo.co.in
suryaprakashpandit@rediffmail.com

'ಭಾರತತೀರ್ಥ'

ಗಾಯನ್ತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ತೇ ಭಾರತಭೂಮಿಭಾಗೇ ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ
ಭವನ್ತಿ ಭೂಯಃ ಪುರುಷಾಃ ಸುರತ್ವಾತ್ ॥

—*ವಿಷ್ಣುಪುರಾಣ, 2.3.24*

Each race contributes something essential to the world's civilization in the course of its own self-expression and self-realization. .....The essential contribution of India, then is simply her Indianess.

—Ananda K. Coomaraswamy
(Dance of Shiva)

ನಾವು ಭಾರತೀಯರು; ಭಾರತದೇಶದಲ್ಲಿ ಹುಟ್ಟಿರುವವರು. ನಮ್ಮ ದೇಶವನ್ನು ತಾಯಿಯಂತೆ ಭಾವಸ್ತರದಲ್ಲಿ ಆರಾಧಿಸುವುದಿರಲಿ, ಒಂದು ರಾಷ್ಟ್ರವಾಗಿ ಯಾದರೂ ಇದರ ಸತ್ತ್ವ ನಮಗೆ ತಿಳಿದಿದೆಯೇ? ಇಲ್ಲಿ ಸ್ವಾಮಿ ವಿವೇಕಾನಂದರ ಮಾತುಗಳನ್ನು ಕೇಳುವುದೇ ಸರಿಯಾದೀತು—

"This is the ancient land where wisdom made its home before it went into any other country; ....Here is the same India whose soil has been trodden by the feet of the greatest sages that ever lived. Here first arose the doctrines of the immortality of the soul, the existence of a supervising God, an immanent God in nature and in man, and were the highest ideals of religion and philosophy have attained their culminating points. This is the land whence, like the tidal waves, spirituality and philosophy have again and again rushed out and deluged the world, and this is the land from whence once more such tides must proceed in order to bring life and vigour into the decaying races of mankind. It is the same India which has

withstood the shocks of centuries of hundreds of foreign invasions, of hundreds of upheavals of manners and customs. Its life is of the same nature as the soul, without begining and without end, immortal; and we are the children of such a country."

—*Lectures from Colombo to Almora*

ಆದರೆ ನಮಗಾದರೂ ಇಂಥ ನಮ್ಮ ತಾಯಿಯ ಹಿರಿಮೆ-ಗರಿಮೆಗಳ ಪರಿಚಯ ಎಷ್ಟಿದೆ? ನಮ್ಮ ಸಂಸ್ಕೃತಿ-ಪರಂಪರೆಗಳ ಅರಿವು-ಒಲವು ಎಷ್ಟಿದೆ? ಈ ಪ್ರಶ್ನೆಗಳನ್ನು ನಾವು ಎಂದಾದರೂ ನಮ್ಮನ್ನು ನಾವೇ ಕೇಳಿಕೊಂಡಿದ್ದೇವೆಯೆ? ವಿಲ್ ಡ್ಯೂರಂಟ್ ತನ್ನ ಮಹಾಸಾಧನೆಯಾದ 'The Story of Civilization' ಗ್ರಂಥಮಾಲೆಯಲ್ಲಿ ಭಾರತವನ್ನು ಕುರಿತ ಅಧ್ಯಾಯದ ಪ್ರಾರಂಭದಲ್ಲಿಯೇ ಹೇಳುತ್ತಾನೆ—

"Nothing should more deeply shame the modern student than the recency and inadequecy of his acquiantance with India."

ಈ ಮಾತು ವಿಲ್ ಡ್ಯೂರಂಟ್ ಪಾಶ್ಚಾತ್ಯಜಗತ್ತಿಗೆ ಹೇಳಿದ್ದಾದರೂ, ನಮಗೆ, ಎಂದರೆ ಭಾರತೀಯರಿಗೂ ಇದು ಇಂದೂ ಚೆನ್ನಾಗಿಯೇ ಒಪ್ಪತಕ್ಕದ್ದು.

ಭಾರತೀಯ ಪರಂಪರೆ-ಸಂಸ್ಕೃತಿಗಳನ್ನು ಒಂದೇ ಪದದಲ್ಲಿ ಹೇಳುವುದಾದರೆ 'ಭಾರತೀಯತೆ' ಎನ್ನಬಹುದು. "ನೀವು ಯಾವ ಹೆಸರಿನಿಂದಾದರೂ ಕರೆಯಿರಿ; ಆದರೆ ಈ ಭಾರತೀಯತೆಯನ್ನು ಅರಿಯುವ ಅನಿವಾರ್ಯತೆಯಾದರೂ ನಮಗೇನಿದೆ?"—ಇಂಥ ಪ್ರಶ್ನೆಯೂ ನಮ್ಮಲ್ಲಿ ಹಲವರಿಗೆ ಮೂಡಿಕೊಂಡರೆ ಅದೇನೂ ಅಚ್ಚರಿಯಲ್ಲ. ದಾರ್ಶನಿಕ ಆನಂದ ಕುಮಾರಸ್ವಾಮಿ ಅವರು ಈ ಅನಿವಾರ್ಯತೆಯನ್ನು ಸಕಾರಣವಾಗಿಯೇ ಗುರುತಿಸಿದ್ದಾರೆ. ಜಗತ್ತಿನಲ್ಲಿ ಇಂದು ಉಳಿದಿರುವ ಸಂಸ್ಕೃತಿಗಳಲ್ಲಿ ಅತಿ ಪ್ರಾಚೀನಸಂಸ್ಕೃತಿಯೆಂದರೆ ಭಾರತೀಯ ಸಂಸ್ಕೃತಿಯೇ. ಹೀಗೆಂದು, ಪ್ರಾಚೀನ ಎಂದ ಮಾತ್ರಕ್ಕೆ ವಿಶೇಷ ಮನ್ನಣೆಯನ್ನು ಕೊಡಬೇಕೆಂದಲ್ಲ. ಇತಿಹಾಸದುದ್ದಕ್ಕೂ ಭಾರತವು ಅಸಂಖ್ಯಾತ ಆಘಾತಗಳನ್ನು ಎದುರಿಸಿಯೂ ಜೀವಂತವಾಗಿ ಕಂಗೊಳಿಸುತ್ತಿದೆ. ಆದಕಾರಣ, ಇಂದಿನ ಹಲವು ಜನಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ತನ್ನ ಅನುಭವದ ಅರಿವಿನಿಂದ ಭಾರತವು ಪರಿಹಾರವನ್ನು ಒದಗಿಸಬಲ್ಲ ಗುರುಸ್ಥಾನದಲ್ಲಿದೆ; ಭಾರತದ ಗರಿಮೆ ಇದೊಂದೇ ಅಲ್ಲದಿದ್ದರೂ, ಇದೊಂದು ಪ್ರಯೋಜನಕ್ಕಾದರೂ ಭಾರತೀಯತೆಯ ಅರಿವು ಜಾಗೃತವಾದರೂ ಸಾಕೆನ್ನಲಡ್ಡಿಯಿಲ್ಲ.

"If we regard the world as a family of nations, then we shall be understand the position of India which has passed through many experiences and solved many problems which younger races have hardly get recognized."

—Anand K. Coomaraswamy
Dance of Shiva

ಮನುಕುಲದ ಉಳಿವಿಗೆ, ನಲವಿಗೆ, ಚೆಲುವಿಗೆ ಭಾರತೀಯತೆಯ ಆವಶ್ಯಕತೆಯಿದೆ ಎಂದಾಯಿತು. ಜಗತ್ತಿನ ಒಟ್ಟು ಏಳಿಗೆಗೂ ವ್ಯಕ್ತಿಯ ಉನ್ನತಿಗೂ, ಎಂದರೆ ನಮ್ಮ ಬಹಿರಂಗದ ಸ್ವಾಸ್ಥ್ಯಕ್ಕೂ ಅಂತರಂಗದ ಸ್ವಾಸ್ಥ್ಯಕ್ಕೂ ಔಷಧವಾಗಬಲ್ಲದ್ದು, ಚೈತನ್ಯದಾಯಕವಾದದ್ದು ಭಾರತೀಯತೆ. ಅಂತರಾತ್ಮ ಪಾರಮ್ಯ ಮತ್ತು ಅಧ್ಯಾತ್ಮದೃಷ್ಟಿಯ ಲೋಕವ್ಯವಹಾರ, ಇದನ್ನೇ ಆನಂದ ಕುಮಾರಸ್ವಾಮಿ ಅವರು ಹೇಳಿದ್ದು—"ಮನುಕುಲಕ್ಕೆ ಭಾರತ ಕೊಟ್ಟಿರುವ ಕೊಡುಗೆಯೆಂದರೆ ಅದು ಭಾರತೀಯತೆಯೇ ಹೌದು"—ಎಂದು.

"ಭಾರತೀಯರಿಗೆ ಭಾರತೀಯತೆ ಎಂಬುದು ಸಹಜವೇ ಹೌದು; ಭಾರತದಲ್ಲಿ ಹುಟ್ಟಿರುವವರು ಮಾಡುವುದೆಲ್ಲವೂ ಭಾರತೀಯತೆಯಲ್ಲದೆ ಮತ್ತೇನು? ಆದುದರಿಂದ ಈ ಭಾರತೀಯತೆಯನ್ನು ಅರಿಯಲು ವಿಶೇಷ ಪ್ರಯತ್ನವಾದರೂ ಏಕೆ?" ಈ ಮಾತು ತಾರ್ಕಿಕ ನೆಲೆಯಲ್ಲಿ ದಿಟವಾಗಿ ಕಂಡರೂ ವಾಸ್ತವದಲ್ಲಿ ಅಬದ್ಧವಾಗಿದೆ. ಇಂದು ಭಾರತೀಯರೇ ಭಾರತೀಯತೆಯಿಂದ ದೂರವಾಗುತ್ತಿರುವ, ಭಾರತೀಯತೆಯನ್ನು ದೂರುತ್ತಿರುವ ನಿದರ್ಶನಗಳೇ ಹೆಚ್ಚು ಹೆಚ್ಚು ಕಾಣಿಸುತ್ತಿವೆ. ಹೀಗಾಗಿಯೆ, ಭಾರತೀಯತೆಯನ್ನು ಕಂಡುಕೊಳ್ಳಬೇಕಾದ ದಿಟವಾದ ಆವಶ್ಯಕತೆಯಿರುವುದು ಭಾರತೀಯರಿಗೇ ಎನ್ನುವಂತಾಗಿದೆ; ನಮ್ಮತನದ ಅರಿವು ಮೊದಲಿಗೆ ನಮಗೇ ಒದಗಬೇಕಾಗಿದೆ. ಸ್ವಾಮಿ ವಿವೇಕಾನಂದರ ಕರೆಯನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು—

"Children of India,..... many times have I been told that looking into the past only degenerates and leads to nothing and that we should look to the future. That is true. But out of past is built the future. Look back, therefore, as for as you can, drink deep of the eternal fountains that are behind. Our ancestors were great..... We must learn the elements of our being, the blood that courses in our vains. We must have faith in that blood and what it did in the past; we must build an India yet greater than what she has been."

ಇಲ್ಲಿ ಇನ್ನೊಂದು ಪ್ರಶ್ನೆ ಏಳಬಹುದು—'ಭಾರತೀಯತೆ ಎಂದರೆ ಅದೊಂದು ಭೌಗೋಳಿಕ ವಿವರಣೆಯೆ?' ಖಂಡಿತವಾಗಿಯೂ ಅಲ್ಲ; ಭಾರತೀಯತೆ ಎಂಬುದು ಒಂದು ಜೀವನಪದ್ಧತಿ, ಜೀವನದರ್ಶನ. ಹೀಗಾಗಿಯೇ ಇದು ಎಲ್ಲ ಜೀವಿಗಳಿಗೂ ಬೇಕಾದ ತತ್ತ್ವವಾಗಿರುವುದು. ಕವಿ ರವೀಂದ್ರರ ಮಾತುಗಳಲ್ಲಿ ಭಾರತದ ಚೇತನವು ಸಮರ್ಥವಾಗಿ ಪ್ರತಿಬಿಂಬಿತವಾಗಿದೆ—

"I love India, not because I cultivate the idolatry of geography, not because I have had the chance to be born in her soil, but because she has saved through tumultnous ages the living words that have issued from the illuminated cousciousness of her great sons—*Satyam Jñānam Anantam Brahma*: *Brahma* is Truth, *Brahma* is Wisdom, *Brahma* is Infinite; *Śāntam Śivam Advaitam*: Peace is *Brahma*, goodness is in *Brahma*, and the Unity of all beings.

Thus we have come to know that what India truly seeks is not a peace which is in negation, or in some mechanical adjustment, but that which is in *Śivam*, in goodness; which is in *Advaitam*, in the truth of perfect union; that India does not enjoin her children to cease from *Karma*, but to perform their *karma* in the presence of the Eternal, with the pure knowledge of the spiritual meaning of existence; that is the true prayer of Mother India:

'He who is one, who is above all colour distinctions, who dispenses the inherent needs of men of all colours, who comprehends all things from their beginning to the end, let him unite us to one another with wisdom, which is the wisdom of goodness'."

ಎಂದರೆ, ವ್ಯಷ್ಟಿಹಿತವನ್ನೂ ಸಮಷ್ಟಿಹಿತವನ್ನೂ ಪರಸ್ಪರ ಪೂರಕವಾಗಿ ಕಾಣುವಂಥ, ಅಭ್ಯುದಯ-ನಿಃಶ್ರೇಯಸ್ಸುಗಳೆರಡನ್ನೂ ಒಪ್ಪಿಕೊಂಡಂಥ, ಪ್ರವೃತ್ತಿ-ನಿವೃತ್ತಿಮಾರ್ಗಗಳೆರಡೂ ಗುರಿಯನ್ನೂ ತಲಪಿಸಬಲ್ಲ ವಾಹಕಗಳಾಗಿ ಸ್ವೀಕರಿಸಿದಂಥ, ಜಗತ್ತಿನ ಎಲ್ಲ ವಿವರಗಳಲ್ಲೂ ಏಕಮೂಲವನ್ನೇ ಕಾಣುವಂಥ, ಲೌಕಿಕದಲ್ಲಿ ಅಲೌಕಿಕವನ್ನೂ ಅಲೌಕಿಕದಲ್ಲಿ ಲೌಕಿಕವನ್ನೂ ಆಸ್ವಾದಿಸಬಲ್ಲ ಆಧ್ಯಾತ್ಮಿಕದೃಷ್ಟಿಯೇ ಭಾರತೀಯತೆ. ಆನಂದ ಕುಮಾರಸ್ವಾಮಿಯವರ ಮಾತೂ ಕೂಡ ಇಲ್ಲಿ ಮನನೀಯ—

"The heart and essence of the Indian experience is to be found in a constant intuition of the unity of all life, and the instinctive and ineradicable conviction that the recognition of this unity is the highest good and the uttermost freedom."

ಆದರೆ ಕೆಲವರು ಅಬದ್ಧವ್ಯಕ್ತಿಗಳ ವಿಕೃತಚಿಂತನೆಗಳ ದೆಸೆಯಿಂದಾಗಿ ಆಧ್ಯಾತ್ಮಿಕತೆ ಎಂಬುದು ಇಂದು ತೀರಸಂಕುಚಿತ ಅರ್ಥವ್ಯಾಪ್ತಿಗೆ ಬಲಿಯಾಗಿಬಿಟ್ಟಿದೆ. ದಿಟವಾಗಿ ನೋಡಿದರೆ, ಆಧ್ಯಾತ್ಮಿಕತೆ ಎಂಬುದು ಖಾಲಿತನವಲ್ಲ, ಬಂಜರುನೆಲವಲ್ಲ; ಇದು ತುಂಬುತನ, ಬಾಳಿನ ಫಲವತ್ತತೆ. ಆಧ್ಯಾತ್ಮಿಕತೆ ಎಂಬುದು ಗಾಳಿಗೋಪುರವಲ್ಲ; ಇದು ಬದುಕಿನ ಭವ್ಯಸೌಧಕ್ಕೆ ಆಧಾರವಾಗಿರುವ ಅಡಿಪಾಯ. ಕಣ್ಣಿಗೆ ಕಾಣದ ಬುನಾದಿಯ ಮೇಲೆಯೇ ಕಣ್ಣಿಗೆ ಕಾಣುವ ಗುಡಿಯ ಅಸ್ತಿತ್ವ ಇರುವುದಷ್ಟೆ; ಆಲಯದ ತಳಪಾಯಕ್ಕೂ, ನಡುವಿನ ಕಲಾವೈಭವಕ್ಕೂ, ಮೇಲಣ ಕಲಶದ ಹೊಳಪಿಗೂ ಒಂದು ಸಂಬಂಧಸೂತ್ರವಿದ್ದಾಗಲಷ್ಟೆ ಜೀವನ ಎಂಬ ಮೂರ್ತಿಗೆ ಶಕ್ತಿ, ಚೈತನ್ಯ, ಪೂಜೆ-ಪುರಸ್ಕಾರಗಳು. ಹೀಗೆ, ಹಲವು ಹಂತಗಳಲ್ಲಿ, ವಿವರಗಳಲ್ಲಿ ಹರಡಿಕೊಂಡಿರುವ ಜೀವನವನ್ನು ಸಮಗ್ರವಾಗಿ, ಸರಿಯಾಗಿ, ಸುಂದರವಾಗಿ, ಸುಲಭವಾಗಿ ಗ್ರಹಿಸುವ ಒಂದಾನೊಂದು ಶಕ್ತಿಯೇ, ಮನೋಧರ್ಮವೇ, ಕಾಣ್ಕೆಯೇ ನಮ್ಮ ಋಷಿ-ಮುನಿಗಳು ನಿರೂಪಿಸಿದ ಆಧ್ಯಾತ್ಮಿಕತೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಮೀಮಾಂಸೆಯನ್ನು ನಡಸಿದಾಗ ಋಷಿಗಳ ಸಮಗ್ರದೃಷ್ಟಿಯ ವೈಶಾಲ್ಯವು ನಮಗೆ ತಿಳಿಯುವುದು. ಬದುಕು ದಿಟವಾಗತಕ್ಕದ್ದು, ಒಳಿತಾಗತಕ್ಕದ್ದು, ಚೆಲುವಾಗತಕ್ಕದ್ದು—ಇದು ನಮ್ಮ ಪೂರ್ವಜರ ಜೀವನದ ಗುರಿಯಾಗಿದ್ದಿತು. ಈ ಗುರಿಯನ್ನು ಮುಟ್ಟಲು ದಾರಿಯಾಗಿ ಅವರು ಕಂಡುಕೊಂಡ ಮಹಾದರ್ಶನವೇ ಪುರುಷಾರ್ಥಚತುಷ್ಟಯ; ಇದರ ಸಾಫಲ್ಯದಲ್ಲಿಯೇ ವ್ಯಕ್ತಿಯ ಸಾರ್ಥಕ್ಯವೂ, ಸಮಾಜದ ಸಾರ್ಥಕ್ಯವೂ ಅಡಗಿದೆ. ಈ ಸಾರ್ಥಕಜೀವನದ ಶಿಖರಾರೋಹಣಕ್ಕೆ ಅವರು ಸಿದ್ಧಮಾಡಿಕೊಂಡ ಸೋಪಾನಗಳಾದರೂ ಎಷ್ಟೊಂದು! ಒಂದೇ ಗುರಿಗೆ ಅಸಂಖ್ಯವಾಗಿರುವ ಈ ಮಾರ್ಗಗಳನ್ನು ಶ್ರೀ ಅರವಿಂದರು ನಿಬ್ಬೆರಗಿನಿಂದಲೇ ಗುರುತಿಸುತ್ತಾರೆ, ಹೀಗೆ—

"..., spirituality itself does not flourish on earth in the void. When look at the past of India, what strikes us next is her stupendous vitality, her inexhaustible power of life and joy of life, her almost unimaginably prolific creativeness....., she has been creating abunduntly and incessantly, lavishly, with an inexhaustible

many-sideness, republics and kingoms and empires, philosophies and cosmogonies and sciences and creeds and arts and poems and all kinds of monuments, palaces and temples and public works, communities and societies and religions orders, laws and codes and rituals, physical sciences, psychic sciences, systems of Yoga, system of politics and administration, arts spiritual and arts worldly, trades, industries, fine-crafts,—the list is endless and in each item there is almost a plethora of activity.....There is no historical parallel for an intellectual labour and activity before the invention of printing and the facilities of modern science,..... it embraced all life, politics and society, all the arts from painting to dancing, all the sixty-four accomplishments, everything then known that could be useful to life or interesting to mind, ever, for instance, to such practical side minutive as the breeding and traning of horses and elephants, each of which had its art, its apparatus of technical terms, its copious literature.....On one side there is an insatiable curiosity, the desire of life to know itself in very detail, on the other a spirit of organisation and scrupulous order, ...the rational, ethical and aesthetic mind each at a high intensity of action, created the harmony of the ancient Indian culture."

—*The Renaissance in India*

ಇಲ್ಲಿ ಭಾರತೀಯರ ಸಿದ್ಧಿ-ಸಾಧನೆ-ಸಾಮರಸ್ಯಗಳ ಮಹಾದರ್ಶನವೇ ಅನಾವರಣಗೊಂಡಿದೆ. ಆಧ್ಯಾತ್ಮಿಕತೆಯ ನೆವದಲ್ಲಿ ಭಾರತೀಯರು ಪ್ರಪಂಚವನ್ನು ತೊರೆದವರಲ್ಲ; ಎಚ್ಚರದಲ್ಲಿ ಕನಸನ್ನೂ, ಕನಸಿನಲ್ಲಿ ಎಚ್ಚರವನ್ನೂ ಮರೆತವರಲ್ಲ. ಹೊರಗಣ ವಿವರಗಳನ್ನು ನಿರಾಕರಿಸುವುದೇ ಆಧ್ಯಾತ್ಮಿಕತೆಯಲ್ಲ; ಅದರ ಹಿಂದಿರುವ ಏಕತೆಯನ್ನೂ ವಸ್ತುವಿವೇಕವನ್ನೂ ಗ್ರಹಿಸಿ, ಅದರೊಂದಿಗೆ ಒಂದಾಗುತ್ತಲೇ ಕ್ರಮೇಣ ಬೇರೆಯಾಗುವ—ಭೂಮಿಯ ಸತ್ತ್ವವನ್ನು ಹೀರಿಕೊಳ್ಳುತ್ತ, ಕರಟದ ರಕ್ಷಣೆ ಯಲ್ಲಿಯೇ ನೀರು ಕೊಬ್ಬರಿಯಾಗಿ ಮಾರ್ಪಡುತ್ತ, ಕೊನೆಗೆ ಕರಟದಿಂದ ಬೇರ್ಪಡುವಂಥ—ಪ್ರಕ್ರಿಯೆಯೇ ಆಧ್ಯಾತ್ಮಿಕತೆ; ಎಂದರೆ ಫಲಾಪೇಕ್ಷೆಯಿಲ್ಲದ ಕರ್ಮಾನುಷ್ಠಾನ. ಇಂಥ ಸಹಜಜೀವನವೇ ಸ್ವಾತಂತ್ರ್ಯ ಎನಿಸಿಕೊಳ್ಳುವುದು. ಜೀವನದ ಎಲ್ಲ ಹಾದಿಗಳೂ ಈ ಸ್ವಾತಂತ್ರ್ಯದ ಕಡೆಗೆ ನಮ್ಮನ್ನು ಒಯ್ಯುವಂತೆ ಮಾಡುವುದೇ ಭಾರತೀಯತೆ.

"..... this science [*Adhyātma-vidya*] recognizes the unity of all life—one source, one essence, and, one goal—and regards the realisation of this unity as the highest good, bliss, salvation, freedom, the final purpose of life. This is for Hindu thinkers eternal life; not an eternity in time, but the recognition here and now of All things in the Self and Self in All. This inseperable unity of the material and spiritual world is made the foundation of the Indian culture and determines the whole character of her social ideals."

—*Dance of Shiva*

ಗೌರವಿಸು ಜೀವನವ, ಗೌರವಿಸು ಚೇತನವ ।
ಆರದೋ ಜಗವೆಂದು ಭೇದವೆಣಿಸದಿರು ॥
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ ।
ದಾರಿಯಾತ್ಮೋನ್ನತಿಗೆ—ಮಂಕುತಿಮ್ಮ ॥

ಒಮ್ಮೆ ಹೂದೋಟದಲಿ, ಒಮ್ಮೆ ಕೆಳೆಕೂಟದಲಿ ।
ಒಮ್ಮೆ ಸಂಗೀತದಲಿ, ಒಮ್ಮೆ ಶಾಸ್ತ್ರದಲಿ ॥
ಒಮ್ಮೆ ಸಂಸಾರದಲಿ, ಮತ್ತೊಮ್ಮೆ ಮೌನದಲಿ ।
ಬ್ರಹ್ಮಾನುಭವಿಯಾಗೊ—ಮಂಕುತಿಮ್ಮ ॥

—ಇದು ಭಾರತೀಯ ಚಿತ್ತ, ಮಾನಸಿಕತೆ; ಇದೇ ಭಾರತೀಯಹೃದಯ. ಈ ವಿಧವಾಗಿ, ಎಲ್ಲದರಲ್ಲೂ ಎಲ್ಲೆಲ್ಲೂ ಪರತತ್ತ್ವವನ್ನು ಕಂಡ ಋಷಿಮನಸ್ಸು ಹೀಗೆ ಹಾಡಿದ್ದು ಸಹಜವಾಗಿಯೇ ಇದೆ—

ಪಶ್ಯೇಮ ಶರದಃ ಶತಮ್ । ಜೀವೇಮ ಶರದಃ ಶತಮ್ ।
ಶೃಣಯಾಮ ಶರದಃ ಶತಮ್ । ಪ್ರ ಬ್ರವಾಮ ಶರದಃ ಶತಮ್ ।
ಅದೀನಾಃ ಸ್ಯಾಮ ಶರದಃ ಶತಮ್ । ಭೂಯಶ್ಚ ಶರದಃ ಶತಾತ್ ॥

—*ಯಜುರ್ವೇದ, 36. 24*

(ನೂರು ಸಂವತ್ಸರಗಳು ನಾವು ನೋಡೋಣವಾಗಲಿ; ನೂರು ಸಂವತ್ಸರಗಳು ನಾವು ಬಾಳೋಣವಾಗಲಿ; ನೂರು ಸಂವತ್ಸರಗಳು ನಾವು ಕೇಳೋಣವಾಗಲಿ; ನೂರು ಸಂವತ್ಸರಗಳು ಚೆನ್ನಾಗಿ ನಾವು ಮಾತಾಡೋಣ ವಾಗಲಿ; ನೂರು ಸಂವತ್ಸರಗಳು ತಲೆಯೆತ್ತಿ ಬದುಕೋಣವಾಗಲಿ. ಇವು ನೂರು ಸಂವತ್ಸರಗಳನ್ನೂ ದಾಟಲಿ.)

ಅನೇಕದಲ್ಲಿರುವ ಏಕತೆಯನ್ನು ಕಂಡು ಬದುಕಿನ ವೈವಿಧ್ಯವನ್ನು ನಮ್ಮ ಪ್ರಾಚೀನರು ಪೂರ್ಣವಾಗಿ ಸ್ವೀಕರಿಸಿದರು, ಸವಿದರು. ತುಂಬು ಜೀವನಕ್ಕಾಗಿಯೇ ಅವರು ಪರಿತಪಿಸಿದರು, ಪ್ರಾರ್ಥಿಸಿದರು. ಹೀಗೆಂದು ಬದುಕಿನ ವಿವರಗಳಿಗೆ ಸೋತು, ದಿಟವಾದ ಅದರ ಮೂಲತತ್ತ್ವವನ್ನು ಮರೆತವರಲ್ಲ—ಅವರು ಅಲೆಗಳ ಹೊಡೆತಕ್ಕೆ ಸಿಕ್ಕು ಮುಳುಗಿದವರಲ್ಲ, ಅವುಗಳ ನೆರವಿನಿಂದಲೇ ಸಾಗರವನ್ನು ದಾಟಿದವರು—ಎಂಬುದನ್ನೂ ನಾವು ಮರೆಯಬಾರದು.

ಚಕ್ಷುರ್ ನೋ ಧೇಹಿ ಚಕ್ಷುಷೇ ಚಕ್ಷುರ್ ವಿಖ್ಯೈ ತನೂಭ್ಯಃ ।
ಸಂ ಚೇದಂ ವಿ ಚ ಪಶ್ಯೇಮ ॥

—ಋಗ್ವೇದ, 10.158.4

(ಎಲೈ ಸೂರ್ಯನೇ, ನಾವು ವಸ್ತುಗಳ ರೂಪಗಳನ್ನು ನೋಡುವಂತಾಗಲು ನಮಗೆ ನಿನ್ನ ತೇಜಸ್ಸನ್ನೂ ದೃಷ್ಟಿಯನ್ನೂ ಕೊಡು. ಈ ಸಮಸ್ತ ಜಗತ್ತಿನಲ್ಲಿರುವ ವಿವಿಧ ವಸ್ತುಗಳನ್ನು ನಾವು ಚೆನ್ನಾಗಿ ನೋಡುವಂತಾಗಲಿ).

ಇಲ್ಲಿ ಸೂರ್ಯನಿಂದ ಕೇವಲ ಹೊರಗಣ್ಣಿನ ನೋಟವನ್ನಷ್ಟೆ ಬಯಸಿಲ್ಲ, ಒಳಗಣ್ಣಿನ ದರ್ಶನಕ್ಕೂ ಪ್ರಾರ್ಥಿಸಲಾಗಿದೆ.

ಭಾರತೀಯಮನಸ್ಸು ಎಂದಿಗೂ ಸ್ವಾರ್ಥದಿಂದ ಪ್ರವರ್ತಿತವಾಗದು. ಸಾಂಘಿಕಹಿತದಲ್ಲಿಯೇ ತನ್ನ ಹಿತವೂ ಅಂತರ್ಗತವಾಗಿದೆ ಎಂಬುದರಲ್ಲಿಯೇ ಭಾರತೀಯತೆಗೆ ವಿಶ್ವಾಸ. ಪುರುಷಾರ್ಥ ಹಾಗೂ ಜೀವನ್ಮುಕ್ತನ ಕಲ್ಪನೆಯ ಹಿಂದಿರುವ ಸ್ವಾರಸ್ಯವನ್ನೂ ವೈಶಾಲ್ಯವನ್ನೂ ಇಲ್ಲಿ ನೆನೆಯತಕ್ಕದ್ದು. ಸಮಾಜಾಭಿಮುಖವಾದ ನೆಲೆಯಲ್ಲಿಯೇ ಹೊರಟದ್ದು ಈ ಪ್ರಾರ್ಥನೆ—

ಸಂ ಗಚ್ಛಧ್ವಂ ಸಂ ವದಧ್ವಂ ಸಂ ವೋ ಮನಾಂಸಿ ಜಾನತಾಮ್ ।
ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ
ಸಮಾನಮ್ ಅಸ್ತು ವೋ ಮನೋ ಯಥಾ ವಃ ಸುಸಹಾಸತಿ ॥

—ಋಗ್ವೇದ, 10.191.2-4; ಅಥರ್ವವೇದ, 6.64.1-3

(ಯಾವಾಗಲೂ ಐಕ್ಯದಿಂದಿರಿ, ಜೊತೆಯಲ್ಲಿಯೇ ನಡೆಯಿರಿ, ಒಂದೇ ಅಭಿಪ್ರಾಯದಿಂದ ಮಾತನಾಡಿರಿ, ಮನಸ್ಸುಗಳು ಒಂದಾಗಿರಲಿ. ಪರಸ್ಪರ ಏಕತೆಯು ಮೂಡುವುದಕ್ಕಾಗಿ ನಿಮ್ಮ ಉದ್ದೇಶವೂ, ನಿಮ್ಮ ಅಪೇಕ್ಷೆಗಳೂ, ನಿಮ್ಮ ಆಲೋಚನೆಗಳೂ ಒಂದೇ ಆಗಿರಲಿ.)

ಜಗದ ಕಲ್ಯಾಣದೊಳಗಾತ್ಮ ಕಲ್ಯಾಣವನು ।
ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು ॥
ಜಗದ ಜೀವಿತದಿ ನಿಜಜೀವಿತದ ಪೂರ್ತಿಯನು ।
ಬಗೆಯಲರಿತವನೆ ಸುಖಿ—ಮಂಕುತಿಮ್ಮ ॥

ಹೀಗೆಂದು, ತನ್ನತನವನ್ನು ಎಂದರೆ, ಆತ್ಮೋನ್ನತಿಯನ್ನು ತೊರೆಯುವ ಯಾವೊಂದು ಕಲಾಪವೂ ಸೊಗಯಿಸದು; 'ತನ್ನ' ಆರೋಗ್ಯದಲ್ಲಿಯೇ ಸಮಾಜದ ಆರೋಗ್ಯವೂ ಅವಲಂಬಿತವಾಗಿದೆ. ಈ ನೆಲೆಯಿಂದ ಹೊರಟ ಮಹಾಭಾರತದ ಈ ಆದರ್ಶವೂ ಇಲ್ಲಿ ಮನನೀಯ—

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥

(ಕುಟುಂಬದ ಒಳಿತಿಗಾಗಿ ವ್ಯಕ್ತಿಯನ್ನೂ, ಊರಿನ ಒಳಿತಿಗಾಗಿ ಕುಟುಂಬವನ್ನೂ, ನಾಡಿನ ಒಳಿತಿಗಾಗಿ ಊರನ್ನೂ, ತನ್ನ ಆತ್ಮದ ಒಳಿತಿಗಾಗಿ ಈ ಭೂಮಿಯನ್ನೂ ಬಿಡತಕ್ಕದ್ದು.)

ಹೊಣೆಗಾರಿಕೆ ಮತ್ತು ಸ್ವಾತಂತ್ರ್ಯ—ಇವೆರಡರ ನಡುವೆ ಸಾಮರಸ್ಯವನ್ನು ಸಾಧಿಸಿದ್ದು ಭಾರತೀಯತೆಯ ಅನನ್ಯತೆಯೇ ಹೌದು.

ಭಾರತೀಯತೆಯನ್ನು ಎತ್ತಿಹಿಡಿದಿರುವ ಈ ಲೋಕಕಲ್ಯಾಣಕರ ಭಾವ ಬುದ್ಧಿಗಳಿಗೆ ಯಾವ ವಿಧದ ಭೇದಭಾವಗಳ ಸಂಕೋಲೆಗಳೂ ಇರದು; ಎಲ್ಲೆಲ್ಲೂ ಮಂಗಳಕರವಾದ ದನಿಯು ಎಂದೆಂದೂ ಮೊಳಗುತ್ತಿರಬೇಕೆಂಬುದೇ ಈ ನೆಲದ ತುಡಿತವಾಗಿರುವುದು—

ಯಥೇಮಾಂ ವಾಚಂ ಕಲ್ಯಾಣೀಮಾವದಾನಿ ಜನೇಭ್ಯಃ । ಬ್ರಹ್ಮರಾಜನ್ಯಾಭ್ಯಾಂ
ಶೂದ್ರಾಯ ಚಾರ್ಯಾಯ ಚ ಸ್ವಾಯ ಚಾರಣಾಯ ಚ ॥

—*ಯಜುರ್ವೇದ, 26.2*

(ನನ್ನೀ ಮಂಗಳಕರವಾದ ಮಾತುಗಳು ಎಲ್ಲರಿಗೂ ತಲಪಲಿ—ಬ್ರಾಹ್ಮಣರಿಗೆ, ಕ್ಷತ್ರಿಯರಿಗೆ, ಶೂದ್ರರಿಗೆ ಮತ್ತು ವೈಶ್ಯರಿಗೆ; ಮಾತ್ರವಲ್ಲ, ನನ್ನವರಿಗೆ, ಹೊರಗಿನವರಿಗೆ ಕೂಡ ಇವು ಮುಟ್ಟಲಿ.)

ಆದರೆ ತನ್ನ ಹಿತಸಾಧನೆಯಲ್ಲಾಗಲೀ ಪರಿಸರದ ಹಿತಸ್ಥಾಪನೆಯಲ್ಲಾಗಲೀ

ಅಕ್ರಮಗಳಿಗೆ ಆಸ್ಪದ ಕೊಡದ ಋತಪ್ರಜ್ಞೆಯು ಭಾರತೀಯತೆಯ ವ್ರತಬುದ್ಧಿಗೆ ಮತ್ತೊಂದು ನಿದರ್ಶನ—

ಮಧು ವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ ।

—ಋಗ್ವೇದ, 1.90

(ಋತದ ಹಾದಿಯಲ್ಲಿ ನಿರತನಾಗಿರುವವನಿಗೆ ವಾಯುಗಳು ಮಧುರವಾದ ಕರ್ಮಫಲಗಳನ್ನು ಸುರಿಸುತ್ತವೆ. ಪ್ರವಾಹರೂಪದಲ್ಲಿರುವ ನದಿಗಳು ತಮ್ಮ ಮಧುರವಾದ ರಸವನ್ನು ಹರಿಸುತ್ತವೆ.)

ಹೀಗೆಂದು ಉದಾತ್ತತೆ, ಆಧ್ಯಾತ್ಮಿಕತೆ, ಸರಸತೆ, ಸರಳತೆ, ಸಭ್ಯತೆ— ಇವೆಲ್ಲವೂ ಭಾರತಕ್ಕಷ್ಟೆ ಸೀಮಿತವಾದ ವಿವರಗಳೆಂಬುದನ್ನು ದಿಟವಾದ ಭಾರತೀಯನೆಂದೂ ಯೋಚಿಸಲಾರ; ಇಂಥ ಹಠಬುದ್ಧಿಗೆ ಅವನಲ್ಲಿ ಜಾಗವೇ ಇರದು. ಎಲ್ಲೆಲ್ಲೂ ಇರುವುದು ಒಂದೇ ತತ್ತ್ವ ಎಂದಾದ ಮೇಲೆ ಶ್ರೇಷ್ಠ-ಕನಿಷ್ಠಗಳ ಗೊಡವೆಗೆ ಅವಕಾಶವಾದರೂ ಏಕಿದ್ದೀತು?

ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ । *—ಋಗ್ವೇದ, 1.89.1*

(ಎಲ್ಲ ಕಡೆಯಿಂದಲೂ ಒಳ್ಳೆಯ ವಿಚಾರಗಳು ನಮ್ಮತ್ತ ಬರಲಿ.)

ಯೋ ದೇವಾನಾಂ ನಾಮಧಾ ಏಕ ಏವ *—ಋಗ್ವೇದ, 10.82.3*

(ಎಲ್ಲ ದೇವತೆಗಳ ನಾಮನಿರ್ದೇಶಕನಾಗಿರುವ ಅವನು ಒಬ್ಬನೇ ಆಗಿದ್ದಾನೆ.)

ಆಕಾಶಾತ್ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್ ।
ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ॥

(ಆಗಸದಿಂದ ಬಿದ್ದ ನೀರು ಹೇಗೆ ಸಮುದ್ರವನ್ನು ಸೇರುವುದೋ ಹಾಗೆಯೇ ಎಲ್ಲ ದೇವರಿಗೂ ಸಲ್ಲಿಸಿದ ನಮನಗಳು ಕೇಶವನಿಗೇ ಸೇರುತ್ತವೆ.)

ವೈಶ್ವಿಕತತ್ತ್ವದ ಅನುಸಂಧಾನವೇ ಭಾರತೀಯರ ನಿತ್ಯಪ್ರಾರ್ಥನೆ. ಜಗತ್ತಿನ ಹಲವು ಸಂಸ್ಕೃತಿಗಳನ್ನು, ತತ್ತ್ವಶಾಸ್ತ್ರದ ಪ್ರಬೇಧಗಳನ್ನು ಅವುಗಳ ಮೂಲಗ್ರಂಥಗಳಲ್ಲಿಯೇ ಅಧ್ಯಯನ ಮಾಡಿದ ಆನಂದ ಕುಮಾರಸ್ವಾಮಿಯವರೆನ್ನುತ್ತಾರೆ—

"All that India can offer to the world proceeds from her philosophy. This philosophy is not, indeed, unknown to others—

it is equally the gospel of Jesus and of Blake, Lao Tze, and Rumi—but nowhere else has it been made essential basis of sociology and education. Where the Indian mind differs from the average mind of modern Europe is in its view of the value of philosophy. In Europe and America the study of philosophy is regarded as an end in itself;..... In India, on the contrary, philosophy is not regarded primarily as a mental gymnastic, but rather and with deep religious conviction, as our salvation (*moksha*) from the ignorance (*avidya*) which forever hides from our eyes the vision of reality. Philosophy is the key to the map of life, by which we are setforth the meaning of life and the means of life and the means of attaining its goal."

—*Dance of Shiva*

ಒಂದನ್ನಂತೂ ಧೈರ್ಯದಿಂದ ಹೇಳಬಹುದು—ಬೇರೆಡೆ ವಿರಳವಾಗಿರುವ ಜಿಜ್ಞಾಸೆ, ತತ್ತ್ವಾನ್ವೇಷಣೆ, ಆಧ್ಯಾತ್ಮಿಕತೆ ಭಾರತದಲ್ಲಿ ಸಹಜವಾಗಿದ್ದಿತು; ನಮಗೆ ಅಕ್ಕಿಯಲ್ಲಿ ಕಲ್ಲನ್ನು ಹುಡುಕುವುದು ಸುಲಭವೋ, ಕಲ್ಲಿನಲ್ಲಿ ಅಕ್ಕಿಯನ್ನು ಹುಡುಕುವುದು ಸುಲಭವೋ—ಎಂಬ ನ್ಯಾಯದಂತೆ ವ್ಯಾಪಕತೆಯಿಂದಾಗಿ 'ಆಧ್ಯಾತ್ಮಿಕತೆ ಎಂದರೆ ಭಾರತ'—ಎಂಬ ಸಮೀಕರಣವು ಮೂಡುತ್ತದೆ, ಅಷ್ಟೆ. ಮಾತ್ರವಲ್ಲ, ಭಾರತದಲ್ಲಿ ಧರ್ಮವನ್ನು 'ಭಾರತೀಯಧರ್ಮ' ಎನ್ನದೆ 'ಸನಾತನಧರ್ಮ' ಎಂಬ ಅಭಿಧಾನದಿಂದಲೇ ವ್ಯವಹರಿಸುವುದನ್ನೂ ಇಲ್ಲಿ ನೆನೆಯತಕ್ಕದ್ದು. ಆದುದರಿಂದಲೇ 'ಎಲ್ಲರ ರೋಗವನ್ನೂ ಪರಿಹರಿಸಬಲ್ಲಂಥ, ಎಲ್ಲರ ಸಮಸ್ಯೆಗಳನ್ನೂ ಮಾಯಮಾಡಿಬಿಡುವಂಥ ಮಂತ್ರದಂಡವೇ ಭಾರತೀಯತೆ' ಎಂಬಂಥ ಅಹಂಕಾರವೂ ಭಾರತೀಯತೆಗೆ ಇರದು. ಆನಂದ ಕುಮಾರಸ್ವಾಮಿಯವರ ಮಾತುಗಳೇ ಇಲ್ಲಿಯೂ ಸಲ್ಲುತ್ತವೆ—

"Every race must solve its own problems, and those of its own day. I do not suggest that the ancient Indian solutions of the special Indian problems, though its lessons may be many and valuable, can be directly applied to the modern conditions. What I do suggest is that the Hindus grasped more firmly than others the fundamental meaning and purpose of life, and more deliberately than others organized society with a view to the attainment of the fruit of life; and this organization was desiged, not for the advantage of a single class, but, to use a modern formula, to take from each according to his capacity, and to give each according to

his needs..... We must not judge of Indian society, especially Indian society in its present moment of decay, as if it actually realised the Brāhmanical social ideas; yet even with all its imperfections Hindu society as it survives will appear to many to be superior to any form of social organization attained on a large scale anywhere else, and infinitely superior to the social order which we known as "modern civilizations." But even if it were impossible to maintain this view—and a majority of Europeans and of English-educated Indians certaily believe to the contrary—what nevertheless remains as the most conspicuous special character of the Indian culture, and its greatest significance for the modern world, is the evidence of a constant effort to understand the meaning and the ultimate purpose of life, and a purposive organization of society in harmony with that order, and with a view to the attainment of the purpose.

—*Dance of Shiva*

ನಮ್ಮ ಜೀವನದ ಸಾರ್ಥಕತೆಗೆ ಅತ್ಯಂತ ಆವಶ್ಯಕವಾಗಿರುವ ಭಾರತೀಯ ಚಿತ್ತ-ಮಾನಸಿಕತೆ ಮತ್ತು ಕಾಲವನ್ನು—ಎಂದರೆ, ಭಾರತೀಯಪ್ರಜ್ಞೆಯನ್ನು ನಮಗೆ ಹತ್ತಿರವಾಗಿಸುವ, ಭಾರತೀಯತೆಯನ್ನು—ಎಂದರೆ ನಮ್ಮತನವನ್ನು, ನಮ್ಮ ಸ್ವ-ಭಾವವನ್ನು ನಮಗೇ ಸಾಕ್ಷಾತ್ಕರಿಸಿಕೊಡುವ ಸಾರಸ್ವತಯಜ್ಞವೇ 'ಭಾರತತೀರ್ಥ'.

'ತೀರ್ಥ' ಎಂದ ಕೂಡಲೇ ನಮಗೆ ಮೊದಲಿಗೆ ಸ್ಫುರಿಸುವ ಕಲ್ಪನೆಯೆಂದರೆ 'ಪುಣ್ಯಕ್ಷೇತ್ರ', 'ಯಾತ್ರಾಸ್ಥಳ'. ಸಾಮಾನ್ಯವಾದ ಪ್ರಯಾಣಕ್ಕೂ, ಯಾತ್ರಾಸ್ಥಳ ಸಂದರ್ಶನಕ್ಕೂ ವ್ಯತ್ಯಾಸವಿದೆ; ತೀರ್ಥಕ್ಷೇತ್ರಕ್ಕೆ ಹೋಗಿ-ಬರುವುದರಿಂದ ನಮ್ಮ ಶರೀರ-ಮನಸ್ಸು-ಬುದ್ಧಿಗಳಿಗೆ ಏಕಕಾಲಕ್ಕೆ ಶುದ್ಧಿಯೂ ದೊರಕುತ್ತದೆ, ಬಲವೂ ದೊರಕುತ್ತದೆ. ನಮ್ಮ ಹುಟ್ಟನ್ನೇ ಒಂದು ಪ್ರಯಾಣವಾಗಿ ಕಂಡು, ಭಾರತವೇ ಒಂದು ತೀರ್ಥಕ್ಷೇತ್ರ—ಎಂದು ನಮ್ಮಲ್ಲಿ ಮೂಡುವ ಭಾವಸಮೃದ್ಧಿಯೇ 'ಭಾರತತೀರ್ಥ'ಕ್ಕೆ ಪೀಠಿಕೆಯೆನ್ನಬಹುದು. 'ಭಾರತದಲ್ಲಿ ಜನಿಸಿದವರೇ ಧನ್ಯರು' ಎಂದು ಸ್ವತಃ ದೇವತೆಗಳೇ ಹಾಡುತ್ತಾರೆ—ಎಂದು ವಿಷ್ಣುಪುರಾಣವೇ ಒಕ್ಕಣಿಸುವುದು.

'ತೀರ್ಥ' ಎಂಬುದಕ್ಕೆ ಶಾಸ್ತ್ರ ಎಂದೂ ಹೆಸರಿದೆ. ಯಾವುದು ಶಾಸನ ಮಾಡುವುದೋ, ಜೀವಕ್ಕೆ ತ್ರಾಣವನ್ನು ಕೊಡುವುದೋ, ಪ್ರವೃತ್ತಿ-ನಿವೃತ್ತಿ ಮಾರ್ಗಗಳನ್ನೂ, ನಿತ್ಯಾನಿತ್ಯವಸ್ತುವಿವೇಕವನ್ನೂ ಉಪದೇಶಿಸುತ್ತದೆಯೋ ಅಂಥದ್ದು

ಶಾಸ್ತ್ರ ಎಂದೆನಿಸಿಕೊಳ್ಳುವುದು. ಈ ನೆಲೆಯಿಂದ ಭಾರತವೇ ನಮ್ಮ ಪಾಲಿಗೆ ಒಂದು ಶಾಸ್ತ್ರವಾಗಿ ಒದಗಿಬರುವಂಥದು ಎಂಬುದು 'ಭಾರತತೀರ್ಥ'ದ ಆಶಯ.

'ಯಜ್ಞ', 'ಯಾಗ'—ಎಂಬ ಅರ್ಥವೂ 'ತೀರ್ಥ'ಕ್ಕಿದೆ. 'ಯಜ್ಞೋ ವೈ ವಿಷ್ಣುಃ' *(ತೈತ್ತಿರೀಯಸಂಹಿತಾ 1.7.4)* 'ಯಜ್ಞವೆಂದರೆ ವಿಷ್ಣುವೇ'; 'ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್' *(ಭಗವದ್ಗೀತಾ 3.15)*—ಮುಂತಾದ ವಾಕ್ಯಗಳಿಂದ ಭಾರತೀಯ ಪರಂಪರೆಯಲ್ಲಿರುವ ಯಜ್ಞಪಾರಮ್ಯವನ್ನು ಕಾಣಬಹುದು. ಯಜ್ಞತತ್ತ್ವವು ಪ್ರಧಾನವಾಗಿ ದ್ವಿಮುಖತತ್ತ್ವವನ್ನು ಎತ್ತಿಹಿಡಿಯುತ್ತದೆ; ಇದು ಬಹಿರ್ಮುಖದಲ್ಲಿ ದಾನಶೀಲತೆಯೆಂಬ ಬೆಳಕಾಗಿಯೂ, ಅಂತರ್ಮುಖದಲ್ಲಿ ತಪಸ್ಸೆಂಬ ಕಾವಾಗಿಯೂ ಪ್ರವೃತ್ತಿ-ನಿವೃತ್ತಿಮಾರ್ಗಗಳೆರಡಕ್ಕೂ ಸಾಧನವಾಗಿದೆ. ಯಜ್ಞವೆಂದರೆ ವಿತರಣಶೀಲತೆಯೇ ಹೌದು—'ಯಜ್ಞಶಿಷ್ಟಾಶಿನಃ ಸನ್ತೋ ಮುಚ್ಯನ್ತೇ ಸರ್ವಕಿಲ್ಬಿಷೈಃ' *(ಭಗವದ್ಗೀತಾ 3.13)* 'ಯಜ್ಞದಲ್ಲಿ ಉಳಿದುದನ್ನು ತಿನ್ನುವವರು ಎಲ್ಲ ಪಾಪಗಳಿಂದಲೂ ಮುಕ್ತರಾಗುವರು'; 'ಯಜ್ಞಂ ತಪಃ' *(ತೈತ್ತಿರೀಯ ಆರಣ್ಯಕ)*, 'ಯಜ್ಞವೆಂದರೆ ತಪಸ್ಸು'—ಮುಂತಾದ ವಾಕ್ಯಗಳನ್ನೂ ನೋಡತಕ್ಕದ್ದು. ಯಜ್ಞಕಲಾಪದಲ್ಲಿ ಹವಿಸ್ಸನ್ನು 'ನ ಮಮ'—ನನ್ನದಲ್ಲ—ಎಂದು ಆ ಪರತತ್ತ್ವಕ್ಕೆ ಸಮರ್ಪಣಭಾವದಿಂದ ಸಲ್ಲಿಸುವ ವಿಧಿಯ ಹಿನ್ನೆಲೆಯಲ್ಲಿರುವ ಅಹಂಕಾರ-ಮಮಕಾರಗಳ ದಮನೋದ್ಯಮವನ್ನೂ ನಾವಿಲ್ಲಿ ಮನನ ಮಾಡತಕ್ಕದ್ದು. ಹೀಗೆ ಯಜ್ಞವಿಧಿಯು ದಾನ, ತಪಸ್ಸು, ಶ್ರದ್ಧೆ, ಭಕ್ತಿ, ಕರ್ಮ, ಉಪಾಸನೆ, ಸಹಬಾಳ್ವೆ, ಸಾಮಾಜಿಕಬದ್ಧತೆ, ತ್ಯಾಗಶೀಲತೆ, ಕೃತಜ್ಞತೆ ಮತ್ತು ಜ್ಞಾನಗಳ ಒಕ್ಕೂಟವಾಗಿ ಆತ್ಮೋನ್ನತಿಯನ್ನೂ ಲೋಕಕಲ್ಯಾಣವನ್ನೂ ಸಂಕೇತಿಸುತ್ತದೆ. ಹಲವು ಸ್ತರದ ಅರ್ಥಪರಂಪರೆಯನ್ನು ಹೊಂದಿರುವ ಯಜ್ಞಕಲ್ಪನೆಯಲ್ಲಿ ಒಂದೆನಿಸಿರುವ ಜ್ಞಾನಯಜ್ಞದ ಅದ್ಭುತ ವಿವರಣೆಯನ್ನು ನಿದರ್ಶನಕ್ಕೆ ಇಲ್ಲಿ ನೋಡತಕ್ಕದ್ದು—

"ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ ಶ್ರದ್ಧಾಃ ಪತ್ನೀ ಶರೀರಮಿಧ್ಮಂ... ಹೃದಯಂ ಯೂಪಃ... ಯದಶ್ನಾತಿ ತದ್ಧವಿರ್ಯತ್ಪಿಬತಿ ತದಸ್ಯ ಸೋಮಪಾನಂ ಯದ್ರಮತೇ ತದುಪಸದೋ ಯತ್ಸಂಚರತ್ಯುಪವಿಶತ್ಯುತ್ತಿಷ್ಠತೇ ಚ ಸ ಪ್ರವರ್ಗ್ಯೋ... ಯನ್ಮರಣಂ ತದವಭೃಥಃ ... ಏತದ್ವೈ ಜರಾಮರ್ಯಮಗ್ನಿ ಹೋತ್ರಂ ಸತ್ರಂ ॥"

—*ಮಹಾನಾರಾಯಣೋಪನಿಷತ್ತು*

[ವಿದ್ವಾಂಸನಾದವನು ಮಾಡುವ ಯಜ್ಞಕ್ಕೆ ಆವನ ಅಂತರಾತ್ಮವೇ ಯಜಮಾನ (ಕರ್ತ); ಆವನ ಶ್ರದ್ಧೆಯೇ ಯಜಮಾನಿ! ಆವನ ದೇಹವೇ ಸಮಿತ್ತು; ಆವನ ಎದೆಯೇ

ಬಲಿಸ್ತಂಭ; ಅವನು ತಿಂದು ಕುಡಿಯುವುದೆಲ್ಲ ಸೋಮರಸ; ಅವನು ಪಡುವ ಎಲ್ಲ ಸುಖಗಳೂ ಉಪಸದವೆಂಬ ಕರ್ಮ; ಅವನು ಕುಳಿತು ಎದ್ದು ಓಡಾಡುವುದೆಲ್ಲವೂ ಪ್ರವರ್ಗ್ಯವೆಂಬ ಕರ್ಮ; ಸಾವು ಅವನ ಅವಭೃಥಸ್ನಾನ; ಇಂತಹುದು ಅವನ ಯಜ್ಞ.]

(ಅನುವಾದ: ಡಿವಿಜಿ)

ಭಾರತೀಯತೆಯೇ ಸಕಲಹಿತಸಾಧಕ-ಭಾವವೈಶಾಲ್ಯದ ದಿಟವಾದ ಯಜ್ಞ—ಎಂಬುದು 'ಭಾರತತೀರ್ಥ'ದ ಕಲ್ಪನೆಯಲ್ಲಿರುವ ಸ್ವಾರಸ್ಯ.

'ತೀರ್ಥ' ಎಂದರೆ ಉಪಾಧ್ಯಾಯ, ಗುರು, ಶಿಕ್ಷಕ, ಆಚಾರ್ಯ—ಎಂದೂ ಅರ್ಥವುಂಟು. ನಮ್ಮನ್ನು ಯಾರು ತಿದ್ದುವರೋ, ಅಜ್ಞಾನದಿಂದ ಜ್ಞಾನದ ಕಡೆಗೆ ಒಯ್ಯುವರೋ, ಬದುಕಿಗೆ ಬೆಳಕಾಗುವರೋ ಅವರು ಗುರುಗಳು. ಭಾರತೀಯ ಪರಂಪರೆಯಲ್ಲಿ ಆಚಾರ್ಯಪದವಿಗೆ ತುಂಬ ಎತ್ತರದ ಸ್ಥಾನವಿದೆ. ಆಚಾರ್ಯರು ಯಾರು? 'ಯಾರು ಕೇವಲ ಪುಸ್ತಕಪಾಂಡಿತ್ಯಮಾತ್ರವಲ್ಲದೆ ಶಾಸ್ತ್ರವಿಷಯವನ್ನು ತಮ್ಮ ನಡೆ-ನುಡಿಗಳಲ್ಲೂ ಅನುಸರಿಸಿ ಆದರ್ಶದ ಮೇಲ್ಪಂಕ್ತಿಯನ್ನು ಹಾಕಿಕೊಡುವರೋ ಅಂಥವರು ಆಚಾರ್ಯರು.' ಹೀಗೆ ಭಾರತವೂ ತಾನು ಅನ್ವಯಿಸಿಕೊಂಡಿರುವ ಋತಬದ್ಧವಾದ ಮಾರ್ಗವನ್ನು ವಿಶ್ವಕ್ಕೇ ಕಲಿಸಬಲ್ಲ ಗುರು—ಎಂಬ ಸ್ವಾರಸ್ಯ ಈ 'ಭಾರತತೀರ್ಥ'ದಲ್ಲಿ ಗರ್ಭಿತವಾಗಿದೆ.

ಸಂನ್ಯಾಸಿಗಳಿಗೆ ತಮ್ಮ ಸಂನ್ಯಾಸನಾಮದೊಂದಿಗೆ ಮತ್ತೊಂದು ಹೆಸರನ್ನೂ ಸೇರಿಸುವ ದಶನಾಮವ್ಯವಸ್ಥೆಯೊಂದು ನಮ್ಮಲ್ಲಿ ರೂಢಿಯಿದೆ; ಈ ನಾಮಸಮೂಹದಲ್ಲಿ 'ತೀರ್ಥ'ವೂ ಸೇರಿರುವುದನ್ನು ಗಮನಿಸತಕ್ಕದ್ದು. ಸಂನ್ಯಾಸವೆಂದರೆ ಅದು ಸ್ವಾತಂತ್ರ್ಯಕ್ಕೂ ಜ್ಞಾನನಿಷ್ಠೆಗೂ ಅಲೌಕಿಕತೆಗೂ ವಿಶ್ವಾತ್ಮಭಾವಕ್ಕೂ ಸಂಕೇತ. ಭಾರತೀಯತೆಯ ಸಹಜಮನೋಧರ್ಮವೇ ಇಂಥ ಸಂನ್ಯಾಸಭಾವ—ಎಂಬ ವಿಶಾಲತಾತ್ಪರ್ಯವೇ 'ಭಾರತತೀರ್ಥ'ದಲ್ಲಿದೆ.

ಜಲ, ಎಂದರೆ ನೀರಿಗೂ 'ತೀರ್ಥ'ವೆನ್ನುತ್ತಾರೆ. ಆದರೆ 'ನೀರು' 'ತೀರ್ಥ'ವಾಗಲು ಅನಿವಾರ್ಯವಾದದ್ದು ನಮ್ಮ ಭಾವಶುದ್ಧಿ; ಲೌಕಿಕವನ್ನು ಅಲೌಕಿಕಕ್ಕೂ, ಸಾಮಾನ್ಯವಾದುದನ್ನು ವಿಶೇಷತೆಗೂ ಏರಿಸುವ ಭಾವೋನ್ನತಿಯ ಮಹಾಪರಿವರ್ತನಶೀಲತೆಯೇ 'ನೀರು' 'ತೀರ್ಥ'ವಾಗುವ ಪ್ರಕ್ರಿಯೆಯಲ್ಲಿದೆ. ಭಾರತೀಯಪ್ರಜ್ಞೆಯನ್ನು ಕೈಹಿಡಿದು ನಡಸುತ್ತಿರುವುದೇ ಈ ಭಾವವಿಸ್ತರಣ. ಸಂಸ್ಕೃತಭಾಷೆಯಲ್ಲಿ ನೀರನ್ನು 'ಜೀವನ' ಎಂದೂ ಹೇಳುತ್ತಾರೆ. ಎಂದರೆ, ಸಾಮಾನ್ಯವಾಗಿರುವ ನಮ್ಮ 'ಜೀವನ'ವನ್ನು ಪವಿತ್ರವಾದ, ಮಂಗಳಕರವಾದ

ರಮಣೀಯವಾದ 'ತೀರ್ಥ'ವನ್ನಾಗಿಸುವ, 'ರಸ'ವನ್ನಾಗಿಸುವ ಶಕ್ತಿ ಭಾರತೀಯತೆಗೆ ಉಂಟೆಂಬ ರಸಸಿದ್ಧಾಂತವೂ 'ಭಾರತತೀರ್ಥ'ದಲ್ಲಿದೆ.

'ಆಪೋ ಹಿ ಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ । ಮಹೇ ರಣಾಯ ಚಕ್ಷಸೇ ॥ ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ ॥' *(ಅಥರ್ವವೇದ 1.5.1-2)*

ಆಪ್(=ನೀರು) ಎಂದರೆ ಜೀವನವು ಸಹಜವಾಗಿಯೇ ಶಕ್ತಿದಾಯಕವೂ ಶುಭದಾಯಕವೂ ಹೌದು. ಇದರ ಮೂಲಸತ್ತ್ವ, ಎಂದರೆ ಜೀವನದ ಶಿವತಮವಾದ ರಸವು ನಮಗೆ ಎಟುಕಬೇಕಾದರೆ ಸೃಷ್ಟಿ(=ನೀರು) ನಮ್ಮ ಪಾಲಿಗೆ ತಾಯಿಯಾಗಬೇಕು; ಎಂದರೆ, ಹೀಗೆ ಭಾರತಮಾತೆಯೂ ತನ್ನ ವಾತ್ಸಲ್ಯದಿಂದ ನಮ್ಮ ಸಹಜಜೀವನವನ್ನು ರಸಮಯಗೊಳಿಸಬಲ್ಲ ಕಾರಯತ್ರೀಪ್ರತಿಭಾ ಸಂಪನ್ನೆಯೆಂಬುದು ಇಲ್ಲಿಯ ಭಾವ. ಹೀಗೆ, 'ಭಾರತ' ಎಂಬುದು ಕೇವಲ ಒಂದು ದೇಶವಾಚಕವಲ್ಲ, ಇದು ಭಾವವಾಚಕ; ಇದು ಅಲೌಕಿಕತೆಯ ರಸದ ತೀರ್ಥಘಟ್ಟ, ಆನಂದದ ಮಡು—ಎಂಬೆಲ್ಲ ಧ್ವನಿ 'ಭಾರತತೀರ್ಥ'ದಲ್ಲಿದೆ. ಮತ್ತೆ, ಜೀವಿಯ ಜೀವಿಕೆಗೆ ಅತ್ಯಂತ ಆವಶ್ಯಕತೆಗಳಲ್ಲಿ ನೀರು ಕೂಡ ಒಂದು ಎಂಬುದೂ ದಿಟವೇ. ಪ್ರಪಂಚದ ಸಂಸ್ಕೃತಿಗಳ ಉಳಿವೂ-ಅಳಿವೂ ನೀರನ್ನು ಆಶ್ರಯಿಸಿಯೇ ನಡೆದಿವೆ. ಜಗತ್ತಿಗೆ ಭಾರತೀಯತೆಯ ಅಗತ್ಯವನ್ನು ಇದು ಎತ್ತಿತೋರಿಸುತ್ತದೆ.

'ಅಗ್ನಿ', 'ಬೆಂಕಿ' ಎಂಬ ಅರ್ಥವೂ 'ತೀರ್ಥ'ಕ್ಕಿದೆ. ಮನುಕುಲಕ್ಕೆ ಬೆಂಕಿಯ ಆವಶ್ಯಕತೆ ಎಷ್ಟೆಂಬುದನ್ನು ಇಲ್ಲಿ ಪ್ರತ್ಯೇಕವಾಗಿ ವಿಸ್ತರಿಸಬೇಕಿಲ್ಲ. ಮನುಷ್ಯನ ಸಂಸ್ಕೃತಿಗೆ, ನಾಗರಿಕತೆಗೆ ಮೂಲಭೂತವಾಗಿ ಒದಗಿಬಂದದ್ದೇ ಬೆಂಕಿ. ಹಾಗೂ, ಬೆಂಕಿಯು ಪಾವಿತ್ರ್ಯಕ್ಕೂ ನಿಷ್ಪಾಕ್ಷಿಕತೆಗೂ ಪ್ರತೀಕ. ಇನ್ನು, ಅಗ್ನಿಯು ವೈದಿಕಸಂದರ್ಭದಲ್ಲಿ ಮನುಷ್ಯನಿಗೂ ದೇವತೆಗಳಿಗೂ ಸಂಬಂಧವನ್ನು ಏರ್ಪಡಿಸುವ ಪುರೋಹಿತ. ನಾಗರಿಕತೆಗೆ ಭಾರತೀಯತೆಗೂ ಇರುವ ಸಂಬಂಧವನ್ನೂ, ಹಾಗೆಯೇ ನಾವು ದೈವತ್ವಕ್ಕೆ ಎಂದರೆ ಅಲೌಕಿಕತತ್ತ್ವಕ್ಕೆ ಏರಲು ಭಾರತೀಯತೆಯು ನಮಗೆ ಒದಗಿಸಬಲ್ಲ ಸಾಧನವನ್ನೂ 'ಭಾರತತೀರ್ಥ'ವು ಧ್ವನಿಸುತ್ತದೆ. ಅಗ್ನಿಯು ಊರ್ಧ್ವಗತಿಗೂ ಸಂಕೇತ; ಇದು ಜ್ಞಾನವನ್ನೂ ಪ್ರಗತಿಯನ್ನೂ ಧ್ವನಿಸುತ್ತದೆ. ಮತ್ತೆ, ಅಗ್ನಿಯನ್ನು ನಾಯಕ, 'ಅಗ್ರಣಿ' ಎಂದೂ ವ್ಯವಹರಿಸಲಾಗುವುದು. ಜಗತ್ತಿನಲ್ಲಿ ಭಾರತೀಯತೆಗೇ ಅಗ್ರಪಟ್ಟ ಸಲ್ಲಬೇಕಾದುದು ಅಲ್ಲವೆ? ಇನ್ನೂ ಒಂದು ವಿಶೇಷವೆಂದರೆ ಅಗ್ನಿಯು ಪ್ರಾಚೀನಕಾಲದಿಂದಲೂ ಆಧುನಿಕಕಾಲದವರೆಗೆ ಪೂಜಿಸಲ್ಪಡುತ್ತಿರುತ್ತದೆ—'ಅಗ್ನಿಃ ಪೂರ್ವೇಭಿರ್ಋಷಿಭಿರೀಡ್ಯೋ ನೂತನೈರುತ'

(ಋಗ್ವೇದ). ಹೀಗೆ ಭಾರತೀಯತೆಯು ಚಿರಂತನತೆಗೂ, ಪ್ರಾಚೀನ-ನವೀನಗಳ ಸಂಮಿಳನಕ್ಕೂ ಪ್ರತೀಕವಾಗಿದ್ದು, ಇದು ಸರ್ವಮಾನ್ಯತೆಗೂ ಸಾರ್ವಕಾಲಿಕತೆಗೂ ಅರ್ಹವಾಗಿದೆ.

'ತೀರ್ಥ'ಕ್ಕೆ 'ಯೋಗ' ಎಂಬ ಅರ್ಥವೂ ಇದೆ. ಶಾರೀರಕ ಮತ್ತು ಮಾನಸಿಕಸ್ವಾಸ್ಥ್ಯಕ್ಕಾಗಿ ಮಾಡುವ ಕ್ರಿಯೆಯೆಲ್ಲವೂ ಯೋಗವೇ ಎನಿಸುವುದು. ಯೋಗ ಎಂಬುದು ನಾವು ನಡಸುವ ಕರ್ಮಗಳಲ್ಲಿ ನಿರ್ವಹಿಸುವ ಕೌಶಲವೂ ಹೌದು; ಕೌಶಲದಲ್ಲಿ ವ್ಯವಸ್ಥೆಯನ್ನು—ಋತವನ್ನು—ಕಾಪಾಡುವ ಎಚ್ಚರಿಕೆ, ಜಾಣ್ಮೆಗಳೆರಡೂ ಸೇರುತ್ತವೆ. ಮಾತ್ರವಲ್ಲ, ಮಾನಸಿಕ ದೃಢತೆಯ ಶಿಖರಸ್ಥಿತಿಯೇ ಯೋಗ. ಭಾರತೀಯತೆಗೆ ಇರುವ ಇಷ್ಟೆಲ್ಲ ಬಲಗಳ ಅರಿವೇ ಈ 'ಭಾರತತೀರ್ಥ'ದಲ್ಲಿದೆ.

ತೀರ್ಥಗಳನ್ನು ಸಾಮಾನ್ಯವಾಗಿ ಮೂರು ವಿಧವಾಗಿ ಗುರುತಿಸುವುದುಂಟು—(1) ಸ್ಥಾವರತೀರ್ಥ: ಇದು ಪುಣ್ಯಕ್ಷೇತ್ರ, ನದಿ-ಸರೋವರಗಳು ಮುಂತಾದುವು; (2) ಜಂಗಮತೀರ್ಥ: ಎಂದರೆ ಜ್ಞಾನಿಗಳೇ ತೀರ್ಥಸಮಾನರು ಎಂದು; ಮತ್ತು, (3) ಮಾನಸತೀರ್ಥ: ಮನಃಶುದ್ಧಿಯೇ ದಿಟವಾದ ತೀರ್ಥ. ಈ ಎಲ್ಲ ವಿವರಗಳನ್ನೂ ಒಳಗೊಂಡಿರುವುದೇ 'ಭಾರತತೀರ್ಥ'.

ತ್ಯಾಗಜೀವನಕ್ಕೆ ಮೂರ್ತರೂಪವಾಗಿರುವ ಋಷಿ-ಮುನಿಗಳು ಸ್ನಾನಮಾಡಿದ ಜಲಪ್ರದೇಶಗಳು 'ತೀರ್ಥ' ಎಂದೆನಿಸಿಕೊಳ್ಳುತ್ತವೆ. ಈ ತೀರ್ಥಗಳು ಶುಭ್ರತೆಗೆ, ನಿರ್ಮಲತೆಗೆ, ಪಾವಿತ್ರ್ಯಕ್ಕೆ ಸಂಕೇತಗಳು. ಉದಾಹರಣೆಗೆ, ರಾಮಾಯಣದಲ್ಲಿ ಬರುವ ತಮಸಾನದಿಯ ವರ್ಣನೆಯನ್ನು ಇಲ್ಲಿ ಉದಾಹರಿಸಬಹುದು—

> ಅಕರ್ದಮಮಿದಂ ತೀರ್ಥಂ ಭರದ್ವಾಜ ನಿಶಾಮಯ ।
> ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯಮನೋಯಥಾ ॥
>
> *—ಬಾಲಕಾಂಡಮ್, 2.5*

(ಭರದ್ವಾಜ, ಸ್ವಚ್ಛವಾದ ಈ ತೀರ್ಥವನ್ನು ನೋಡು—ತಿಳಿನೀರಿನಿಂದ ತುಂಬಿದ ಇದು ಸಜ್ಜನರ ಮನಸ್ಸಿನಂತೆ ಎಷ್ಟು ರಮಣೀಯವಾಗಿದೆ!)

ಹೀಗೆ, ಸ್ವಚ್ಛವಾದ ಕನ್ನಡಿಯಂತೆ ನಮ್ಮತನವನ್ನು ಪ್ರತಿಫಲಿಸಬಲ್ಲ ಋಷಿತೀರ್ಥವೇ ಈ 'ಭಾರತತೀರ್ಥ'.

'ಭಾರತತೀರ್ಥ'ಗ್ರಂಥಮಾಲಿಕೆಯಲ್ಲಿ ಭಾರತದ ಸಿದ್ಧಿ-ಸಾಧನೆಗಳ ಪರಿಚಯಮಾಡಿಕೊಡುವ ಪ್ರಯತ್ನವನ್ನು ಮಾಡಲಾಗುವುದು. ಭಾರತದೇಶದ ಋಷಿ-ಮುನಿಗಳು, ಸಿದ್ಧರು-ಸಂತರು-ಮಹಾಪುರುಷರು-ಸಾಧಕರು, ತೀರ್ಥ ಕ್ಷೇತ್ರಗಳು, ಕಲಾಪ್ರಕಾರಗಳು, ದರ್ಶನಪ್ರಸ್ಥಾನಗಳು, ಸಾಹಿತ್ಯ, ಸಿದ್ಧಾಂತ-ಕಲ್ಪನೆಗಳು, ಇತಿಹಾಸ, ವಿಜ್ಞಾನ, ಜೀವನಪದ್ಧತಿಗಳು—ಹೀಗೆ ಸಮಸ್ತ ಭಾರತೀಯವಿದ್ಯೆಗಳನ್ನು ಕುರಿತು ಪುಸ್ತಿಕೆಗಳು ಪ್ರಕಟವಾಗಲಿವೆ.

ಬನ್ನಿ! ಭಾರತತೀರ್ಥದಲ್ಲಿ ಮೀಯೋಣ; ಮಿಂದು ನಮ್ಮ ಜೀವನವನ್ನು ಸತ್ಯವಾಗಿಸೋಣ, ಶಿವವಾಗಿಸೋಣ, ಸುಂದರವಾಗಿಸೋಣ.

ಜಾನಾಮಿ ನೈತತ್ ಕ್ವ ವಯಂ ವಿಲೀನೇ
ಸ್ವರ್ಗಪ್ರದೇ ಕರ್ಮಣಿ ದೇಹಬನ್ಧಮ್ ।
ಪ್ರಾಪ್ಸ್ಯಾಮ ಧನ್ಯಾಃ ಖಲು ತೇ ಮನುಷ್ಯಾ
ಯೇ ಭಾರತೇ ನೇನ್ದ್ರಿಯ ವಿಪ್ರಹೀನಾಃ ॥

—ವಿಷ್ಣುಪುರಾಣ

(ನಮಗೆ ಸ್ವರ್ಗವನ್ನು ಕೊಟ್ಟಿರುವ ಈ ಪುಣ್ಯಕರ್ಮವು ಸವೆದ ಮೇಲೆ, ಮತ್ತೆ ಎಲ್ಲಿ ಹುಟ್ಟಿ ದೇಹಬಂಧವನ್ನು ಪಡೆಯುತ್ತೇವೋ ನಮಗೆ ಗೊತ್ತಿಲ್ಲ! ಇಂದ್ರಿಯ ಶಕ್ತಿಗಳಿಂದ ಸಹಿತರಾಗಿ ಭರತಖಂಡದಲ್ಲಿ ಹುಟ್ಟಿದ ಮನುಷ್ಯರೇ ಧನ್ಯರು!)*

—ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ

---

* ಇಲ್ಲಿ ದೇವತೆಗಳು ಭಾರತೀಯರನ್ನು ಕುರಿತು ಹಾಡುತ್ತಿದ್ದಾರೆ. (ಅನುವಾದ: ವಿದ್ವಾನ್ ಎನ್. ರಂಗನಾಥ ಶರ್ಮಾ)

† ಇಲ್ಲಿಯ ಅನುವಾದಗಳು ಕೇವಲ ಭಾವಾನುವಾದಗಳು.

'ಭಾರತೀಯತೆ'ಯ ಎಲ್ಲ ಅಂಶಗಳನ್ನೂ ಇಲ್ಲಿ ಚರ್ಚಿಸಲಾಗಿಲ್ಲ; ನಮ್ಮ ಮುಂದಿನ ಕೃತಿಯಲ್ಲಿ ಈ ದಿಸೆಯಿಂದ ಮತ್ತೂ ಕೆಲವು ಆಯಾಮಗಳನ್ನು ಸ್ಪರ್ಶಿಸಲು ಪ್ರಯತ್ನಿಸಲಾಗುವುದು.

ವಾಲ್ಮೀಕಿಪ್ರತಿಭೆ

ಆದಿಕವಿ

ಮಹಾಕಾವ್ಯ

ಇತಿಹಾಸದ ಹಿನ್ನೆಲೆ

ರಾಮೋಪಾಖ್ಯಾನ

ನೆರೆನಾಡುಗಳಲ್ಲಿ

ಆದಿಕವಿ

ವಿಶ್ವದ ಸರ್ವೋತ್ಕೃಷ್ಟಗ್ರಂಥಗಳಲ್ಲಿ ರಾಮಾಯಣ ಒಂದೆಂದು ಹೆಸರಾಗಿದೆ. ನಮ್ಮ ದೇಶದಲ್ಲಂತೂ ಅದರ ವ್ಯಾಪ್ತಿ, ಪ್ರಭಾವ ಆದ್ಯಂತ ವಿಸ್ತೃತ.

ಕ್ರಿಸ್ತಪೂರ್ವ ಮೂರನೆಯ ಶತಮಾನಕ್ಕೂ ಮುಂಚಿನಿಂದ ಇಂದಿನವರೆಗೆ ರಾಮನ ವ್ಯಕ್ತಿತ್ವ ದೇಶದ ಜೀವನದಲ್ಲಿ ಬಹುಮುಖವಾದ ಸ್ಫೂರ್ತಿ ಕೊಡುತ್ತಿರುವುದು ರಾಮಾಯಣದ ಆಧಾರದ ಮೇಲೆ. ವಿವಿಧ ಪ್ರಾಂತ್ಯಗಳಲ್ಲಿ, ವಿಭಿನ್ನ ಭಾಷೆಗಳಲ್ಲಿ ರಾಮನ ಕಥೆ ಅಸಂಖ್ಯವಿಧದಲ್ಲಿ ಪ್ರಕೀರ್ತಿತವಾಗಿದೆ. ಕಥೆ, ಕವನ, ಚಿತ್ರ, ಶಿಲ್ಪ, ಸಂಗೀತ, ನರ್ತನ, ಭಕ್ತಿ, ದರ್ಶನ, ನಿತ್ಯಕರ್ಮ, ಸಾಂಸಾರಿಕಜೀವನ—ಎಲ್ಲದರಲ್ಲೂ ರಾಮನ ಪ್ರಭಾವ ಅಮಿತವಾಗಿ ಬಿದ್ದಿದೆ.

ರಾಮನೆಂಬ ಧೀರೋದಾತ್ತನಾಯಕ ಐತಿಹಾಸಿಕವ್ಯಕ್ತಿಯೇ, ನಿಜವಾಗಿ ಜೀವಿಸಿದ್ದನೇ—ಎಂಬ ಪ್ರಶ್ನೆ ಅಪ್ರಕೃತ. ಈ ಪ್ರಶ್ನೆ ಭಾರತೀಯರ ಮನಸ್ಸಿನಲ್ಲಿ ಎಂದೂ ಎದ್ದಿಲ್ಲ; ಇದು ಪಾಶ್ಚಾತ್ಯರ ವಿಮರ್ಶಾಪದ್ಧತಿಯ ವರಪ್ರಸಾದ. ನಮ್ಮಲ್ಲಿ ಎಂದೂ ರಾಮ ಆದರ್ಶವ್ಯಕ್ತಿ, ಅವತಾರಪುರುಷ, ಆರಾಧ್ಯದೈವ; ನಿಷ್ಕಳಂಕವಾದ ಜೀವನಕ್ಕೆ ನಿದರ್ಶನ; ಉದಾತ್ತವಾದ ಸಾಂಸಾರಿಕಜೀವನದ ಧ್ಯೇಯ. ಈ ದೃಷ್ಟಿ ಜನರ ಮನಸ್ಸಿನಲ್ಲಿ ಬೇರೂರಿ ನಿಂತಿದೆ. ಇಷ್ಟು ಅನನ್ಯ ಸಾಧಾರಣವಾದ ಜನಪ್ರಿಯತೆಗೆ ವಾಲ್ಮೀಕಿಯ ಮಹಾಕಾವ್ಯ ಬಹುವಾಗಿ ಕಾರಣವೆಂದರೆ ತಪ್ಪಾಗದು. ಮಹಿಮಾನ್ವಿತವ್ಯಕ್ತಿಯೊಬ್ಬ ದೈವತ್ವವನ್ನು ಮುಟ್ಟಿ ನಿಂತಿರುವುದು ವಾಲ್ಮೀಕಿಯ ಪ್ರತಿಭೆಯಿಂದಲೇ ಎಂದೆನಿಸುತ್ತದೆ. ಸಾಮಾನ್ಯ ಜನರಲ್ಲಿ ರಾಮಾಯಣವು ಕಾವ್ಯವೆಂಬ ಗಣನೆಗಿಂತ 'ವೇದಃ ಪ್ರಾಚೇತಸಾದಾಸೀತ್ ರಾಮಾಯಣಾತ್ಮನಾ' ಎಂಬ ಕಲ್ಪನೆಯಲ್ಲೇ ಒಲವು ಹೆಚ್ಚು.

ವಾಲ್ಮೀಕಿಯ ರಾಮಾಯಣ ಇಂದು ಬಳಕೆಯಲ್ಲಿರುವ ರೂಪವನ್ನು ಎಂದು ತಳೆಯಿತೆಂಬುದು ಸಂಶಯಗ್ರಸ್ತ. ಕ್ರಿಸ್ತಪೂರ್ವ ಮೂರನೆಯ ಶತಮಾನದ ವೇಳೆಗೆ ಪ್ರಚುರವಾದ ಜಾನಪದಸಾಹಿತ್ಯವನ್ನು ಆಧಾರ ವಾಗಿಟ್ಟುಕೊಂಡು ವಾಲ್ಮೀಕಿಯು ರಾಮಾಯಣವನ್ನು ರಚಿಸಿದನೆಂದು ವಿದ್ವಜ್ಜನರ ಅಭಿಮತ. ಆದರೆ ಅಂದಿನಿಂದ ಕಾಲಕ್ರಮದಲ್ಲಿ ಅನೇಕ ಮಾರ್ಪಾಡುಗಳಾಗಿ ಕ್ರಿಸ್ತಾಬ್ದ ಎರಡನೆಯ ಶತಮಾನದ ಸುಮಾರಿಗೆ ಇಂದಿರುವ ರೂಪ ತಾಳಿತೆಂದು ನಂಬಲವಕಾಶ ಉಂಟು. ಇಂದಿನ ರೂಪದಲ್ಲಿ ಏಳು ಕಾಂಡಗಳೂ 24,000 ಶ್ಲೋಕಗಳೂ ಇವೆ. ಎರಡನೆಯ ಕಾಂಡದಿಂದ ಆರನೆಯ ಕಾಂಡದವರೆಗೆ ಸ್ಥೂಲವಾಗಿ ಒಂದು ಏಕಸೂತ್ರ ಉಂಟು; ಪ್ರಕ್ಷಿಪ್ತಗಳನ್ನು ಬಿಟ್ಟರೆ ಸಾಮಾನ್ಯವಾಗಿ ರಾಮ ಮಾನವನೆಂಬ ನಿರೂಪಣೆಯೇ ಉಂಟು. ಉದಾತ್ತವಾದ ಗುಣವಿಶಿಷ್ಟನಾದ ಧೀರೋದಾತ್ತ ನಾಯಕನೇ ಈ ಐದು ಕಾಂಡಗಳ ವಸ್ತು. ಆದರೆ ಮೊದಲನೆಯ ಬಾಲಕಾಂಡದಲ್ಲಿ ರಾಮ ಅವತಾರಪುರುಷ, ದೇವತೆ ಎಂಬ ಕಲ್ಪನೆ ಹಬ್ಬಿದೆ; ಅಲ್ಲದೆ ವಾಲ್ಮೀಕಿಯ ಕಥೆ, ರಾಮಾಯಣದ ಸಂಗ್ರಹ, ಉಪಕಥೆಗಳು ಇತ್ಯಾದಿ ಅಪ್ರಸ್ತುತ ಪ್ರಸಂಗಗಳು ಒದಗುತ್ತವೆ. ಇದು ವಾಲ್ಮೀಕಿಯ ಕೃತಿಯೇ ಎಂದು ಸಂದೇಹವಾಗುತ್ತದೆ.

ಏಳನೆಯ ಉತ್ತರಕಾಂಡವಂತೂ ನಿಜವಾಗಿ ಈಚಿನದು. ಬಾಲ ಕಾಂಡದ ನಾಲ್ಕನೆಯ ಸರ್ಗದಲ್ಲಿ ರಾಮಾಯಣದ ಪ್ರಮಾಣಪ್ರಸಂಗ ಬಂದಾಗ 'ಷಟ್‌ಕಾಂಡಾನಿ' ಎಂದು ಬೇರೆಯಾಗಿ ಹೇಳಿದೆ. ರಾಮನ ಕಥೆ ಸಹಜವಾಗಿ ಆರನೆಯ ಯುದ್ಧಕಾಂಡದಲ್ಲಿ ಮುಕ್ತಾಯವಾಗುತ್ತದೆ. ಕಾಂಡದ ಸಮಾಪ್ತಿಯಲ್ಲಿ ಫಲಶ್ಲೋಕಗಳೂ ಉಂಟು.

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ಭ್ರಾತೃಭಿಃ ಸಹಿತಃ ಶ್ರೀಮಾನ್ ರಾಮೋ ರಾಜ್ಯಮಕಾರಯತ್ ॥

ಈ ಶ್ಲೋಕವೇ ಕಾವ್ಯದ ಪರಿಸಮಾಪ್ತಿ ಎನ್ನುವ ವಾದದಲ್ಲಿ ಔಚಿತ್ಯ ಉಂಟು. ಅಲ್ಲಿಂದ ಮುಂದಕ್ಕೆ 'ಆದಿಕಾವ್ಯಮಿದಂ ತ್ವಾರ್ಷಂ ಪುರಾ ವಾಲ್ಮೀಕಿನಾ ಕೃತಂ' ಇತ್ಯಾದಿಯಾಗಿ ಕಾವ್ಯಪ್ರಶಸ್ತಿ, ಫಲಶ್ಲೋಕಗಳು ಬರುತ್ತವೆ.

ಹೀಗೆ ನೈಜವಾಗಿ ಮುಗಿದ ಕಥೆ ಮತ್ತೆ ಉತ್ತರಕಾಂಡದಲ್ಲಿ ವಿಕಾರವಾಗಿ ಆರಂಭವಾಗುವುದು ಅಪ್ರಾಕೃತವೆನಿಸುತ್ತದೆ. ಉಳಿದ ರಾಮನ ಕಥೆಗೂ ಈ ಕಾಂಡದ ಪ್ರಸಂಗಗಳಿಗೂ ಸಂಬಂಧವೇ ಇಲ್ಲ; ಶೈಲಿಯಲ್ಲೂ ವೈಪರೀತ್ಯ ಉಂಟು. ಉತ್ತರಕಾಂಡವನ್ನು ಪೂರಾ ಬಿಟ್ಟು ಬಾಲಕಾಂಡದ ಅಪ್ರಸಕ್ತಭಾಗಗಳನ್ನೂ ಬಿಟ್ಟು ಉಳಿದ ಕಾಂಡಗಳಲ್ಲಿ ಪ್ರಕ್ಷಿಪ್ತವೆನ್ನಬಹುದಾದ ಶ್ಲೋಕಗಳನ್ನು ಬಿಟ್ಟರೆ ರಾಮಾಯಣದ ಆದಿಸ್ವರೂಪದ ಛಾಯೆಯನ್ನು ಕಾಣಬಹುದೆಂದು ಹಲವು ವಿದ್ವಾಂಸರ ವಾದ. ಈ ವಾದ ಪರಿಪುಷ್ಟವಾದ ಸಮರ್ಥನೆಗೆ ನಿಲುಕದಿದ್ದರೂ ವಿಶ್ವಸನೀಯ.

ವಾದ-ವಿವಾದಗಳು ಹೇಗಾದರೂ ಇರಲಿ, ರಾಮಾಯಣದ ಪ್ರಶಸ್ತಿಯಂತೂ ಸರ್ವಸಮ್ಮತ. ರಾಮಾಯಣ ಆದಿಕಾವ್ಯ; ನಮ್ಮ ದೇಶದ ಎಲ್ಲ ಕಾಲದ, ಎಲ್ಲ ಕವಿಗಳಿಗೂ ವಾಲ್ಮೀಕಿ ಗುರುಪ್ರಾಯ. ಮಹಾಕವಿಯೆಂದು ವಿಶ್ವವಿಶ್ರುತನಾದ ಕಾಲಿದಾಸನೇ ವಾಲ್ಮೀಕಿಯನ್ನು 'ಪೂರ್ವಸೂರಿ'ಗಳ ಕೋಟಿಯಲ್ಲಿ ಸೇರಿಸಿ ಮುಕ್ತಕಂಠದಿಂದ ಪ್ರಶಂಸಿಸಿದ್ದಾನೆ. ಚಂಪೂರಾಮಾಯಣದ ರಚಯಿತೃವಾದ ಭೋಜ—

> ವಾಲ್ಮೀಕಿಗೀತರಘುಪುಂಗವಕೀರ್ತಿಲೇಶೈ-
> ಸ್ತೃಪ್ತಿಂ ಕರೋಮಿ ಕಥಮಪ್ಯಧುನಾ ಬುಧಾನಾಂ ।

ಎಂದಿದ್ದಾನೆ. ಮತ್ತೆ, ಯಾವ ಶ್ರದ್ಧಾಳು ಈ ಕೆಳಗಿನ ಮನೋಹರವಾದ ವಾಲ್ಮೀಕಿಪ್ರಶಸ್ತಿಯನ್ನು ಕೇಳಿಲ್ಲ?

> ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಮ್ ।
> ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಮ್ ॥

> ವಾಲ್ಮೀಕೇರ್ಮುನಿಸಿಂಹಸ್ಯ ಕವಿತಾವನಚಾರಿಣಃ ।
> ಶೃಣ್ವನ್ರಾಮಕಥಾನಾದಂ ಕೋ ನ ಯಾತಿ ಪರಾಂ ಗತಿಮ್ ॥

> ಯಃ ಪಿಬನ್ ಸತತಂ ರಾಮಚರಿತಾಮೃತಸಾಗರಮ್ ।
> ಅತೃಪ್ತಸ್ತಂ ಮುನಿಂ ವಂದೇ ಪ್ರಾಚೇತಸಮಕಲ್ಮಷಮ್ ॥

ಸಾರಸ್ವತಸಾಮಗ್ರಿಯಲ್ಲಿ, ವಸ್ತುವಿನ್ಯಾಸದಲ್ಲಿ, ಶೈಲಿಯಲ್ಲಿ, ರಸ ನಿರೂಪಣೆಯಲ್ಲಿ, ಉಪಮೆಯಲ್ಲಿ, ಅಲಂಕಾರದಲ್ಲಿ, ಕೃತಿ ಗಾಂಭೀರ್ಯ ದಲ್ಲಿ ವಾಲ್ಮೀಕಿಯ ಮೇಲ್ಪಂಕ್ತಿ ಇಂದಿಗೂ ಅಜರಾಮರವಾಗಿ ಉಳಿದಿದೆ. ಮಾಧುರ್ಯದಲ್ಲಿ, ಪ್ರತಿಭೆಯಲ್ಲಿ ಅವನನ್ನು ಅತಿಕ್ರಮಿಸಿದ ಕವಿ ಇಂದಿಗೂ ಬಂದಿಲ್ಲ. ಕ್ರೌಂಚಸ್ತ್ರೀಯ ವಿರಹದರ್ಶನದಿಂದ ಉದ್ವಿಗ್ನವಾದ ಕವಿಹೃದಯ ಕಾವ್ಯರಸಧಾರೆಗೆ ಅನುವಾಯಿತೆಂಬ ದಂತಕಥೆಯಲ್ಲಿ ಸತ್ಯವೆಷ್ಟಿದೆಯೋ ತಿಳಿಯದು. ಆದರೆ ಕವಿಹೃದಯದ ಹೆಗ್ಗಳಿಕೆಗೆ ಅದಕ್ಕಿಂತ ಹೆಚ್ಚಿನ ಪ್ರಶಸ್ತಿ ಇರದು. ಬಾಲಕಾಂಡದ ಎರಡನೆಯ ಸರ್ಗದಲ್ಲಿ ಬ್ರಹ್ಮನ ಬಾಯಿಯಿಂದ ಒಂದು ಪ್ರಶಸ್ತಿಯನ್ನು ಹೊರಡಿಸಿದ್ದಾರೆ. ಈ ಭಾಗ ವಾಲ್ಮೀಕಿಕೃತವಲ್ಲವೆಂಬುದಂತೂ ನಿಜ. “ಗುಡ್ಡಬೆಟ್ಟ-ನದಿನೀರು ಇರುವಷ್ಟು ದಿನವೂ ಲೋಕದಲ್ಲಿ ರಾಮನ ಕಥೆ ಉಳಿಯುತ್ತದೆ. ಈ ರಾಮನ ಕಥೆ ಇರುವಷ್ಟು ದಿನವೂ ವಾಲ್ಮೀಕಿ ಇಲ್ಲಿ, ಮೇಲೆ, ಬ್ರಹ್ಮಲೋಕದಲ್ಲಿ ಇರುತ್ತಾನೆ”.

ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ ।
ತಾವದ್ ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ ॥

ಯಾವದ್ ರಾಮಾಯಣಕಥಾ ತ್ವತ್ಕೃತಾ ಪ್ರಚರಿಷ್ಯತಿ ।
ತಾವದ್ ಊರ್ಧ್ವಮಧಶ್ಚ ತ್ವಂ ಮಲ್ಲೋಕೇಷು ನಿವತ್ಸ್ಯಸಿ ॥

ಈ ಉಕ್ತಿ ನಮ್ಮ ದಿನದವರೆಗಂತೂ ನಿಜವಾಗಿದೆ. ಸುಮಾರು ಮೂರುಸಾವಿರ ವರ್ಷಗಳ ಪರ್ಯಂತ ಒಮ್ಮೆಯೂ ಮರೆಯಾಗದೆ ನಮ್ಮಲ್ಲಿ ನಿಂತ ಒಂದೇ ಕಥೆಯೆಂದರೆ ರಾಮಾಯಣದ ಕಥೆ. ಕವಿಯ ಪ್ರತಿಭೆ ಇನ್ನೇನನ್ನು ತಾನೇ ನಿರೀಕ್ಷಿಸೀತು?

ರಾಮಾಯಣವನ್ನು ಎಂದೂ ನಮ್ಮವರು ಕಾವ್ಯವೆಂದೇ ಪರಿಗಣಿಸಿದ್ದಾರೆ. ‘ವಾಲ್ಮೀಕಿಯ ವದನಾರವಿಂದದಿಂದ ಸರಸ್ವತಿ ಛಂದೋಮಯಿಯಾಗಿ ಹರಿದಳು’ ಎನ್ನುವ ಮಾತು ಭೋಜಕವಿಯ ಚಂಪೂರಾಮಾಯಣದಲ್ಲಿ ಬರುತ್ತದೆ. ಅಭಿರಾಮನಾದ ರಾಮನ ಚರಿತ್ರೆ ಸಮುದ್ರದಂತೆ ರತ್ನಾಢ್ಯ, ಸರ್ವಶ್ರುತಿಮನೋಹರ, ಧರ್ಮಾರ್ಥಗುಣವಿಸ್ತರ,

ಕಾಮಾರ್ಥಗುಣಸಂಪನ್ನ ಕಾವ್ಯಕ್ಕೆ ಪ್ರಶಸ್ತವಾದ ವಸ್ತು. ರಾಮಾಯಣಕಾವ್ಯವೂ 'ಪಾಠ್ಯೇ ಗೇಯೇ ಚ ಮಧುರಂ, ಪ್ರಮಾಣೈಸ್ತ್ರಿಭಿರನ್ವಿತಂ, ಜಾತಿಭಿಸ್ಸಪ್ತಭಿರ್ಬದ್ಧಂ, ತಂತ್ರೀಲಯ ಸಮನ್ವಿತಂ, ರಸೈಃ....ಸಂಯುಕ್ತಂ'. ರಾಮಾಯಣದ ರಸಪುಷ್ಟಿಗೆ ತಲೆದೂಗಿ ವಾಲ್ಮೀಕಿಯ ಪ್ರಭೆಯಲ್ಲಿ ಅಜ್ಞಾತನಾದ ಕವಿ 'ಅಹೋ ಗೀತಸ್ಯ ಮಾಧುರ್ಯಂ ಶ್ಲೋಕಾನಾಂ ಚ ವಿಶೇಷತಃ!" ಎಂದಿದ್ದಾನೆ.

ರಾಮನ ಸಭೆಯಲ್ಲಿ ಅವನ ಮಕ್ಕಳಾದ ಕುಶಲವರು ರಾಮಾಯಣವನ್ನು ಹಾಡಿದರೆಂಬ ಸಂದರ್ಭ ಕಲ್ಪಿತವಾಗಿರುವುದು ಸಹಜವೇ; ರಾಮಾಯಣದಲ್ಲಿ ಅಷ್ಟು ಮಾಧುರ್ಯವಿದೆ. ಶ್ರವ್ಯಕಾವ್ಯದಲ್ಲಿ ಗೇಯಗುಣ ಆವಶ್ಯಕ. ರಾಮಾಯಣವನ್ನು ಅವಲೋಕಿಸಿಯೇ ಲಕ್ಷಣಗ್ರಂಥಗಳು ಮಹಾಕಾವ್ಯದ ರೀತಿನೀತಿಗಳನ್ನು ನಿಷ್ಕರ್ಷಿಸಿರುವುದು. ರಾಮಾಯಣದ ಆಧಾರದ ಮೇಲೆಯೇ ಅಶ್ವಘೋಷ, ಕಾಲಿದಾಸ ಮುಂತಾದ ಮಹಾಕವಿಗಳು ತಮ್ಮ ಕಥನಕೌಶಲವನ್ನು ರೂಪಿಸಿಕೊಂಡಿರುವುದು. ಪಂಚಮಹಾಕಾವ್ಯಗಳಲ್ಲಿ ಒಂದಾದ ಕಾಲಿದಾಸನ 'ರಘುವಂಶ' ವಾಲ್ಮೀಕಿಯನ್ನೇ ಅನುಸರಿಸಿದ್ದು. ರಾಮಾಯಣವೆಂಬ ಸಮುದ್ರದಲ್ಲಿ ದೊರೆಯುವ ರತ್ನಗಳೇ ಅಸಂಖ್ಯ ಕಾವ್ಯಗಳಿಗೆ, ನಾಟಕಗಳಿಗೆ, ಶಾಸ್ತ್ರಗ್ರಂಥಗಳಿಗೆ ಸಾಮಗ್ರಿಯನ್ನು ಒದಗಿಸಿವೆ.

ಭಾರತದ ದೇಶೀಭಾಷೆಗಳಲ್ಲೂ ವಾಲ್ಮೀಕಿಯ ಪ್ರತಿಭೆ ನಿರ್ವಿವಾದವಾಗಿ ನಿಂತಿದೆ. ಅತಿಪ್ರಾಚೀನಕಾಲದಿಂದ ಪ್ರಾಂತೀಯ ಭಾಷೆಗಳಲ್ಲಿ ರಾಮಾಯಣಗಳು ರಚಿತವಾಗಿವೆ. ಹಿಂದಿಯಲ್ಲಿ ತುಳಸೀದಾಸರ 'ರಾಮಚರಿತಮಾನಸ', ಬಂಗಾಳಿಯಲ್ಲಿ 'ಕೃತಿವಾಸ ರಾಮಾಯಣ', ತೆಲುಗಿನಲ್ಲಿ 'ರಂಗನಾಥರಾಮಾಯಣ', ತಮಿಳಿನಲ್ಲಿ 'ಕಂಬರಾಮಾಯಣ', ಕನ್ನಡದಲ್ಲಿ 'ತೊರವೆ ರಾಮಾಯಣ' ಇತ್ಯಾದಿ. ಆಧುನಿಕಕವಿಗಳೂ ನಾಟಕಕರ್ತೃಗಳೂ ವಾಲ್ಮೀಕಿಯಿಂದ ಉಪಕೃತರಾಗುತ್ತಿದ್ದಾರೆ. ಬಂಗಾಳಿಯಲ್ಲಿ ಈಶ್ವರಚಂದ್ರ ವಿದ್ಯಾಸಾಗರರ 'ಸೀತಾವನವಾಸ', ಮಧುಸೂದನ-ದತ್ತರ 'ಮೇಘನಾದವಧ', ಹಿಂದಿಯಲ್ಲಿ 'ಪಂಚವಟಿ' ಮುಂತಾದ ಖಂಡಗ್ರಂಥಗಳು, ಕನ್ನಡದ 'ರಾಮಾಶ್ವಮೇಧ', ನಮ್ಮ ಕಾಲದ ಕುವೆಂಪು ಅವರ 'ರಾಮಾಯಣದರ್ಶನಂ', ಇತ್ಯಾದಿ. ಅಂತೂ ರಾಮಾಯಣ ವಿವಿಧಸ್ರೋತಗಳಿಗೆ ಉಗಮಸ್ಥಾನವಾಗಿ ನಿಂತಿದೆ.

ರಾಮಾಯಣದ ಮುಖ್ಯವಸ್ತುವಾದ ರಾಮ ಧೀರೋದಾತ್ತನಾಯಕ. ಲೋಕದಲ್ಲಿ ಉತ್ತಮನಾದ ಪುರುಷ ಯಾರು?—ಎಂಬ ಪ್ರಶ್ನೆಯಿಂದಲೇ ರಾಮಾಯಣಕಾವ್ಯ ಆರಂಭವಾಗುತ್ತದೆ. ರಾಮ ಗುಣವಂತ, ವೀರ್ಯವಂತ, ಧರ್ಮಜ್ಞ, ಕೃತಜ್ಞ, ಸತ್ಯಸಂಧ, ದೃಢವ್ರತ, ಚಾರಿತ್ರಯುಕ್ತ, ಸರ್ವಭೂತಹಿತೇರತ, ವಿದ್ವಾನ್, ಸಮರ್ಥ, ಪ್ರಿಯದರ್ಶನ, ಜಿತಕ್ರೋಧ, ಆತ್ಮವಾನ್, ಅನಸೂಯಕ—ಇಷ್ಟು ಕಲ್ಯಾಣಗುಣಗಳು ಒಬ್ಬ ಮಾನವನಲ್ಲೇ ಸಂನಿಹಿತವಾಗುವುದು ದುರ್ಲಭ. ಆದಾಗ ಅಂಥವನು ಪೂಜಾರ್ಹ ಎಂತಲೇ ರಾಮನಿಗೆ ಈ ಗೌರವ. ರಾಮನ ವಿಚಾರವಾಗಿ ವಾಲ್ಮೀಕಿಯ ಶ್ರದ್ಧೆ ಗಾಢವಾದದ್ದು. ಅವನ ಯಶಸ್ಸನ್ನು ಶುಚಿಯಾದದ್ದೆಂದು ವರ್ಣಿಸುತ್ತಾನೆ. ರಾಮನ ಸ್ಥೈರ್ಯ, ಶೌರ್ಯಗಳಿಗಿಂತ ಅವನ ಸಮಾಧಿ, ಪ್ರಜ್ಞೆ, ಜ್ಞಾನ, ಧರ್ಮ, ಸ್ಮೃತಿ, ತ್ಯಾಗ—ಈ ಗುಣಗಳ ಮೇಲೆ ವಾಲ್ಮೀಕಿಯ ವಿಶ್ವಾಸ. ರಾಮನನ್ನು ಸರ್ವಲೋಕಪ್ರಿಯ, ಸಾಧು, ಅದೀನಾತ್ಮಾ, ವಿಚಕ್ಷಣ ಎಂದು ವರ್ಣಿಸುವಲ್ಲಿ ವಾಲ್ಮೀಕಿಯ ವ್ಯಕ್ತಿತ್ವವೇ ವ್ಯಕ್ತವಾಗುತ್ತದೆ. 'ಸಮುದ್ರ ಇವ ಗಾಂಭೀರ್ಯೇ, ಧೈರ್ಯೇಣ ಹಿಮವಾನ್ ಇವ'—ಇದಕ್ಕಿಂತ ರಮಣೀಯತರವಾದ ಪ್ರಶಸ್ತಿ ಯಾರಿಗೆ ದೊರೆತೀತು? 'ಪ್ರಿಯದರ್ಶನ' ಎಂಬ ವಿಶೇಷಣವನ್ನಂತೂ ರಾಮನಿಗೆ ವಾಲ್ಮೀಕಿ ಪದೇಪದೇ ಉಪಯೋಗಿಸಿದ್ದಾನೆ. ಇಂಥ ನಾಯಕನಿಗೆ ವಧುವಾದ ಸೀತೆ 'ಸರ್ವಲಕ್ಷಣಸಂಪನ್ನೆ', 'ನಾರೀಣಾಮುತ್ತಮಾ'; ಚಂದ್ರನಿಗೆ ರೋಹಿಣಿ ಇದ್ದಂತೆ ರಾಮನ ದಯಿತೆ ಸೀತೆ. ವಾಲ್ಮೀಕಿಯ ವಚೋಶಕ್ತಿಯೆಲ್ಲ ಈ ದಂಪತಿಗಳ ಚಿತ್ರಣದಲ್ಲಿ ಮುಗಿದಿದೆ; 'ಹಸಿತಂ ಭಾಷಿತಂ ಚೈವ ಗತಿರ್ಯಾ ಯಚ್ಚ ಚೇಷ್ಟಿತಂ'—ಇಷ್ಟನ್ನೂ ವಿಸ್ತರಿಸಿ ಬಣ್ಣಿಸಿದ್ದಾನೆ.

ಇಲ್ಲಿ ಅದ್ಭುತವರ್ಣನೆಗೆ ಪ್ರಾಶಸ್ತ್ಯ ಇಲ್ಲ. ಅತಿಮಾನುಷವಾದ ಪ್ರಸಂಗಗಳ ಪ್ರಸ್ತಾಪ ಅತಿಯಾಗಿಲ್ಲ. ಮನುಷ್ಯಯತ್ನದಿಂದ, ನಿಷ್ಠೆಯಿಂದ ವಶಮಾಡಿಕೊಳ್ಳಬಹುದಾದ ಗುಣಸಂಪತ್ತಿಯನ್ನೇ ರಾಮನ ವ್ಯಕ್ತಿತ್ವ ಮೂರ್ತೀಭವಿಸುವುದು. ಮನುಷ್ಯನ ನಿಲುವಿಗೆ ನಿಲುಕದ ವಿಶೇಷಣಗಳಲ್ಲಿ ವಾಲ್ಮೀಕಿಗೆ ಅಕ್ಕರೆ ಇಲ್ಲ. ನಿಜವಾಗಿ ರಾಮಾಯಣ ಉತ್ತಮನಾದ ಮನುಷ್ಯ ಸರ್ವಸನ್ಮಾನಿತನಾಗಿ ಅಜರಾಮರನಾದ ಕಥೆಯನ್ನು ಹೇಳುತ್ತದೆ. ಈ ಮಂಗಲಶ್ಲೋಕದಲ್ಲೂ ಮನುಷ್ಯತ್ವಕ್ಕೇ ವೈಶಿಷ್ಟ್ಯ ಇದೆ—

ಮಂಗಲಂ ಕೋಸಲೇಂದ್ರಾಯ ಮಹನೀಯಗುಣಾಬ್ಧಯೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಂಗಲಮ್ ॥

ರಾಮಾಯಣದ ಶಕ್ತಿಯಿಂದ ರಾಮನಿಗೆ ಹಿರಿಮೆ ಬಂದಿತು; ವಾಲ್ಮೀಕಿ ಇರದಿದ್ದರೆ ರಾಮ ಚಾರಿತ್ರಿಕವ್ಯಕ್ತಿಯಾಗಿದ್ದರೂ ನಮ್ಮ ಸ್ಮೃತಿಪಥದಿಂದ ಈ ವೇಳೆಗೆ ಜಾರುತ್ತಿದ್ದ ಎನ್ನುವುದು ಒಂದು ಪಕ್ಷ. ರಾಮಾಯಣದ ಶಕ್ತಿಗೆ ಅದರ ವಸ್ತುವಿನ ಹಿರಿಮೆಯೇ ಕಾರಣ; ರಾಮನಲ್ಲದೆ ಬೇರೊಂದು ವಸ್ತುವನ್ನು ವಾಲ್ಮೀಕಿ ಆರಿಸಿಕೊಂಡಿದ್ದರೆ ಆ ಕಾವ್ಯ ಈವರೆಗೆ ಉಳಿಯುತ್ತಿರಲಿಲ್ಲ ಎನ್ನುವುದು ಇನ್ನೊಂದು. ಎರಡೂ ನಿಜ; ಅನ್ಯೋನ್ಯಾಶ್ರಯಧರ್ಮದಲ್ಲಿ ವಾಲ್ಮೀಕಿ-ರಾಮ ಇಬ್ಬರೂ ನಿಂತಿದ್ದಾರೆ. ರಾಮನ ಚರಿತ್ರೆ ಉದಾತ್ತವಾದುದ್ದು; ಅವನ ವೃತ್ತ ಜಗದ್ವಂದ್ಯ, ಮಾನವಕೋಟಿಗೆ ಸ್ಫೂರ್ತಿದಾಯಕ. ಅವನ ಕೀರ್ತಿಯಲ್ಲಿ ಔದಾರ್ಯವಿದೆ, ಸೌಂದರ್ಯವಿದೆ, ದಾರ್ಢ್ಯವಿದೆ. ಅವನ ಕಥೆ ಮಂಗಳವಾದುದು. ರಾಮನ ಅದ್ಭುತವಾದ ವ್ಯಕ್ತಿತ್ವವೇ ವಾಲ್ಮೀಕಿಯ ಪ್ರತಿಭೆಯನ್ನು ಧ್ವನಿಸಿದ್ದು. ಆದರೆ ರಾಮಾಯಣವೂ ಸುಭಗಸುಂದರವಾದ ಕೃತಿ; ಅದರಲ್ಲಿ ಓಜಸ್ಸಿದೆ, ರಮ್ಯತೆಯಿದೆ, ನವನವೋನ್ಮೇಷಶಾಲಿನಿಯಾದ ಪ್ರತಿಭೆಯಿದೆ. ರಾಮನ ಚರಿತೆ ಅಮೃತಸಾಗರವಾದದ್ದು ವಾಲ್ಮೀಕಿಯ ಕೃಪೆಯಿಂದಲೇ ಎಂದರೂ ಅನುಚಿತವಾಗದು. ರಾಮಾಯಣದಲ್ಲೇ ಸೇರಿರುವ ಒಂದು ಶ್ಲೋಕ ಈ ಅರ್ಥವನ್ನೇ ಸೂಚಿಸುತ್ತದೆ. ರಾಮ-ವಾಲ್ಮೀಕಿಗಳ ಅನ್ಯೋನ್ಯಾಶ್ರಯ ಸಂಬಂಧ ಎಷ್ಟು ನಿಕಟವಾದದ್ದು ಎಂದು ಹೇಳುತ್ತದೆ—

ಉದಾರವೃತ್ತಾರ್ಥಪದೈರ್ಮನೋರಮೈಸ್ತತಃ ಸ ರಾಮಸ್ಯ
ಚಕಾರ ಕೀರ್ತಿಮಾನ್ ।
ಸಮಾಕ್ಷರೈಃ ಶ್ಲೋಕಶತೈರ್ಯಶಸ್ವಿನೋ ಯಶಸ್ಕರಂ
ಕಾವ್ಯಮುದಾರಧೀರ್ಮುನಿಃ ॥
ತದುಪಗತಸಮಾಸಸಂಧಿಯೋಗಂ
ಸಮಮಧುರೋಪನತಾರ್ಥವಾಕ್ಯಬದ್ಧಂ ।
ರಘುವರಚರಿತಂ ಮುನಿಪ್ರಣೀತಂ...

ವಾಲ್ಮೀಕಿಯು ಕಾವ್ಯರೂಪದಲ್ಲಿ ರಚಿಸಿದ ರಾಮಾಯಣವನ್ನು ರಾಮನ ಮಕ್ಕಳಾದ ಕುಶ-ಲವರು ರಾಮನ ಸುಮ್ಮುಖದಲ್ಲೇ ಹಾಡಿದ ರೆಂಬ ಒಂದು ಕಲ್ಪನೆಯಿದೆ. ಬಾಲಕಾಂಡದಲ್ಲಿ ಇವರ ಪ್ರಸ್ತಾಪ ಬರುತ್ತದೆ. ಆದರೆ ಇಲ್ಲಿ ಇವರು ರಾಮನ ಮಕ್ಕಳೆನ್ನುವ ಸೂಚನೆ ಸ್ಪಷ್ಟವಾಗಿಲ್ಲ; 'ಬಿಂಬಾದಿವೋತ್ಥಿತೌ ಬಿಂಬೌ ರಾಮದೇಹಾತ್ತಥಾಪರೌ' ಎಂದಷ್ಟೇ ಉಲ್ಲೇಖವಿದೆ. ಅವರನ್ನು ಸೋದರರು, ಯಶಸ್ವಿಗಳಾದ ರಾಜಪುತ್ರರು, ಮೇಧಾವಿಗಳು, ಮಧುರಸ್ವರ ಸಂಪನ್ನರು, ಗಾಂಧರ್ವತತ್ತ್ವಜ್ಞರು (ಎಂದರೆ ಸಂಕೇತ ತಿಳಿದವರು), ವೇದ ಬಲ್ಲವರು, ತಪಸ್ವಿಗಳು ಎಂದು ನಾಲ್ಕನೆಯ ಸರ್ಗ ಬಣ್ಣಿಸುತ್ತದೆ. ಇವರನ್ನು ಸಾಮಾನ್ಯವಾಗಿ ಇಲ್ಲಿ ಒಟ್ಟಾರೆ 'ಕುಶೀಲವರು' ಎಂದು ವ್ಯವಹರಿಸಿದ್ದಾರೆ. ಒಂದೆಡೆ ಮಾತ್ರ ಅವರ ಹೆಸರು ಕುಶ, ಲವ ಎಂದು ಹೇಳಿದ್ದಾರೆ— 'ಕೌಶೀಲವೌ ಕುಶ ಲವನಾಮಧಾರಿಣೌ.'

ಸಂಸ್ಕೃತದಲ್ಲಿ 'ಕುಶೀಲವ' ಎಂಬುದೊಂದೇ ಪದವುಂಟು. ಇದು ಯಾವೊಬ್ಬ ವ್ಯಕ್ತಿಯ ಹೆಸರಲ್ಲ, ವೃತ್ತಿನಿರ್ದೇಶಕ ಪದ, 'ಸೂತಪೌರಾಣಿಕ' ಎಂಬಂತೆ. ಕುಶೀಲವರೆಂದರೆ ಕಾವ್ಯೋಪಜೀವಿಗಳು; ನಾಡಗಬ್ಬಗಳನ್ನು ಊರಜನರ ಮುಂದೆ ಗೀತವಾದ್ಯಗಳೊಂದಿಗೆ ಬಿತ್ತರಿಸಿ, ವಿವಿಧರಸಗಳನ್ನು ಒದಗಿಸಿ ಮನೋರಂಜನೆ ಮಾಡಿ ಊರೂರು ತಿರುಗುತ್ತಿದ್ದ ಮಂದಿ. ಬಾಲಕಾಂಡದ ಉಲ್ಲೇಖದಲ್ಲೂ ಈ ಕುಶೀಲವರು ವಾಲ್ಮೀಕಿಯ ಇಡೀ ಕಾವ್ಯವನ್ನು ವಾಚೋವಿಧೇಯವನ್ನಾಗಿ ಮಾಡಿಕೊಂಡು ಋಷಿಗಳ, ದ್ವಿಜರ, ಸಾಧುಗಳ ಮುಂದೆ ರಾಮನ ಕಥೆಯನ್ನು ಇಂಪಾಗಿ ಕಥನ ಮಾಡಿದ ಸಂದರ್ಭವಿದೆ. ರಾಮ ಅವರನ್ನು ಕಂಡದ್ದೂ ಹೀಗೆ—ಅವರು ಬೀದಿಬೀದಿಗಳಲ್ಲಿ ಹಾಡಿಕೊಂಡು ತಿರುಗುತ್ತಿದ್ದಾಗ ('ರಥ್ಯಾಸು ರಾಜ ಮಾರ್ಗೇಷು'). ರಾಮ ಅವರಿಂದ ತನ್ನ ಕಥೆಯನ್ನೇ ಹಾಡಿಸಿ, ಕೇಳಿ ಆನಂದಿಸಿದಾಗಲೂ ಅವನಿಗೆ ಅವರು ತನ್ನ ಮಕ್ಕಳೆಂದು ಅರಿವಾದುದು ಇಲ್ಲಿ ಕಾಣಬರುವುದಿಲ್ಲ. ಈ ಸಂದರ್ಭದಲ್ಲಾಗಲೀ, ಈ ಸನ್ನಿವೇಶ ದಲ್ಲಾಗಲೀ ಇವರು ವಾಲ್ಮೀಕಿಯ ಆಶ್ರಮದಲ್ಲಿ ಬೆಳೆದವರೆಂಬ ವಿವರವಿಲ್ಲ.

ಇಷ್ಟಲ್ಲದೆ, ನೆರೆದ ಜನ ಇವರ ಗೀತಕಥನವನ್ನು ಮೆಚ್ಚಿಕೊಂಡಾಗ "ಇವರು ಹಾಡುವುದನ್ನು ಕೇಳಿದರೆ ತುಂಬ ಹಿಂದೆ ನಡೆದ ಈ ಕಥೆ ಈಗ

ಕಣ್ಣಿಗೆ ಕಟ್ಟಿದಂತಿದೆ" ('ಚಿರನಿರ್ವೃತ್ತಮ ಪ್ಯೇತತ್ ಪ್ರತ್ಯಕ್ಷಮಿವ ದರ್ಶಿತಂ') ಎಂದು ಹೇಳಿರುವುದು ಗಮನಾರ್ಹವಾಗಿದೆ. ರಾಮನ ಕಥೆ ಇಂಥ ಕುಶೀಲವರಿಂದ ಆಗಲೇ ಹತ್ತಾರು ತಲೆಮಾರುಗಳಲ್ಲಿ ಜನಪ್ರಿಯ ವಾಗಿದ್ದಿತು, ಪ್ರಚುರವಾಗಿದ್ದಿತು. ಹೀಗೆ ಪ್ರಚಲಿತವಾಗಿದ್ದ ಜಾನಪದ ಕಥೆಯನ್ನು ವಾಲ್ಮೀಕಿಯು ಕಾವ್ಯವನ್ನಾಗಿ ಪರಿವರ್ತಿಸಿ ಮತ್ತೆ ಕುಶೀಲವರ ವಶಕ್ಕೇ ಒಪ್ಪಿಸಿದನೆನ್ನಬಹುದು. ಕುಶೀಲವರ ನಿರೂಪಣೆಯಿಂದ ಮುಗ್ಧ ರಾದ ಜನ 'ಆಶ್ಚರ್ಯಮಿದಮಾಖ್ಯಾನಂ ಮುನಿನಾ ಸಂಪ್ರಕೀರ್ತಿತಂ', 'ಪರಂ ಕವೀನಾಮಾಧಾರಂ' ಎಂದು ಮುಂತಾಗಿ ಪ್ರಶಂಸಿಸಿದ್ದಾರೆ. ವಾಲ್ಮೀಕಿ ಯೆಂಬ ತಪಸ್ವಿ ಮಾಡಿದ ಕಾವ್ಯವನ್ನು ಕುಶೀಲವರು ಎತ್ತಿಕೊಂಡು ಜನಗಳಿಗೆ ಪರಿಚಯ ಮಾಡಿಕೊಟ್ಟರು. ರಾಮಾಯಣ ಸಾವಿರಾರು ವರ್ಷಗಳ ಕಾಲ ಜನರ ನಿತ್ಯಜೀವನದಲ್ಲಿ ಉಳಿದುಬಂದಿದೆಯಷ್ಟೆ. ಇದಕ್ಕೆ ಊರೂರು ತಿರುಗಿ ನಿರೂಪಣೆ ಮಾಡಿದ ಕುಶೀಲವರೇ ಬಹುಮಟ್ಟಿಗೆ ಕಾರಣ.

ಕುಶಲವರು ರಾಮನ ಮಕ್ಕಳೇ ಆದರೂ ರಾಮ ಅವರನ್ನು ಮೊಟ್ಟಮೊದಲು ಸಂದರ್ಶಿಸಿದುದು ಈ ಕಥನಕಾಲದಲ್ಲೇ, ಆದರೆ ಅವರ ಬಾಂಧವ್ಯದ ಅರಿವಾದುದು ಅನಂತರವೇ, ಎಂಬ ಕಲ್ಪನೆ ನಮ್ಮಲ್ಲಿ ಬೆಳೆದುಬಂದಿದೆ. ಇದು ಮೂಡಿಬಂದಿರುವುದು ಉತ್ತರಕಾಂಡದ ತೊಂಬತ್ತೈದನೆಯ ಸರ್ಗದಲ್ಲಿ ಬರುವ ಪ್ರಸ್ತಾಪದ ಆಧಾರದ ಮೇಲೆ. ಈ ಪ್ರಸ್ತಾಪವೂ ತೀರ ಪ್ರಾಸಂಗಿಕವಾಗಿ ಬಂದಿದೆ. ಇಡೀ ಉತ್ತರಕಾಂಡ ಪ್ರಾಚೀನವೆನ್ನಬಹುದಾದ ಕಥಾಭಾಗವಲ್ಲ. ಕುಶಲವರ ಕಲ್ಪನೆಯೂ ಕಾಲಾಂತರದ ಸೃಷ್ಟಿ.

ಹೀಗೆಯೇ ರಾಮಾಯಣದ ವಸ್ತುವಿನ್ಯಾಸ ಕಾಲಕಾಲಕ್ಕೆ ಕುಶೀಲವರ ಪ್ರತಿಭೆಯಿಂದ ಅನುರಕ್ತಿಯಿಂದ ರೂಪಗೊಂಡಿದೆ. ಬೇರೆಬೇರೆ ಪ್ರದೇಶಗಳಲ್ಲಿ ಬೇರೆಬೇರೆ ಜನರ ರುಚಿ, ಆಕಾಂಕ್ಷೆಗಳನ್ನು ಹಿಡಿದು ಕುಶೀಲವರು ಕಥೆಯನ್ನು ಅಷ್ಟಿಷ್ಟು ಹಿಗ್ಗಿಸಿ, ಕುಗ್ಗಿಸಿ, ಎಳೆದು, ಬಳುಕಿಸಿದ್ದಾರೆ. ವಾಲ್ಮೀಕಿ ಸಿದ್ಧಮಾಡಿದಂತೆಯೇ ಆದಿಕಾವ್ಯ ಇಂದಿಗೂ ನಿಂತಿದೆಯೆನ್ನುವುದು ಸಾಹಸದ ಮಾತು; ರಾಮಾಯಣದ ಇಂದಿನ ಸ್ವರೂಪದಲ್ಲಿ ನೂರಾರು ಕುಶೀಲವರ ಕೈವಾಡ ನಿಃಸಂದೇಹವಾಗಿ ಕಾಣುತ್ತದೆ. ಇದೇ ರಾಮಾಯಣದ

ವೈಶಿಷ್ಟ್ಯ. ವಾಲ್ಮೀಕಿಯೇನೋ ಆದಿಕವಿ; ನಾಡಿನ ವೀರರ ಕಥೆಯಲ್ಲಿ ನವರಸಗಳನ್ನು ಊಡಿಸಿದ ಪುಣ್ಯಾತ್ಮ ಅವನೇ. ಆದರೆ ಇಡೀ ಜನತೆ ಎತ್ತಿನಿಲ್ಲಿಸಿದ ಕಥೆ ಇದು; ಜನರೆಲ್ಲರ ಆಶೆ, ಆದರ್ಶಗಳನ್ನು ಒಳಗೊಂಡು ಅವತರಿಸಿದ ಸ್ವರೂಪ ಅದರದ್ದು. ಅದು ರೂಪಗೊಂಡಂದಿನಿಂದ ಇಂದಿನವರೆಗೂ ಜನರ ನಿತ್ಯಜೀವನದಲ್ಲೇ ಹಾಸುಹೊಕ್ಕಾಗಿ ಸೇರಿಕೊಂಡು ಬಂದಿದೆ. ಪ್ರಸ್ಥಾನದಂತೆ ಗಂಭೀರವಾಗಿ ದೂರ ನಿಂತು ಬಳಿಗೆ ಬಂದವರನ್ನು ಮಾತ್ರ ಸಂತೈಸುವ ಗ್ರಂಥವಲ್ಲ ಇದು. ಎಲ್ಲರಿಗೂ ಎಲ್ಲ ಕಾಲಕ್ಕೂ ನೆರವಾಗಿ ನಿಂತ ನಾಡಕಥೆ.

ಹೀಗಾದುದರಿಂದ ರಾಮಾಯಣದಲ್ಲಿ ಹಲವಾರು ಪಾಠಭೇದಗಳು ಅನಿವಾರ್ಯವಾಗಿ ಒದಗಿಬಂದಿವೆ; ಪ್ರಕ್ಷಿಪ್ತಗಳು ಅಸಂಖ್ಯಾತವಾಗಿ ಸೇರಿಕೊಂಡಿವೆ. ಪಾಂಕ್ತ ಅಥವಾ ಪ್ರಾಚೀನವೆನ್ನಬಹುದಾದ ಪಾಠವನ್ನು ಈಗ ನಿರ್ಧರಿಸುವುದು ಕಷ್ಟ. ಸ್ಥೂಲವಾಗಿ ಪಂಡಿತರು ಉಪಲಬ್ಧವಿರುವ ರಾಮಾಯಣದ ಪಾಠಗಳನ್ನೆಲ್ಲ ನಾಲ್ಕು ವರ್ಗಗಳಲ್ಲಿ ಅಡಕಮಾಡುತ್ತಾರೆ. ಈ ನಾಲ್ಕು ಭಾರತದ ಬೇರೆಬೇರೆ ಭಾಗಗಳಲ್ಲಿ ಪ್ರಚುರವಾಗಿವೆ. ಪಶ್ಚಿಮೋತ್ತರ ಭೂಭಾಗದ ಪಾಠ, ಬಂಗಾಳದ ಪಾಠ, ದಾಕ್ಷಿಣಾತ್ಯಪಾಠ ಮತ್ತು ಔದೀಚ್ಯಪಾಠ—ಇವೇ ಪ್ರಮುಖವಾದ ಪಾಠಭೇದಗಳು. ಇವುಗಳಲ್ಲಿ ದಾಕ್ಷಿಣಾತ್ಯ ಮತ್ತು ಔದೀಚ್ಯಪಾಠಗಳು ಸುಮಾರಾಗಿ ಒಂದೇ ಎನ್ನಬಹುದು. ಈ ಪಾಠವೇ ಇಂದು ಸಾಮಾನ್ಯವಾಗಿ ದೇಶದಲ್ಲೆಲ್ಲಾ ಬಳಕೆಯಲ್ಲಿರುವುದು.

ಮಹಾಕಾವ್ಯ

ವಾಲ್ಮೀಕಿಯ ಆರ್ಷರಾಮಾಯಣ ದೊಡ್ಡ ಪ್ರಮಾಣದ ಗ್ರಂಥ. ಏಳು ಕಾಂಡಗಳು, ಐನೂರು ಸರ್ಗಗಳು ಮತ್ತು ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳು ಇರುವ ಗ್ರಂಥ ಇದು. ಈ ವಿಸ್ತಾರವನ್ನು ಬಾಲಕಾಂಡದ ಒಂದು ಶ್ಲೋಕವೇ ಹೇಳುತ್ತದೆ—

ಚತುರ್ವಿಂಶತ್ಸಹಸ್ರಾಣಿ ಶ್ಲೋಕಾನಾಮುಕ್ತವಾನೃಷಿಃ ।
ತಥಾ ಸರ್ಗಶತಾನ್ ಪಂಚ ಷಟ್ಕಾಂಡಾನಿ ತಥೋತ್ತರಮ್ ॥

ಇಷ್ಟಲ್ಲದೆ ಈ ಗ್ರಂಥವನ್ನು ಕಾವ್ಯವೆಂದು ನಿರ್ದೇಶಿಸಿದೆ. ಅದನ್ನು 'ಪಾಠೇ ಗೇಯೇ ಚ ಮಧುರಂ', 'ಜಾತಿಭಿಃ ಸಪ್ತಭಿರ್ಯುಕ್ತಂ', 'ತಂತ್ರೀಲಯಸಮನ್ವಿತಂ', 'ಉಪಗತಸಮಾಸಸಂಧಿಯೋಗಂ', 'ಸಮಮಧುರೋಪನಾರ್ಥವಾಕ್ಯಬದ್ಧಂ' ಎಂದು ಮುಂತಾಗಿ ಬಾಲಕಾಂಡವೇ ವರ್ಣಿಸುತ್ತದೆ. ಈ ಪ್ರಶಸ್ತಿಯೂ ಪ್ರಸಿದ್ಧವಾಗಿದೆ—

ಉದಾರವೃತ್ತಾರ್ಥಪದೈರ್ಮನೋರಮ್ಯೈ-
ಸ್ತದಾಸ್ಯ ರಾಮಸ್ಯ ಚಕಾರ ಕೀರ್ತಿಮಾನ್ ॥
ಸಮಾಕ್ಷರೈಃ ಶ್ಲೋಕಶತೈರ್ಯಶಸ್ವಿನೋ
ಯಶಸ್ಕರಂ ಕಾವ್ಯಮುದಾರದರ್ಶನಃ ॥

ಈ ಪಾಠ್ಯರಾಮಾಯಣಕ್ಕೆ ಹಲವಾರು ಪ್ರಗಲ್ಭ ವ್ಯಾಖ್ಯಾನಗಳಿವೆ. ಇವುಗಳಲ್ಲೆಲ್ಲ ತುಂಬ ಪ್ರಸಿದ್ಧವಾದುದು ಕಂಚಿಯ ಗೋವಿಂದರಾಜನೆಂಬಾತ ಸಿದ್ಧಪಡಿಸಿದ 'ಭೂಷಣ'ವೆಂಬ ವ್ಯಾಖ್ಯೆ. ಈತ ಶೋಲಿಂಗೂರಿನ ಶ್ರೀವೈಷ್ಣವಬ್ರಾಹ್ಮಣ; ಹದಿನಾರನೆಯ ಶತಮಾನದಲ್ಲಿದ್ದವನು. ಸುಪ್ರಸಿದ್ಧ

ಪಂಡಿತನಾಗಿದ್ದ ನಾಗೋಜಿದೀಕ್ಷಿತನು 'ತಿಲಕ'ವೆಂಬ ಟೀಕೆಯನ್ನು ಬರೆದಿದ್ದಾನೆ. ನಾರಾಯಣತೀರ್ಥಯತಿಯ ಶಿಷ್ಯ ಮಹೇಶತೀರ್ಥರೆನ್ನುವರು 'ರಾಮಾಯಣತತ್ತ್ವದೀಪಿಕಾ' (ತೀರ್ಥೀಯ) ಎಂಬ ಟೀಕೆಯನ್ನು ಬರೆದು ಉಪಕಾರ ಮಾಡಿದ್ದಾರೆ. 'ಧರ್ಮಕೂತ'ವೆಂಬುದು ಇನ್ನೊಂದು ಸೊಗಸಾದ ವ್ಯಾಖ್ಯೆ. ಇದನ್ನು ಬರೆದ ತ್ರ್ಯಂಬಕರಾಜದೀಕ್ಷಿತರು ತಂಜಾವೂರಿನ ದೊರೆಗಳ ಬಳಿ ಅಧಿಕಾರಿಯಾಗಿದ್ದು, ವೃದ್ಧಾಪ್ಯದಲ್ಲಿ ಕುಂಭಕೋಣದ ಸಮೀಪದ ಸ್ವಾಮಿಮಲೆಯಲ್ಲಿ ತಪಸ್ಸುಮಾಡಿ ಮುಕರಾದವರು. ಆತ್ರೇಯಗೋತ್ರದ ಅಹೋಬಲಸ್ವಾಮಿಗಳು 'ವಾಲ್ಮೀಕಿಹೃದಯ'ವೆಂಬ ವ್ಯಾಖ್ಯಾನವನ್ನು ನಿರ್ಮಿಸಿದ್ದಾರೆ. ರಾಮಾಯಣದಲ್ಲಿ ಕಷ್ಟವೆನಿಸಿದ ಘಟನೆಗಳನ್ನು ಎತ್ತಿಕೊಂಡು ದೇವರಾಮಭಟ್ಟನೆಂಬುವನು 'ರಾಮಾಯಣವಿಷಮಪದಾರ್ಥವ್ಯಾಖ್ಯಾನ'ವನ್ನು ಸಿದ್ಧಪಡಿಸಿದ್ದಾನೆ.

ಕಿಡಾಂಬಿರಂಗಾಚಾರ್ಯನ 'ರಾಮಾಯಣಾನ್ವಯೀ', ಪ್ರಬಲ ಮುಕುಂದಸೂರಿಯ 'ರಾಮಾಯಣಭೂಷಣ', ಅಭಿನವ ರಾಮಭದ್ರಾಶ್ರಮಿಯ 'ಸುಬೋಧಿನೀಟೀಕಾ', ಚೋಳಪಂಡಿತ ಬ್ರಹ್ಮಾಧಿರಾಜನ 'ರಾಮಾಯಣಸಾರಸಂಗ್ರಹ', ಅಪ್ಪಯ್ಯದೀಕ್ಷಿತರ 'ರಾಮಾಯಣತಾತ್ಪರ್ಯನಿರ್ಣಯ', ಹರಿಪಂಡಿತನ 'ಗುರುವಾಲ್ಮೀಕಿಭಾವಪ್ರಕಾಶಿಕಾ', ವೇಂಕಟೇಶ್ವರನ 'ಸರ್ವಾರ್ಥಸಾರ', ರಾಮಾನಂದತೀರ್ಥರ 'ರಾಮಾಯಣಕೂಟವ್ಯಾಖ್ಯೆ'; ಇವಲ್ಲದೆ 'ರಾಮಾಯಣಸೇತು', 'ಶೃಂಗಾರಸುಧಾಕರ', 'ಚತುರರ್ಥದೀಪಿಕಾ', 'ರಾಮಾಯಣವಿರೋಧಪರಿಹಾರ', 'ತಾತ್ಪರ್ಯತರಣಿ'—ಹೀಗೆ ನೂರಾರು ಸಂಸ್ಕೃತವ್ಯಾಖ್ಯಾನಗಳು ಪ್ರಚಲಿತವಾಗಿವೆ.

ಇಂದಿನ ರಾಮಾಯಣ ಎಂದು ರೂಪ ತಳೆಯಿತೆಂದು ಹೇಳುವುದು ಕಷ್ಟ. ಕ್ರಿಸ್ತಪೂರ್ವ ಮೂರನೆಯ ಶತಮಾನದ ಸುಮಾರಿಗೆ ವಾಲ್ಮೀಕಿ ತನ್ನ ಆದಿಕಾವ್ಯವನ್ನು ಸಿದ್ಧಪಡಿಸಿದನೆಂದೂ, ಕ್ರಿಸ್ತಾಬ್ದ ಎರಡನೆಯ ಶತಮಾನದ ಸುಮಾರಿಗೆ ಇಂದು ಬಳಕೆಯಲ್ಲಿರುವ ಪಾಠ ಪ್ರವರ್ತಿತವಾಯಿತೆಂದೂ ಹಲವು ವಿದ್ವಜ್ಜನರ ಊಹೆ. ಇಂದಿನ ಪಾಠದಲ್ಲಿ ವಾಲ್ಮೀಕಿ ಹೇಳಿದ ಕಥೆ ಎಷ್ಟು, ಕಾಲಕಾಲಕ್ಕೆ ಸೇರಿಕೊಂಡುಬಂದ ಭಾಗ ಎಷ್ಟು—ಎಂದು ನಿರ್ಧರಿಸುವ ಪ್ರಯತ್ನವೂ ನಡೆದಿದೆ. ಖಚಿತವಾಗಿ ಏನನ್ನೂ ಹೇಳುವುದು

ಸಾಧ್ಯವಿಲ್ಲ, ನಿಜ. ಆದರೆ ಕೆಲವು ವಿವರಗಳು ತಾವಾಗಿ ಸ್ಪಷ್ಟವಾಗುತ್ತವೆ. ನಿದರ್ಶನಕ್ಕೆ ಬಹುಮಟ್ಟಿಗೆ ಬಾಲಕಾಂಡ, ಇಡೀ ಉತ್ತರಕಾಂಡ ವಾಲ್ಮೀಕಿಯ ದಲ್ಲವೆಂಬುದು. ವಾಲ್ಮೀಕಿಯ ಪ್ರಸ್ತಾಪದಿಂದಲೇ ಅಪ್ರಾಕೃತ ವಾಗಿ ಆರಂಭವಾಗುವ ಬಾಲಕಾಂಡದಲ್ಲಿ ರಾಮಾಯಣದ ಎರಡು ವಿಭಿನ್ನ ಸಂಗ್ರಹಸರ್ಗಗಳಿವೆ, ವಾಲ್ಮೀಕಿಯ ಶೋಕ ಶ್ಲೋಕವಾದ ಪ್ರಸಂಗವಿದೆ. ಉತ್ತರಕಾಂಡವನ್ನು ಬಿಟ್ಟರೆ ಉಳಿದ ಯಾವ ಕಾಂಡದಲ್ಲೂ ಕಾಣಬರದ ಉಪಕಥೆಗಳ ಸಂಭ್ರಮವಿದೆ. ಈ ಕಾಂಡದ ಕಥಾಸಂಗ್ರಹ ಸರ್ಗಗಳಲ್ಲಿ ಬಾಲಕಾಂಡದ ವೃತ್ತಾಂತಗಳು ಸೇರಿಲ್ಲದಿರುವುದು ಸ್ವಾರಸ್ಯವಾದ ವಿವರ. ಬಾಲಕಾಂಡದಲ್ಲಿ ಬರುವ ಅಯೋಧ್ಯಾವರ್ಣನೆ, ದಶರಥನ ಅಶ್ವಮೇಧ ಯಾಗ, ರಾಮಜನ್ಮ ವಿವಾಹ ಮುಂತಾದ ವಿವರಗಳನ್ನು ಉಳಿದ ಕಾಂಡಗಳು ಎಲ್ಲೂ ಉಲ್ಲೇಖಿಸುವುದಿಲ್ಲ.

ಅಷ್ಟು ಮಾತ್ರವಲ್ಲ, ಬಾಲಕಾಂಡದ ನಿರೂಪಣೆ, ಉಳಿದ ಕಾಂಡಗಳ ನಿರೂಪಣೆ ಪರಸ್ಪರ ವಿರುದ್ಧವಾಗಿರುವುದೂ ಉಂಟು. ಉದಾಹರಣೆಗೆ, ಬಾಲಕಾಂಡದಲ್ಲಿ ಲಕ್ಷ್ಮಣ ಊರ್ಮಿಳೆಯನ್ನು ಮದುವೆಯಾಗಿ ಅಯೋಧ್ಯೆಗೆ ಅವಳನ್ನು ಕರೆತರುವ ವಿವರವಿದೆ. ಆದರೆ ಮುಂದೆಲ್ಲೂ ಊರ್ಮಿಳೆಯ ಮಾತೇ ಇಲ್ಲ. ಲಕ್ಷ್ಮಣ ಕಾಡಿಗೆ ಹೊರಡುವಾಗಲೂ ಊರ್ಮಿಳೆಯ ವಿಚಾರವಿಲ್ಲ. ಲಕ್ಷ್ಮಣ ಕಾಡಿಗೆ ಬರದೆ ಅಯೋಧ್ಯೆಯಲ್ಲೇ ಇರಬೇಕೆನ್ನಲು ಹಲವಾರು ಕಾರಣಗಳನ್ನು ಹೇಳುವ ರಾಮ ಊರ್ಮಿಳೆಯ ಹೆಸರನ್ನೇ ಎತ್ತುವುದಿಲ್ಲ. ಅಷ್ಟು ಮಾತ್ರವಲ್ಲ, ಅರಣ್ಯಕಾಂಡದಲ್ಲಿ ಶೂರ್ಪಣಖೆ ರಾಮನನ್ನು ಮದುವೆಯಾಗೆಂದು ಕಾಡಿದಾಗ ರಾಮ ಆಕೆಯನ್ನು ಲಕ್ಷ್ಮಣನ ಬಳಿಗೆ ಕಳುಹಿಸುತ್ತ 'ಅವನನ್ನು ಕೇಳು, ಅವನಿಗಿನ್ನೂ ಮದುವೆಯಾಗಿಲ್ಲ ('ಅಕೃತದಾರ')'ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಹಾಸ್ಯಕ್ಕಾದರೂ ವಾಲ್ಮೀಕಿಯ ರಾಮ ಸುಳ್ಳುಹೇಳಲಾರನಷ್ಟೆ.

ಅನೃತಂ ನ ಹಿ ರಾಮಸ್ಯ ಕದಾಚಿದಪಿ ಸಂಮತಮ್

ಉತ್ತರಕಾಂಡವಂತೂ ವಾಲ್ಮೀಕಿಗೆ ನಾಚಿಕೆ ತರುವಂತ ಸುಳ್ಳಿನ ಕಂತೆ. ಇದನ್ನು ಬರೆದು ಸೇರಿಸಿದ ಕವಿಗೆ ಔಚಿತ್ಯಜ್ಞಾನವೇ ಇಲ್ಲ. ರಾಮನ

ವ್ಯಕ್ತಿತ್ವದ ಘನತೆ-ಗಾಂಭೀರ್ಯಗಳಿಗೆ ಈ ಕಥಾಭಾಗದಲ್ಲಿ ನಿಃಸಂದೇಹವಾಗಿ ಕುಂದುಬಂದಿದೆ. ಧೀರೋದಾತ್ತನಾಯಕನಾದವನು, ಲೋಕೋತ್ತರ ಚಾರಿತ್ರ್ಯವುಳ್ಳವನು ಮಾಡಲಾರದುದನ್ನು, ಮಾಡಬಾರದುದನ್ನು ಉತ್ತರ ಕಾಂಡ ಮಾಡಿಸುತ್ತದೆ. ಒಂದು ಕಾಲಕ್ಕೆ ಪ್ರಚುರವಾಗಿದ್ದ ರಾಮನ ಕಥೆಯಲ್ಲಿ ಈ ಉತ್ತರಚರಿತೆ ಇರಲಿಲ್ಲವೆಂಬುದು ಸ್ಫುಟವಾಗುತ್ತದೆ. ಬಾಲಕಾಂಡದಲ್ಲಿ ಬರುವ ಮೊದಲನೆಯ ಕಥಾಸಂಗ್ರಹದಲ್ಲಿ ಉತ್ತರಕಾಂಡದ ವಿವರಗಳ ಪ್ರಸ್ತಾಪವೇ ಇಲ್ಲ. ಎರಡನೆಯ ಕಥಾಸಂಗ್ರಹದಲ್ಲಿ 'ವೈದೇಹಿಯ ವಿಸರ್ಜನೆ' ಯೆಂದಷ್ಟೇ ಹೇಳಿ 'ಅನಾಗತಂ ಚ ಯತ್ ಕಿಂಚಿತ್' ಎಂದು ವಿವರಿಸಿಯೂ ಇರುವುದು ಸ್ವಾರಸ್ಯವಾಗಿದೆ. ಬಾಲಕಾಂಡದ ನಾಲ್ಕನೆಯ ಸರ್ಗದಲ್ಲಿ ರಾಮಾಯಣಕಾವ್ಯದ ಪ್ರಸ್ತಾಪ ಬಂದಾಗ 'ಷಟ್ ಕಾಂಡಾನಿ' ಎಂದು ಸ್ಪಷ್ಟವಾಗಿ ಹೇಳಿದೆ. ಮಹಾಭಾರತದಲ್ಲಿ ಬರುವ 'ರಾಮೋಪಾಖ್ಯಾನ'ದಲ್ಲಿ ಕೂಡ ಕಥೆ ರಾಮಪಟ್ಟಾಭಿಷೇಕದಲ್ಲೇ ಪರ್ಯವಸಾನವಾಗುತ್ತದೆ.

ರಾಮನ ಕಥೆ ಸಹಜವಾಗಿ ಆರನೆಯ ಯುದ್ಧಕಾಂಡದಲ್ಲಿ (ಇದನ್ನು ಲಂಕಾಕಾಂಡವೆಂದೂ ಕರೆಯುತ್ತಾರೆ) ಮುಕ್ತಾಯವಾಗುತ್ತದೆ. ಕಾಂಡ ಸಮಾಪ್ತಿಯಲ್ಲಿ ಗ್ರಂಥ ಮುಗಿಯಿತೆಂದು ಸೂಚಿಸುವ ಫಲಶ್ಲೋಕಗಳೂ ಉಂಟು.

> ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
> ಭ್ರಾತೃಭಿಃ ಸಹಿತಃ ಶ್ರೀಮಾನ್ ರಾಮೋ ರಾಜ್ಯಮಕಾರಯತ್ ॥

ಎಂಬ ಶ್ಲೋಕವೇ ಕಾವ್ಯದ ಪರಿಸಮಾಪ್ತಿ ಎನ್ನುವ ವಾದದಲ್ಲಿ ಬಲವುಂಟು. ಇಲ್ಲಿಂದ ಮುಂದೆ 'ಆದಿಕಾವ್ಯಮಿದಂ ತ್ವಾರ್ಷ ಪುರಾ ವಾಲ್ಮೀಕಿನಾ ಕೃತಂ' ಇತ್ಯಾದಿಯಾಗಿ ಕಾವ್ಯಪ್ರಶಸ್ತಿ, ಫಲಶ್ಲೋಕಗಳು ಬರುತ್ತವೆ. ಹೀಗೆ ನೈಜವಾಗಿ ಮುಗಿದ ಕಥೆ ಉತ್ತರಕಾಂಡದಲ್ಲಿ ಮತ್ತೆ ವಿಕಾರವಾಗಿ ಆರಂಭವಾಗುವುದು ಅಪ್ರಾಕೃತ, ರಸಾಭಾಸ. ಯುದ್ಧಕಾಂಡದಲ್ಲಿ ಸತ್ತ ರಾವಣ ಉತ್ತರಕಾಂಡದಲ್ಲಿ ಮತ್ತೆ ಹುಟ್ಟುಕೊಳ್ಳುತ್ತಾನೆ; ಅವನ ಕಥೆಯೆಲ್ಲ ವಿಸ್ತಾರವಾಗಿ ಬರುತ್ತದೆ; ಅನರಣ್ಯ, ನಲಕೂಬರ, ವಾಲಿ, ರಂಭೆ ಇವರ ವೃತ್ತಾಂತವೆಲ್ಲ ಬರುತ್ತದೆ;

ಹನುಮಂತನ ಜನ್ಮವೃತ್ತಾಂತ ಅನಾವಶ್ಯಕವಾಗಿ ಇಲ್ಲಿ ಮೊದಲಬಾರಿಗೆ ಕಾಣಿಸಿಕೊಳ್ಳುತ್ತದೆ; ಸೀತಾಪರಿತ್ಯಾಗವಂತೂ ಪ್ರಮುಖವಾಗಿ ಬರುತ್ತದೆ. ರಾಮನ ಕಥೆಗೂ ಈ ಕಾಂಡದ ಪ್ರಸಂಗಗಳಿಗೂ ಸಂಬಂಧವೇ ಇಲ್ಲ; ಶೈಲಿಯಲ್ಲೂ ವೈಪರೀತ್ಯವುಂಟು. ಉಳಿದ ಕಾಂಡಗಳಲ್ಲಿರುವ ನಿರೂಪಣೆಯ ಓಘ, ಇಲ್ಲಿ ಅನಗತ್ಯವಾದ, ಅಪ್ರಸ್ತುತವಾದ ಕಥೆಗಳಿಂದ, ಉಪಕಥೆಗಳಿಂದ ಒಡೆದಿದೆ.

ಉತ್ತರಕಾಂಡ ಕ್ರಿಸ್ತಾಬ್ದ ನಾಲ್ಕನೆಯ ಶತಮಾನದ ಅನಂತರ ಸಿದ್ಧವಾಯಿತೆಂದು ಹಲವು ಪಂಡಿತರ ಎಣಿಕೆ. ಪದ್ಮಪುರಾಣದ ಪ್ರಭಾವ ಈ ಕಾಂಡದಲ್ಲಿ ಕಾಣುತ್ತದೆ; ಈ ಪುರಾಣ ಕಿಸ್ತಾಬ್ದ 330ರ ಸುಮಾರಿಗೆ ರೂಪುಗೊಂಡಿತೆನ್ನುತ್ತಾರೆ. ಪದ್ಮಪುರಾಣದ ಪಾತಾಳಖಂಡವೆಂಬ ಪರಿಚ್ಛೇದದಲ್ಲಿ ರಾಮನ ವಿಜಯದಿಂದ ಪಟ್ಟಾಭಿಷೇಕದವರೆಗಿನ ವೃತ್ತಾಂತಗಳು, ರಾಮ ಮಾಡಿದ ಅಶ್ವಮೇಧಯಾಗ, ಲವಕುಶರೊಂದಿಗೆ ನಡೆದ ಸಮರ ಮುಂತಾದ ವಿವರಗಳನ್ನೆಲ್ಲ ಹೇಳಿದ್ದಾರೆ. ಈ ವಿವರಗಳನ್ನೇ ವಿಸ್ತರಿಸಿ ಉತ್ತರಕಾಂಡವನ್ನು ರಚಿಸಿದಂತೆ ತೋರುತ್ತದೆ. ಕ್ರಿಸ್ತಾಬ್ದ ಒಂದೆರಡನೆಯ ಶತಮಾನಗಳಲ್ಲಿ ವಾಲ್ಮೀಕಿರಾಮಾಯಣ ಜಾವಾದ್ವೀಪದ ಕವಿಭಾಷೆಗೆ ಪರಿವರ್ತಿತವಾಯಿತು; ಇದರಲ್ಲಿ ಉತ್ತರಕಾಂಡ ಸೇರಿಲ್ಲ ದಿರುವುದು ಗಮನಾರ್ಹವಾಗಿದೆ. ಅವರ ಸಂಪ್ರದಾಯದಲ್ಲಿ ಉತ್ತರಕಾಂಡ ರಾಮಾಯಣದಲ್ಲಿ ಸೇರದೆ ಸ್ವತಂತ್ರಗ್ರಂಥವಾಗಿ ಉಳಿದಿದೆ. ಚೀಣೀ ಭಾಷೆಯಲ್ಲಿ ಕಿಸ್ತಾಬ್ದ ಮೂರನೆಯ ಶತಮಾನದಲ್ಲಿ ರಾಮಾಯಣದ ಒಂದು ಪ್ರಾಚೀನ ಪಾಠ ಸಿದ್ಧವಾಗಿದೆ; ಇದನ್ನು ಪ್ರೊ. ಹ್ಯುಬರ್ ಎಂಬ ಪಂಡಿತರು ಸಂಶೋಧನೆ ಮಾಡಿ ಪ್ರಕಟಿಸಿದ್ದಾರೆ; ಈ ಪಾಠದಲ್ಲಿ ಕೂಡ ಉತ್ತರಕಾಂಡದ ಕಥಾಭಾಗ ಸೇರಿಲ್ಲ, ಸೀತೆಯ ಅಗ್ನಿಪರೀಕ್ಷೆಯೊಂದಿಗೆ ಈ ನಿರೂಪಣೆ ಮುಗಿಯುತ್ತದೆ. ಅನ್ನಾಂದೇಶದಲ್ಲಿ ಪ್ರಚುರವಾಗಿರುವ ರಾಮಾಯಣವೂ ಯುದ್ಧಕಾಂಡದಲ್ಲೇ ಸಮಾಪ್ತವಾಗುತ್ತದೆ.

ಉಳಿದ ಕಾಂಡಗಳಲ್ಲಿಯೂ ಅಲ್ಲಲ್ಲಿ ಪ್ರಕ್ಷಿಪ್ತವಾದ ಭಾಗಗಳಿವೆ. ನಿದರ್ಶನಕ್ಕೆ ಯುದ್ಧಕಾಂಡದಲ್ಲಿ ಸೀತೆಯ ಅಗ್ನಿಪರೀಕ್ಷೆಯ ಪ್ರಸಂಗ. ಸೀತೆಯ ನಡತೆಯನ್ನು ಶಂಕಿಸಿ ('ಪ್ರಾಪ್ತಚಾರಿತ್ರಸಂದೇಹಾ') ಆಕೆಗೆ ಲಕ್ಷ್ಮಣನನ್ನೋ

ವಿಭೀಷಣನನ್ನೋ ಸುಗ್ರಿವನನ್ನೋ ಆರಿಸಿಕೊಂಡು ಬಾಳೆಂದು ರಾಮ ಹೇಳುವ ಸನ್ನಿವೇಶ ದಾರುಣವಾದದ್ದು; ರಾಮನ ವ್ಯಕ್ತಿತ್ವಕ್ಕೆ, ಕಾವ್ಯದ ಗಾಂಭೀರ್ಯಕ್ಕೆ, ಅನುವಾದದ್ದಲ್ಲ. ಈ ಸಂದೇಹನಿವೃತ್ತಿಗಾಗಿ ಪ್ರಸಕ್ತವಾದ ಅಗ್ನಿಪರೀಕ್ಷೆಯೂ ಪ್ರಾಚೀನಪಾಠದಲ್ಲಿ ಇದ್ದಿರಲಾರದು. ಬಾಲಕಾಂಡದ ಕಥಾಸಂಗ್ರಹಸರ್ಗಗಳಲ್ಲಿ ಅಗ್ನಿಪರೀಕ್ಷೆಯ ಉಲ್ಲೇಖವಿಲ್ಲ. ಉತ್ತರಕಾಂಡದಲ್ಲಿ ಸೀತೆಯ ಮೇಲೆ ಲೋಕಾಪವಾದ ಎರಗಿದಾಗಲೂ ಅಗ್ನಿಪರೀಕ್ಷೆಯಿಂದ ಮೊದಲೇ ಸೀತೆ ಶುದ್ಧಳಾಗಿದ್ದಳೆಂಬ ಪ್ರಸ್ತಾಪವಿಲ್ಲ. ಮಹಾಭಾರತದ 'ರಾಮೋಪಾಖ್ಯಾನ'ವಾಗಲೀ ವಾಲ್ಮೀಕಿರಾಮಾಯಣದ ಬಂಗಾಳ ಪಾಠವಾಗಲೀ ಇದನ್ನು ಹೇಳುವುದಿಲ್ಲ.

ರಾಮನ ಮನೋಧರ್ಮವನ್ನು ಬಲ್ಲವರಿಗೆ, ಸೀತಾರಾಮರ ದಾಂಪತ್ಯ ಪ್ರವೃತ್ತಿಯನ್ನು ಅರಿತವರಿಗೆ, ವಾಲ್ಮೀಕಿಯ ಹೃದಯವನ್ನು ತಿಳಿದವರಿಗೆ ಈ ಸನ್ನಿವೇಶ ಸರಿಯೆನಿಸುವುದಿಲ್ಲ. ಸೀತೆಯೇನೋ 'ರಾವಣಾಂಕಪರಿಕ್ಲಿಷ್ಟೆ', 'ದೃಷ್ಟಾ ದುಷ್ಟೇನ ಚಕ್ಷಿಷಾ'. ಆದರೆ ಇಷ್ಟು ಮಾತ್ರಕ್ಕೆ ರಾಮ ಕಠಿನನಾಗಿ ರೋಷದಿಂದ ಸೀತೆಗೆ 'ನಾಸ್ತಿ ಮೇ ತ್ವಯ್ಯಭಿಷ್ವಂಗಃ, ಯಥೇಷ್ಟಂ ಗಮ್ಯತಾಂ' ಎಂದು ಹೇಳಿಯಾನೆಂದು ಯಾವ ಸಹೃದಯನೂ ನಿರೀಕ್ಷಿಸುವುದಿಲ್ಲ. 'ಮಿಥ್ಯಾವಾದೋಪಹತ'ಳಾಗಿ ಸೀತೆ ಬೆಂಕಿಗೆ ಬಿದ್ದರೆ ಬ್ರಹ್ಮನು ಬಂದು ರಾಮನಿಗೆ,

ಸೀತಾ ಲಕ್ಷ್ಮೀರ್ಭವಾನ್ ವಿಷ್ಣುಃ..... ವಧಾರ್ಥಂ
ರಾವಣಸ್ಯೇಹ ಪ್ರವಿಷ್ಟೋ ಮಾನುಷೀಂ ತನೂಂ

ಎಂದು ನೆನಪು ಮಾಡಿಕೊಡುವುದು ಹಾಸ್ಯಾಸ್ಪದವಾಗಿದೆ. ಇದನ್ನು ಹೇಳುವ 118ನೆಯ ಸರ್ಗದ ಕೊನೆಯಲ್ಲಿ ಒಂದು ಫಲಶ್ಲೋಕವನ್ನೂ ಸೇರಿಸಿ ಪ್ರಕ್ಷಿಪ್ತವಾದುದನ್ನು ಸಮರ್ಥಿಸಿದ್ದಾರೆ.

ಯುದ್ಧಕಾಂಡದಲ್ಲಿ ಬರುವ ಯುದ್ಧನಿರೂಪಣೆಯಲ್ಲೂ ಪ್ರಕ್ಷಿಪ್ತವಾದ ಭಾಗಗಳು ಹಲವಾರು ಸೇರಿಕೊಂಡಿವೆ. ಇಂದ್ರಜಿತನ ಮರಣಕ್ಕೆ ಮುಂಚೆ ಯುದ್ಧ ನಡೆದದ್ದು ಮೂರು ದಿನಗಳು ಮಾತ್ರ ('ಅಹೋರಾತ್ರೈಸ್ತ್ರಿಭಿಃ') ಎಂದು ರಾಮಾಯಣದಲ್ಲೇ ಸ್ಪಷ್ಟವಾಗಿ ಹೇಳಿದೆ; ಮರುದಿವಸವೇ ರಾವಣ ಸತ್ತದ್ದು.

ಒಟ್ಟು ನಾಲ್ಕು ದಿನಗಳ ಯುದ್ಧ ಅಷ್ಟೆ. ಆದರೆ ಅರವತ್ತು ಸರ್ಗಗಳಲ್ಲಿ ಇರುವ ಅದ್ಭುತವೃತ್ತಾಂತಗಳ ವರ್ಣನೆ ಸಮಂಜಸವಾಗಿ ಕಾಣುವುದಿಲ್ಲ. ಯಾವುದೋ ಕಾಲದ ಕುಶೀಲವರು ಕವಿಸಮಯವನ್ನು ಬಳಸಿಕೊಂಡು ಕೇಳುವವರಲ್ಲಿ ವೀರರಸವನ್ನು ತುಂಬಿಸಲು ಯುದ್ಧಕಾಂಡವನ್ನು ಅತಿಯಾಗಿ ವಿಸ್ತರಿಸಿದ್ದಾರೆ.

ಹೀಗೆ ವಾಲ್ಮೀಕಿಯ ಕಾವ್ಯದಲ್ಲಿ ಕಾಲಕಾಲಕ್ಕೆ ಹೊಸಹೊಸ ಭಾಗಗಳನ್ನು ಸೇರಿಸಿರುವುದು ಸ್ಪಷ್ಟವಾಗಿದೆ. ಬಾಲಕಾಂಡದಲ್ಲೂ ಯುದ್ಧಕಾಂಡದಲ್ಲೂ ಪ್ರಕ್ಷಿಪ್ತವಾದ ಭಾಗಗಳು ಹಲವಾರು ಇವೆ; ಇಡೀ ಉತ್ತರಕಾಂಡವೇ ಅನಂತರ ಸೇರಿಸಿದ್ದು. ಅಯೋಧ್ಯಾ, ಅರಣ್ಯ, ಕಿಷ್ಕಿಂಧಾ, ಸುಂದರ ಕಾಂಡಗಳು ಸಾಮಾನ್ಯವಾಗಿ ಇದ್ದಹಾಗೆಯೇ ಇವೆಯೆನ್ನಬಹುದು. ಇವುಗಳಲ್ಲಿ ಸ್ಥೂಲವಾಗಿ ಒಂದು ಏಕಸೂತ್ರವುಂಟು; ನಿರೂಪಣೆ ಅವ್ಯಾಹತವಾಗಿ ಸಾಗಿದೆ; ಅಸಂಬದ್ಧವಾದ ಪ್ರಸಂಗಗಳು ಅಷ್ಟಾಗಿ ಬರುವುದಿಲ್ಲ.

ಇತಿಹಾಸದ ಹಿನ್ನೆಲೆ

ನಮ್ಮವರು ರಾಮಾಯಣವನ್ನು ಕಾವ್ಯವೆಂದೂ ಮಹಾಭಾರತವನ್ನು ಇತಿಹಾಸವೆಂದೂ ಪರಿಗಣಿಸಿದ್ದಾರೆ. ಇದರಿಂದ ಭಾರತವೃತ್ತಾಂತ ನಿಜವಾಗಿ ನಡೆದದ್ದೆಂದೂ ರಾಮಾಯಣದ ಕಥೆ ಕೇವಲ ಕಾಲ್ಪನಿಕವೆಂದೂ ಕೆಲವು ಪಾಶ್ಚಾತ್ಯಪಂಡಿತರು ಊಹಿಸಲು ಅವಕಾಶವಾಗಿದೆ.

ಆದರೆ ರಾಮನಿದ್ದನೆಂದೂ ರಾಮ-ರಾವಣರ ಯುದ್ಧವಾಯಿತೆಂದೂ ಸಂಪ್ರದಾಯ ಸಂದೇಹಪಡುವುದಿಲ್ಲ. ರಾಮನ ಚರಿತ್ರೆ ವಾಲ್ಮೀಕಿಯ ಕಾವ್ಯಕ್ಕೆ ವಸ್ತುವಾಯಿತೇ ವಿನಾ ರಾಮನ ಕಥೆಯೇ ವಾಲ್ಮೀಕಿಯ ಸ್ವಕಪೋಲಕಲ್ಪಿತವಲ್ಲ. ವಾಲ್ಮೀಕಿಯ ಕಾವ್ಯಕ್ಕೂ ಮುಂಚೆ ರಾಮನ ಕಥೆ ಪ್ರಚಲಿತವಾಗಿದ್ದಿತು. ಇತಿಹಾಸವೆನಿಸಿದ ಮಹಾಭಾರತದಲ್ಲೂ ರಾಮನ ಉಪಾಖ್ಯಾನವಿದೆ ಯಲ್ಲವೆ? ರಾಮನ ಕಥೆಗೆ ರಾಮಾಯಣವಲ್ಲದೆ ಸ್ವತಂತ್ರವಾದ ಉಲ್ಲೇಖಗಳು ಬೌದ್ಧರ ಜಾತಕಸಾಹಿತ್ಯದಲ್ಲೂ ಇತರೆಡೆಗಳಲ್ಲೂ ಬರುತ್ತವೆ.

ರಾಮಾಯಣವು ಕಾವ್ಯವೇನೋ ನಿಜ; ಅದರಲ್ಲಿ ಕಾವ್ಯ ಧರ್ಮವನ್ನನುಸರಿಸಿ ಉತ್ಪ್ರೇಕ್ಷೆಗಳೂ ಅದ್ಭುತನಿರೂಪಣೆಗಳೂ ಉಂಟು. ಸಣ್ಣಕಥೆಯನ್ನು ರಸವಿಡಿದು ದೊಡ್ಡದು ಮಾಡಿರುವುದು ದಿಟ; ಹಲವೆಡೆ ಪೋಷಣೆಯ ಸಲುವಾಗಿ ನಡೆದಿರಲಾರದ ವೃತ್ತಾಂತಗಳನ್ನು ಹಣೆದು ಸೇರಿಸಿದ್ದಾರೆ. ಆದರೆ ಮೂಲಭೂತವಾಗಿ ನಡೆದ ಪ್ರಸಂಗಗಳಿವೆ; ನಿಜವಾಗಿ ಭೂಮಿಯ ಮೇಲೆ ನಡೆದಾಡಿದ ಮನುಷ್ಯರಿದ್ದಾರೆ; ಅವರ ಲೋಕೋತ್ತರವಾದ ಚಾರಿತ್ರ ಜನರ ನೆನಪಿನಲ್ಲಿ ಉಳಿದುಬಂದಿದೆ.

ರಾಮಸ್ಯ ಸಹ ಸೌಮಿತ್ರೇ ರಾಕ್ಷಸಾನಾಂ ಚ ಸರ್ವಶಃ ।

ವೈದೇಹ್ಯಾಶ್ಚೈವ ಯದ್ವೃತ್ತಂ
—ಇದು ರಾಮಾಯಣದ ಹಿನ್ನೆಲೆಯಲ್ಲಿರುವ ಇತಿಹಾಸ.

ರಾಮಾಯಣವು ಕೋಸಲರಾಜ್ಯದ ಇಕ್ಷ್ವಾಕುವಂಶದ ಅರಸರಲ್ಲಿ ಪ್ರಸಿದ್ಧನೆನಿಸಿದ ರಾಮನ ಚರಿತ್ರೆ. ಈ ಮಾತು ಬಾಲಕಾಂಡದ ಐದನೆಯ ಸರ್ಗದಲ್ಲಿ ಬರುತ್ತದೆ—

ಇಕ್ಷ್ವಾಕೂಣಾಮಿದಂ ತೇಷಾಂ ರಾಜ್ಞಾಂ ವಂಶೇ ಮಹಾತ್ಮನಾಮ್ ।
ಮಹದುತ್ಪನ್ನಮಾಖ್ಯಾನಂ ರಾಮಾಯಣಮಿತಿ ಶ್ರುತಮ್ ॥

ಇದೇ ಮಾತು ಬೌದ್ಧರ ಮಹಾವಸ್ತುವಿನ 'ರಾಜವಂಶ'ವೆಂಬ ಪ್ರಕರಣ ಗ್ರಂಥದಲ್ಲೂ ಧ್ವನಿತವಾಗಿದೆ. ಇಕ್ಷ್ವಾಕುಗಳು ಮೊದಲಿಗೆ ವಾರಣಾಸಿಯಲ್ಲಿ ಆಳುತ್ತಿದ್ದು ಅನಂತರ ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡವರು. 'ದಶರಥಜಾತಕ'ದಲ್ಲಿ ದಶರಥನು ವಾರಣಾಸಿಯ ಅರಸನೇ. ಇಕ್ಷ್ವಾಕುಗಳ ಕಥೆ ಉತ್ತರಭಾರತದ ಕಥೆ. ರಾಮನು ಉತ್ತರಭಾರತದ ವೀರರಾಜಪುತ್ರನಾಗಿದ್ದು, ಕಾರಣಾಂತರದಿಂದ ದಂಡಕವನ್ನು ಪ್ರವೇಶಿಸಿ ದಕ್ಷಿಣಭಾರತದಲ್ಲಿ ಅಲೆದಾಡಿ ಅಲ್ಲಿನ ಅರಸರೊಂದಿಗೆ ಕಾದಾಡಿದ ಪ್ರಸಂಗವನ್ನು ರಾಮಾಯಣ ಹೇಳುತ್ತದೆ. ಈ ಪ್ರಸಂಗದ ನಿರೂಪಣೆಯಲ್ಲಿ ಆ ಕಾಲದ ಇತಿಹಾಸ ಅನಿವಾರ್ಯವಾಗಿ ನುಗ್ಗಿ ಬಂದಿದೆ. ಕಾವ್ಯದ ಅಲಂಕಾರಗಳನ್ನು ತೆಗೆದಿಟ್ಟು ನಿರೂಪಣೆಯ ವಿವರಗಳನ್ನು ವಿಶ್ಲೇಷಣೆ ಮಾಡಿದರೆ ರಾಮಾಯಣವನ್ನು ಸಿದ್ಧಮಾಡಿದ ಕಾಲದಲ್ಲಿ ನಮ್ಮ ದೇಶದ ಸಂಸ್ಕೃತಿಯ ಸ್ಥಿತಿ ಸುಮಾರಾಗಿ ಸ್ಪಷ್ಟವಾಗುತ್ತದೆ.

ರಾಮಾಯಣ ರೂಪತಳೆದುದು ಆರ್ಯಾವರ್ತದಲ್ಲೆಂಬುದು ನಿರ್ವಿವಾದ; ಇಕ್ಷ್ವಾಕುಗಳು, ಅವರಲ್ಲೂ ರಾಮ, ವಿಶೇಷವಾಗಿ ಆರ್ಯ ಸಂಸ್ಕೃತಿಯ ಪ್ರತಿಮೆಗಳು. ಆಗಲೇ ಆರ್ಯರ ಪ್ರಭಾವ ಹೆಚ್ಚೂ ಕಡಮೆ ಉತ್ತರಭಾರತದಲ್ಲೆಲ್ಲ ಹರಡಿದ್ದಿತು. ವಿಂಧ್ಯಪರ್ವತವನ್ನು ದಾಟಿದರೆ ಅನಾರ್ಯರಾದ ಹಲವಾರು ಜನಾಂಗಗಳು ಆರ್ಯರ ಪ್ರಭುತ್ವವನ್ನು ಪ್ರತಿಭಟಿಸಿ ಸ್ವತಂತ್ರವಾದ ಸಂಪ್ರದಾಯಗಳಲ್ಲಿ ಬಾಳುತ್ತಿದ್ದರು. ಅನಾರ್ಯ

ರೆಂದ ಮಾತ್ರಕ್ಕೆ ಸಂಸ್ಕೃತಿಬಾಹಿರರೆಂದು ಹೇಳಲಾಗದು; ರಾಮಾಯಣದಲ್ಲಿ ಬರುವ ದಕ್ಷಿಣಭಾರತದ ಚಿತ್ರ ಇದನ್ನು ಸಮರ್ಥಿಸುವುದಿಲ್ಲ.

ಹಲವಾರು ಪ್ರಸಿದ್ಧವಾದ, ಸಂಪನ್ನವಾದ ರಾಜ್ಯಗಳಿದ್ದವು. ರಾಮಾಯಣದಲ್ಲಿ ಆಂಧ್ರ, ಪುಂಡ್ರ, ಚೋಳ, ಪಾಂಡ್ಯ, ಕೇರಳ ಈ ದ್ರಾವಿಡರಾಜ್ಯಗಳ ಉಲ್ಲೇಖವಿದೆ. ಆರ್ಯಾವರ್ತದ ಆರ್ಯರಿಗೂ ಈ ದ್ರಾವಿಡಜನರಿಗೂ ಪದೇ ಪದೇ ಯುದ್ಧವಾಗುತ್ತಿದ್ದುದು ಸ್ಪಷ್ಟವಾಗುತ್ತದೆ.* ಆರ್ಯರು ತಮ್ಮ ಸೀಮೆಯನ್ನು ದಾಟಿ ದ್ರಾವಿಡರ ನಾಡಿನ ಒಳವಲಯಗಳಲ್ಲಿ ವಲಸೆಹೋಗಿ ನಿಲ್ಲುತ್ತಿದ್ದುದೂ ಉಂಟು. ದಂಡಕವನದಲ್ಲಿ ಅಗಸ್ತ್ಯಾಶ್ರಮವೇ ಇದ್ದಿತಷ್ಟೆ. ಇಂಥ ಸಾಹಸಿಗಳಿಗೆ ಅಲ್ಲಿನ ಜನ ಉಪದ್ರವ ಕೊಡುತ್ತಿದ್ದರೆಂದರೆ ಆಶ್ಚರ್ಯವೇನಲ್ಲ. ಯಮುನಾನದಿಯ ಆಚೆ ಚಿತ್ರಕೂಟದಲ್ಲಿ, ಗೋದಾವರೀ ತೀರದ ಜನಸ್ಥಾನದಲ್ಲಿ ಇರುತ್ತಿದ್ದ ಆರ್ಯತಪಸ್ವಿಗಳಿಗೆ ಅಲ್ಲಿನ ನಿವಾಸಿಗಳು ಕೊಡುತ್ತಿದ್ದ ಬಾಧೆಯನ್ನು ತಪ್ಪಿಸಲು ದಶರಥನೇ ಅಲ್ಲಿಗೆ ಹಲವಾರು ಬಾರಿ ಹೋಗಿದ್ದನು. ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ಅಲ್ಲಿಗೆ ಕೊಂಡೊಯ್ದುದೂ ಇದೇ ಕಾರಣಕ್ಕಾಗಿ. ಗಂಗೆಯಿಂದ ಪಂಪಾನದಿಯವರೆಗೂ ರಾಕ್ಷಸರ ಹಾವಳಿ ಹೆಚ್ಚಾಗಿದ್ದಿತು.

ಆರ್ಯರಲ್ಲದ ಜನರನ್ನು ರಾಕ್ಷಸರೆಂದು ಆರ್ಯರು ವ್ಯವಹರಿಸುತ್ತಿದ್ದರು. ರಾಮಾಯಣದಲ್ಲಿ ರಾಕ್ಷಸರ ಪ್ರಸ್ತಾಪ ಬಂದಾಗ ಅವರನ್ನು ಅಮಾನುಷ ವೃತ್ತಿಯವರೆಂದು ಬಣ್ಣಿಸಿದರೂ ಅವರ ಸ್ವಭಾವವೇನೋ ಮನುಷ್ಯ ಸ್ವಭಾವವೇ. ನಿದರ್ಶನಕ್ಕೆ ರಾಕ್ಷಸೇಂದ್ರನಾದ ರಾವಣನಿಗೆ ಹತ್ತು ತಲೆಗಳಿದ್ದುವೆಂದು ತಾನೇ ನಮ್ಮ ಕಲ್ಪನೆ? ಆದರೆ 'ದಶಾನನ' ಅಥವಾ 'ಹತ್ತು ಮುಖದವನು' ಎಂದರೆ ಹತ್ತು ದಿಕ್ಕುಗಳಲ್ಲಿ ವ್ಯವಹಾರವಿದ್ದವನು ಎಂದರ್ಥ; 'ದಶಗ್ರೀವ' ಅಥವಾ ಹತ್ತು ಕುತ್ತಿಗೆಗಳುಳ್ಳವನು, ಎಂದರೆ ಅಷ್ಟು ಬಲಶಾಲಿಯೆಂದರ್ಥ ಅಷ್ಟೆ. ವಾಲ್ಮೀಕಿರಾಮಾಯಣದಲ್ಲೇ ಸುಂದರಕಾಂಡದಲ್ಲಿ

* ಪ್ರಕೃತಪ್ರಬಂಧವು ಪ್ರಕಟವಾದದ್ದು ಸುಮಾರು ನಲವತ್ತು ವರ್ಷಗಳ ಹಿಂದೆ; ಪ್ರೊ. ಸಾ. ಕೃ. ರಾಮಚಂದ್ರರಾಯರು 'ಆರ್ಯ-ಆಕ್ರಮಣವಾದ'ದ ಕಲ್ಪನೆಯನ್ನು ತಮ್ಮ ಅನಂತರದ ದಿನಗಳಲ್ಲಿ ತಳ್ಳಿಹಾಕಿದ್ದರು. —ಸಂ.

ಹನುಮಂತನು ಲಂಕೆಗೆ ಹೋಗಿ ಅರಮನೆಯ ಅಂತಃಪುರದಲ್ಲಿ ನಿದ್ದೆಮಾಡುತ್ತಿದ್ದ ರಾವಣನನ್ನು ಕಂಡಾಗ ಅವನು ಕಂಡದ್ದು ಎರಡೇ ಭುಜಗಳು—'ಕಾಂಚನಾಂಗದಸನ್ನದ್ಧೌ, ವಿಕ್ಷಿಪ್ತೌ ರಾಕ್ಷಸೇಂದ್ರಸ್ಯ ಭುಜೌ ಇಂದ್ರಧ್ವಜೋಪಮೌ'. ರಾಮನು ರಾವಣನನ್ನು ಕೊಂದಾಗಲೂ ಕತ್ತರಿಸಿ ಬಿದ್ದದ್ದು ಒಂದೇ ತಲೆ. 'ರಾವಣಸ್ಯ ಶಿರೋಚ್ಛಿಂದತ್ ಶ್ರೀಮಜ್ಜ್ವಲಿತ ಕುಂಡಲಂ'. ರಾವಣನ ಹತ್ತು ತಲೆ ಇಪ್ಪತ್ತು ಕೈಗಳ ಕಲ್ಪನೆ ಕವಿಸಮಯ; ಅದನ್ನು ಯಥಾರ್ಥವರ್ಣನೆಯೆನ್ನಲು ಆಧಾರ ಸಾಲದು.

ಹಾಗೆಯೇ ರಾಕ್ಷಸರು ಮನುಷ್ಯಜಾತಿಯವರೇ, ಆದರೆ ಅನಾರ್ಯರು; ಆರ್ಯಸಂಸ್ಕೃತಿಯ ವ್ಯಾಪ್ತಿಗೆ ಸೇರದವರು; ದಕ್ಷಿಣ ಭಾರತದಲ್ಲಿ ಆಗ ಇರುತ್ತಿದ್ದ ಜನ. ಇವರಲ್ಲಿ ಹಲವಾರು ಜನಾಂಗಗಳಿದ್ದುವು. ವಾಲ್ಮೀಕಿ ಮೂರು ಜನಾಂಗಗಳನ್ನು ವಿಶೇಷವಾಗಿ ಪ್ರಸ್ತಾಪಿಸಿದ್ದಾನೆ. ರಾವಣನ ಜನರಾದ ರಾಕ್ಷಸರಲ್ಲದೆ ದಂಡಕಾರಣ್ಯದ ಉತ್ತರಭಾಗದಲ್ಲಿ ವಿರಾಧರೆಂಬುವರೂ, ದಕ್ಷಿಣದಲ್ಲಿ ದಾನವರೆಂಬುವರೂ ಇರುತ್ತಿದ್ದ ಉಲ್ಲೇಖವಿದೆ. ಜವ ಮತ್ತು ಶತಹ್ರದಾ ಎಂಬ ಗಂಡು-ಹೆಣ್ಣುಗಳಿಂದ ಹೊರಬಂದ ವಿರಾಧರು ಭಯಾನಕವಾದ ರೂಪವುಳ್ಳ ಕಾಡುಜನ; ಅವರಲ್ಲಿ ಪ್ರಮುಖನಾದ ವಿರಾಧನೆಂಬುವವನನ್ನು ರಾಮಲಕ್ಷ್ಮಣರು ಕೊಲ್ಲುತ್ತಾರೆ. ದಾನವರಲ್ಲಿ ಕಬಂಧ ಒಬ್ಬನು. ದಾನವರಿಗೂ ರಾಕ್ಷಸರಿಗೂ ವೈಮನಸ್ಯವಿದ್ದಿತು. ರಾವಣನನ್ನು ರಾಮಾಯಣ 'ದಾನವಶತ್ರು' ಎಂದು ನಿರ್ದೇಶಿಸುತ್ತದೆ.

ರಾಕ್ಷಸರು ದಕ್ಷಿಣದ ತುದಿಯಲ್ಲಿ, ಸಿಂಹಳದ ಮತ್ತು ಸುತ್ತಮುತ್ತ ದ್ವೀಪಗಳಲ್ಲಿ ಇರುತ್ತಿದ್ದ ಜನ. ಲಂಕೆ ಅವರ ಮುಖ್ಯನಗರ. ಲಂಕೆಯೆನ್ನುವುದು ಈಗಿನ ಸಿಂಹಳವೋ ಅಥವಾ ಭಾರತದಲ್ಲೇ ಮತ್ತೊಂದು ದ್ವೀಪದಂತಿರುವ ನಗರವೋ ಎನ್ನುವುದು ವಿವಾದಾಸ್ಪದ. ಸಂಪ್ರದಾಯವೇನೋ ಸಿಂಹಳವನ್ನೇ ತೋರಿಸುತ್ತದೆ. ದಕ್ಷಿಣದ ಸಮುದ್ರತೀರಗಳಲ್ಲೂ ಸಾತ್ಪುರ ಮತ್ತು ವಿಂಧ್ಯಪರ್ವತಶ್ರೇಣಿಗಳ ನಡುವೆ ಬಯಲುಭೂಮಿಯಲ್ಲೂ ರಾಕ್ಷಸರು ಇರುತ್ತಿದ್ದರು. ಈಗಿನ ಗೋಂಡರೆಂಬ ಜನಾಂಗದ ಪೂರ್ವಜರೇ ರಾಕ್ಷಸರೆಂದು ಕೆಲವು ಪಂಡಿತರು ಹೇಳಿದ್ದಾರೆ; ವಾಲ್ಮೀಕಿರಾಮಾಯಣದಲ್ಲಿ ಇಂದಿನ ಅಂಡಮಾನ್, ಬೋರ್ನಿಯೋ ಮುಂತಾದ ಪ್ರದೇಶಗಳ

ಪ್ರಸ್ತಾಪವಿದೆಯೆಂದೂ ಇವೆಲ್ಲ ರಾಕ್ಷಸರ ಬೀಡೆಂದೂ ಇವರ ಎಣಿಕೆ. ರಾಕ್ಷಸರು ಶುದ್ಧದ್ರಾವಿಡರೆಂದೂ ಒಂದು ಅಭಿಪ್ರಾಯ.

ಇದು ಹೇಗಾದರೂ ಇರಲಿ. ರಾಮಾಯಣದಲ್ಲಿ ಬರುವ ರಾಕ್ಷಸರ ವರ್ಣನೆ ಸ್ವಾರಸ್ಯವಾಗಿದೆ. ಇವರು ಬೆಟ್ಟಗುಡ್ಡಗಳಲ್ಲೂ ಕಾಡುಮೇಡುಗಳಲ್ಲೂ ಇರುತ್ತಿದ್ದರು. ಅವರು 'ಮಹಾಬಲ'ರು, 'ಮಹಾಕಾಯ'ರು, ಕಪ್ಪುಬಣ್ಣದವರು, 'ನೀಲಜೀಮೂತವರ್ಣ'ರು. ಮನುಷ್ಯರನ್ನೇ ತಿನ್ನುವ ಪದ್ಧತಿ ಅವರಲ್ಲಿ ಇದ್ದಿತು. ಜಗತ್ತಿನ ಹಲವಾರು ಪ್ರಾಚೀನಜನಾಂಗಗಳಲ್ಲಿ ಈ ಪದ್ಧತಿ ಇದ್ದಿತಷ್ಟೆ. ರಾಕ್ಷಸರು 'ಪಿಶಿತಾಶನ'ರು, 'ಮಾಂಸಾಶನ'ರು; ಮನುಷ್ಯರ ಮಾಂಸವೆಂದರೆ ಹೆಚ್ಚಿನ ರುಚಿ. ಮಾರೀಚನು ದಂಡಕಾರಣ್ಯದಲ್ಲಿ ಋಷಿಗಳ ಮಾಂಸವನ್ನು ತಿನ್ನುತ್ತ ತಿರುಗಾಡುತ್ತಿದ್ದನು. ತಾಟಕಿ ಅಗಸ್ತ್ಯನನ್ನೇ ತಿನ್ನಲು ಹೊರಟ್ಟಿದ್ದಳು. ರಾವಣನು ಕುಬೇರನ ದೂತನನ್ನು ಕೊಂದು ಅವನನ್ನು ತಿನ್ನಿರೆಂದು ರಾಕ್ಷಸರಿಗೆ ಕೊಟ್ಟನು. ಹನುಮಂತನು ಲಂಕೆಯಲ್ಲಿ ಸೀತೆಯನ್ನು ಹುಡುಕುತ್ತಾ, ರಾವಣನು ಸೀತೆಯನ್ನು ತಿಂದಿರಲಾರನೇ— ಎಂದು ಸಂಶಯಪಡುತ್ತಾನೆ ('ಅಬಂಧುರ್ಭಕ್ಷಿತಾ ಸೀತಾ ರಾವಣೇನ ತಪಸ್ವಿನೀ'). ತಿನ್ನುವುದರಲ್ಲಿ ರಾಕ್ಷಸರಿಗಿದ್ದ ಅತಿಪ್ರವೃತ್ತಿಯಂತೆಯೇ ಕುಡಿಯುವುದೂ ಅವರ ಗೀಳಾಗಿದ್ದಿತು. ಅವರ ಪಾನಭೂಮಿಯ ವರ್ಣನೆ ರಾಮಾಯಣದಲ್ಲಿ ಬರುತ್ತದೆ. ಹಾಗೆಯೇ ರಾಕ್ಷಸರು ಸ್ವಚ್ಛಂದರಾದ ಕರ್ಮಚಾರಿಗಳು, ಲೈಂಗಿಕಲಂಪಟರು.

ಅನಾರ್ಯರಾದ ಇವರ ಧರ್ಮ ವೈದಿಕವಿಧಿಗಳಿಗೆ ವಿರುದ್ಧವಾದ್ದುದು ಸಹಜವೇ. ಹೀಗಾಗಿ ಆರ್ಯರ ತಪಶ್ಚರ್ಯೆಯನ್ನು ಇವರು ಹಾಳುಮಾಡಲು ಹೊರಡುತ್ತಿದ್ದರೆಂದರೆ ಆಶ್ಚರ್ಯವೇನಲ್ಲ. ಶೈವಧರ್ಮ ಇವರಲ್ಲಿ ಪ್ರಚುರವಾಗಿದ್ದಿತು; ನಿಕುಂಭಿಲೆ ರಾಕ್ಷಸರ ಕುಲದೇವತೆ. ರಾಕ್ಷಸರು ಕರಿಯರಾದರೂ ಎಲ್ಲರೂ ಕುರೂಪಿಗಳಾಗಿದ್ದಿರಲಿಲ್ಲ. ರಾವಣ ಸುಂದರನೇ; ಮಂಡೋದರಿಯಂತೂ ಸುರಸುಂದರಿಯಂತೆ.

ರಾಕ್ಷಸರ ಮೂಲಪುರುಷ ವಿದ್ಯುತ್ಕೇಶನೆಂಬ ರಾಜನೆಂದೂ ಅವನ ಹೆಂಡತಿ ಸಾಲಕಟಂಕಟಾ ಎಂಬಾಕೆ ಸುಕೇಶನೆಂಬ ಮಗನನ್ನು ಹೆತ್ತಳೆಂದೂ,

ಆದರೆ ಅವನನ್ನು ಒಡನೆಯೇ ಪರಿತ್ಯಾಗ ಮಾಡಿದಳೆಂದೂ, ಶಿವನ ದಯೆಯಿಂದ ಸುಕೇಶನು ಬದುಕಿಕೊಂಡನೆಂದೂ ಕಥೆಯಿದೆ. ಸುಕೇಶನಿಗೆ ಮಾಲ್ಯವಂತ, ಸುಮಾಲಿ, ಮಾಲಿಯೆಂಬ ಮೂವರು ಮಕ್ಕಳು; ಅಪ್ರತಿಮವೀರರು. ಅವರಿಗಾಗಿ ದೇವಶಿಲ್ಪಿಯಾದ ವಿಶ್ವಕರ್ಮನು ಕೈಲಾಸದಂತೆ ಸಂಪದ್ಭರಿತವಾದ ಲಂಕೆಯನ್ನು ಕಟ್ಟಿಕೊಟ್ಟನಂತೆ. ನರ್ಮದೆ ಯೆಂಬ ಗಂಧರ್ವಸ್ತ್ರೀಯ ಮೂವರು ಮಕ್ಕಳನ್ನು ಅವರು ಮದುವೆಯಾಗಿ ಲೋಕಕಂಟಕರಾದರು. ಆರ್ಯದೇವತೆಯಾದ ವಿಷ್ಣು ಅವರೊಂದಿಗೆ ಯುದ್ಧಕ್ಕೆ ಬಂದಾಗ ಅವರು ಪಾತಾಳ, ರಸಾತಳಗಳಿಗೆ ಓಡಿದರಂತೆ.

ಸುಮಾಲಿಯ ಮಗಳು ಕೈಕಸಿ ಎಂಬಾಕೆ ಕುಬೇರನ ತಂದೆ ವಿಶ್ರವಸನನ್ನು ಒಲಿಸಿಕೊಂಡು ರಾವಣ, ಕುಂಭಕರ್ಣ, ವಿಭೀಷಣರೆಂಬ ಮೂವರು ಗಂಡುಮಕ್ಕಳನ್ನೂ, ಶೂರ್ಪನಖಿಯೆಂಬ ಮಗಳನ್ನೂ ಪಡೆದಳು. ರಾವಣನು ಲಂಕೆಯಲ್ಲಿ ಇರುತ್ತಿದ್ದ ಕುಬೇರನನ್ನು ಅಲ್ಲಿಂದ ಓಡಿಸಿ ಅದನ್ನು ತನ್ನ ನಗರವನ್ನಾಗಿ ಮಾಡಿಕೊಂಡನು. ದಕ್ಷಿಣಸಾಗರದ ತೀರದಲ್ಲಿ ತ್ರಿಕೂಟವೆಂಬ ಬೆಟ್ಟದ ಮೇಲೆ ರಾಕ್ಷಸರ ರಾಜಧಾನಿಯಾದ ಲಂಕೆ ಇದ್ದಿತೆಂಬ ವಿವರವಿದೆ.

ರಾವಣನು ರಾಜನಾಗಿದ್ದಾಗ ರಾಕ್ಷಸರ ಬಲ ಹೆಚ್ಚಿತು. 'ತ್ರೈಲೋಕ್ಯ ವಿಜಯಾಕಾಂಕ್ಷಿ'ಗಳಾಗಿ ಅವರು ಯಕ್ಷರ ಮೇಲೆ ಯುದ್ಧಕ್ಕೆ ಹೊರಟರು; ಕುಬೇರನನ್ನು ಸೋಲಿಸಿದರು; ಮನುಷ್ಯಲೋಕ, ಯಮಪುರಿ, ರಸಾತಲ, ಸಮುದ್ರದಾಚೆ ಭೋಗವತಿ, ಮಣಿನ್ಮಯಿ, ಕಾಲಿಯದೈತ್ಯನ ಅಶ್ಮನಗರ—ಇವುಗಳ ಮೇಲೆಲ್ಲ ದಾಳಿಮಾಡಿದರು. ರಾವಣನ ಮಗ ಮೇಘನಾದ ಆರ್ಯರ ಗಣನಾಯಕನಾದ ಇಂದ್ರನೊಂದಿಗೆ ಸೆಣಸಾಡಿ ಅವನನ್ನು ಸೋಲಿಸಿ ಕಟ್ಟಿತಂದಿದ್ದನು. ಎಂದರೆ, ರಾವಣನ ಕಾಲದಲ್ಲಿ ಆರ್ಯರಿಗೆ ರಾಕ್ಷಸರ ಭೀತಿ ಬಲಿಯಿತೆಂದರ್ಥ.

ರಾವಣನು ಸ್ವತಃ ಧರ್ಮಪರ; ಅವನನ್ನು ರಾಮಾಯಣ ಆಹಿತಾಗ್ನಿ ಯೆಂದೂ ಮಹಾತ್ಮನೆಂದೂ ಬಣ್ಣಿಸುತ್ತದೆ; ಅವನು ಯಜ್ಞಯಾಗಾದಿಗಳನ್ನು ತಾನೇ ಮಾಡುತ್ತಿದ್ದವನು ('ಕ್ರತುಪ್ರವರಯಾಜಿ'), ವಿದ್ಯಾವಂತ, ಸಂಪನ್ನ, ಶೈವದ್ವಿಜ; ವಾಲ್ಮೀಕಿ ರಾವಣನನ್ನು ಗೌರವದಿಂದ ಚಿತ್ರಿಸಿದ್ದಾನೆ; ರಾಮನು

ಕೂಡ ರಾವಣನನ್ನು ಸಮರದಲ್ಲಿ 'ಚಂಡವಿಕ್ರಮ', 'ಅತ್ಯುನ್ನತ ಮಹೋತ್ಸಾಹ', 'ತೇಜಸ್ವಿ', 'ಮಹಾತ್ಮ', 'ಬಲಸಂಪನ್ನ'ನೆಂದು ಕೊಂಡಾಡಿದ್ದಾನೆ. 'ಅಧರ್ಮಾನೃತಸಂಯುಕ್ತ'ನಾಗಿ ಅವನು ಹಾಳಾದನಷ್ಟೆ. ಉಳಿದಂತೆ ಅವನು ಯೋಗ್ಯನೇ ಸಂಭಾವಿತನೇ. ರಾಮನು ವಿಭೀಷಣನಿಗೆ ರಾವಣನ ವಿಚಾರವಾಗಿ 'ಮಮಾಪ್ಯೇಷ ಯಥಾ ತವ' ಎಂದು ಹೇಳಿದ್ದಾನೆ. ಇದಕ್ಕಿಂತ ಹೆಚ್ಚಿನ ಪ್ರಶಸ್ತಿ ಬೇಕೆ?

ರಾವಣನು ಆರ್ಯಾವರ್ತವನ್ನು ಹಲವಾರು ಬಾರಿ ದಾಳಿಮಾಡಿದ ಉಲ್ಲೇಖವಿದೆ. ರಾಮನ ಪೂರ್ವಜನಾದ ಅನರಣ್ಯನನ್ನೂ ರಾವಣನು ಸೋಲಿಸಿದ್ದನಂತೆ. ಮಾಹಿಷ್ಮತಿಯ ಹೈಹಯರಾಜ ಕಾರ್ತವೀರ್ಯಾರ್ಜುನ ನೊಬ್ಬನ ವಿನಾ ಉಳಿದ ಆರ್ಯನಾಯಕರೆಲ್ಲ ರಾವಣನಿಗೆ ಹೆದರಿದ್ದರು. ರಾವಣನ ಸೋದರಳಿಯ ಲವಣನು ಯಮುನಾನದಿಯ ದಂಡೆಯ ಮೇಲೆ ಮಧುಪುರಿಯಲ್ಲಿ ಆಳುತ್ತಿದ್ದನು. ಗಂಗಾನದಿಯ ಹತ್ತಿರದ ಪ್ರದೇಶಗಳನ್ನು ರಾವಣನ ನಂಟಳಾದ ತಾಟಕೆಯೂ, ಅವಳ ಮಗ ಮಾರೀಚನೂ ಆಳುತ್ತಿದ್ದರು. ರಾವಣನ ತಂಗಿ ಶೂರ್ಪನಖಿ ಗೋದಾವರಿತೀರದ ಜನಸ್ಥಾನದಲ್ಲಿ ಇರುತ್ತಿದ್ದಳು. ಅವಳಿಗೆ ರಾಮಲಕ್ಷ್ಮಣರಿಂದ ಒದಗಿದ ಪರಾಭವವೇ ರಾವಣನಲ್ಲಿ ಸೀತಾಪಹರಣದ ಸಂಕಲ್ಪವನ್ನು ಮೂಡಿಸಿತು. ಆದರೆ ಸೀತೆಯನ್ನು ಅವನು ಅಪಹರಿಸಿದುದು ಕಾಮದಿಂದಲ್ಲ; ರಾಮನಿಗೆ ಪ್ರತೀಕಾರ ಮಾಡಲು; ಖರನ ಸೇನಾಧಿಪತಿಯಾದ ಅಕಂಪನನ ಸಲಹೆ ಅದು.

ಶೂರ್ಪನಖಿ ಖರನನ್ನು ರಾಮನೊಂದಿಗೆ ಯುದ್ಧಕ್ಕೆ ಪ್ರಚೋದಿಸಿದಳಷ್ಟೆ. ಖರನೂ ಅವನೊಂದಿಗೆ ಹದಿನಾಲ್ಕು ಸಾವಿರ ರಾಕ್ಷಸರೂ ರಾಮನಿಂದ ಹತರಾದನಂತರ ಉಳಿದ ಅಕಂಪನನು ರಾವಣನ ಬಳಿಗೆ ಓಡಿ ರಾಮ ಲಕ್ಷ್ಮಣರ ವೃತ್ತಾಂತವನ್ನು ಅವನಿಗೆ ಹೇಳಿ "ರಾಮನನ್ನು ನೀನು ಯುದ್ಧದಲ್ಲಿ ಗೆಲ್ಲಲಾರೆ. ಆದರೆ ಅವನಿಗೆ ಸೀತೆಯೆಂಬ ಸುಂದರಿ ಹೆಂಡತಿಯಿದ್ದಾಳೆ. ಅವಳನ್ನು ಹೇಗಾದರೂ ಅಪಹರಿಸಿಬಿಡು. ಅವಳಿಲ್ಲದೆ ರಾಮ ಬದುಕಲಾರ ('ಸೀತಯಾ ರಹಿತೋ ರಾಮೋ ನ ಚೈವ ಹಿ ಭವಿಷ್ಯತಿ'). ವಿರಹದಿಂದ ತಾನೇ ಸಾಯುತ್ತಾನೆ", ಎಂದು ಸಲಹೆ ಮಾಡುತ್ತಾನೆ. ಅನಂತರ ಶೂರ್ಪನಖಿ ಬಂದು ರಾವಣನನ್ನು ನಿರ್ಬಲನೆಂದು, ಲುಬ್ಧನೆಂದು,

ಪ್ರಮತ್ತನೆಂದು ಮೂದಲಿಸಿ ಜನಸ್ಥಾನದಲ್ಲಿ ಸ್ವಜನರು ಸಾವಿರಾರು ಮಂದಿ ಸತ್ತರೂ ಸುಮ್ಮನಿದ್ದಾನೆಂದು ನಿಂದಿಸುತ್ತಾಳೆ. ಆಗ ಅವಳನ್ನು ರಾವಣನು 'ಕಶ್ಚ ರಾಮಃ ಕಥಂ ವೀರ್ಯಃ, ಕಿಂ ಪರಾಕ್ರಮಃ' ಎಂದು ಪ್ರಶ್ನಿಸುತ್ತಾನೆ.

ರಾವಣನು ರಾಮನ ವಿಚಾರವನ್ನು ಅರಿತದ್ದೇ ಹೀಗೆ. ಆದರೆ ರಾಮನೇನೋ ಹುಡುಗನಾಗಿದ್ದಾಗಲೇ ವಿಶ್ವಾಮಿತ್ರನಿಂದ ರಾವಣನ ಹೆಸರನ್ನು ಕೇಳಿದ್ದನು; ಚಿತ್ರಕೂಟದಲ್ಲಿದ್ದಾಗ ಶೂರ್ಪನಖಿ ರಾವಣನ ವಿಚಾರ ಹೇಳಿದ್ದಳು. ಆಗ ರಾಮನಿಗೆ ಯಾವ ಬಗೆಯ ಕುತೂಹಲವೂ ಕೆರಳಿರಲಿಲ್ಲ. ಆದರೆ ಜಟಾಯು ಸೀತೆಯನ್ನು ರಾವಣನು ಕೊಂಡೊಯ್ದನೆಂದು ಹೇಳಿದಾಗ ರಾಮನು "ರಾವಣನು ಸೀತೆಯನ್ನು ಕೊಂಡೊಯ್ದ ಕಾರಣ ಏನು? ನಾನು ಅವನಿಗೆ ಮಾಡಿದ ಅನ್ಯಾಯವಾದರೂ ಏನು? ಈ ರಾವಣ ಯಾರು? ಎಂಥವನು? ಎಲ್ಲಿದ್ದಾನೆ?" ಎಂದು ಕೇಳುತ್ತಾನೆ. ಪಕ್ಷಿ ಹೇಳಲು ಆರಂಭಿಸಿ ಒಡನೆಯೇ ಪ್ರಾಣಬಿಡುತ್ತದೆ. ಮುಂದೆ ದನುವಿನೊಡನೆ ರಾಮ ಮಾತನಾಡುತ್ತ "ರಾವಣನ ಹೆಸರನ್ನು ಮಾತ್ರ ಕೇಳಿದ್ದೇನೆ, ಉಳಿದದ್ದೇನೂ ತಿಳಿಯದು" ಎಂದು ಹೇಳುತ್ತಾನೆ. ಹೀಗೆ ರಾಮ ರಾವಣರಲ್ಲಿ ಮೊದಲಿಗೆ ವೈಮನಸ್ಯವೇನೂ ಇದ್ದ ಉಲ್ಲೇಖವಿಲ್ಲ. ಸೀತಾಪಹರಣವೂ ಪ್ರಾಸಂಗಿಕವಾದದ್ದು.

ರಾಕ್ಷಸರಂತೆಯೇ ವಾನರರೂ ಮನುಷ್ಯರೇ. ಅವರು ಬರಿಯ ಕಪಿಗಳೆಂಬುದು ವಾಲ್ಮೀಕಿಯ ರಾಮಾಯಣದಿಂದ ಧ್ವನಿತವಾಗುವುದಿಲ್ಲ. ವಿಂಧ್ಯಸಾಲಿನ ಕೆಳಗೆ ದಕ್ಷಿಣಾಪಥದ ಗುಡ್ಡಗಾಡಿನಲ್ಲಿದ್ದ ಕಾಡುಜನ ಇವರು. ಇವರಲ್ಲಿ ವಾನರರು, ಋಕ್ಷರು, ಗೋಲಾಂಗೂಲರು ಮುಂತಾದ ಪಂಗಡಗಳಿದ್ದುವು. ಈಗಿನ ಕೋರ್ಕು ಎಂಬ ಛೋಟಾನಾಗಪುರ ಪ್ರದೇಶದ ಆದಿವಾಸಿಗಳ ಮೂಲಪುರುಷರು ಇವರೆಂದು ಒಂದು ಅಭಿಪ್ರಾಯ. ಇವರು ಮೊದಲಿಗೆ ಮುಂಡುಭಾಷೆಯನ್ನಾಡುತ್ತಿದ್ದು, ಮೈ ಮುಚ್ಚಿಕೊಳ್ಳದೆ, ಕಾಡುಗಳಲ್ಲೇ ಬಾಳುತ್ತಿದ್ದರು. ಇವರ ಗುಂಪಿಗೆ ವಾಲಿ ನಾಯಕನಾಗಿದ್ದನು. ವಾನರರಿಗೂ ರಾಕ್ಷಸರಿಗೂ ಒಮ್ಮೆ ಕಾಳಗ ನಡೆದಾಗ ವಾಲಿ ರಾವಣನನ್ನು ಕೈಕಟ್ಟಿ ಕರುವಿನಂತೆ ಅಡ್ಡಾಡಿಸಿದ್ದನಂತೆ. ಆಮೇಲೆ ವಾಲಿಗೂ ರಾವಣನಿಗೂ ಸಖ್ಯ ಬೆಳೆದುಬಂದಿತಂತೆ. ವಾನರರಲ್ಲಿಯೂ ಸಂಸ್ಕೃತಿಯಿಲ್ಲದಿರಲಿಲ್ಲ.

ಗಾಯಕ, ಪಂಡಿತ, ವ್ಯವಹಾರಕುಶಲನಾದ ಹನುಮಂತನು ವಾನರನೆಂಬುದನ್ನು ಮರೆಯಬಾರದು. ಆದರೆ ಸಾಮಾನ್ಯವಾಗಿ ಅವರು ಕಾಡುಜನ; ಕುಡಿತ, ಕುಣಿತ ಅವರ ಪ್ರೀತಿಯ ಹವ್ಯಾಸಗಳು. ರಾಮ ಅವರ ಬೆಂಬಲವನ್ನು ಪಡೆದದ್ದು ರಾಕ್ಷಸರನ್ನು ಸದೆಬಡಿಯಲು ಅನುಕೂಲವಾಯಿತು. ದಕ್ಷಿಣದೇಶದ ಪರಿಚಯವಿಲ್ಲದ ರಾಮಲಕ್ಷ್ಮಣರಿಗೆ ಸೀತೆಯನ್ನು ಹುಡುಕಿ ಕೊಟ್ಟವರು ಈ ಜನ.

ರಾಮೋಪಾಖ್ಯಾನ

ನಮ್ಮ ದೇಶದ ಎರಡು ದೊಡ್ಡ ಗ್ರಂಥಗಳಾದ ರಾಮಾಯಣ, ಮಹಾಭಾರತಗಳಲ್ಲಿ ಯಾವುದು ಪ್ರಾಚೀನವೆಂಬ ವಿಚಾರವಾಗಿ ವಿಪುಲವಾದ ವಾದ ನಡೆದಿದೆ. ಅವುಗಳ ಕಾಲನಿರ್ಣಯದ ವಿಚಾರವಾಗಿ ಭಾರತ ಯುದ್ಧವಷ್ಟೇ ಪ್ರಬಲವಾದ ಗೊಂದಲ ಎದ್ದಿದೆ.

ಸಿದ್ಧಾಂತವಂತೂ ಸಮೀಪಿಸಿಲ್ಲ. ಆದರೆ ಇಷ್ಟು ಮಾತ್ರ ಸ್ಪಷ್ಟ. ಮಹಾಭಾರತದಲ್ಲಿ ರಾಮಾಯಣದ ಕಥೆ ಅಡಕವಾಗಿದೆ; ರಾಮಾಯಣದಲ್ಲಿ ಮಹಾಭಾರತದ ಪ್ರಸ್ತಾಪವಿಲ್ಲ. ಎಂದರೆ, ಮಹಾಭಾರತ ಇಂದಿನ ರೂಪವನ್ನು ತಳೆಯುವ ಕಾಲಕ್ಕೆ ರಾಮಾಯಣದ ಕಥೆ ಆಗಲೇ ಪ್ರಚಲಿತವಾಗಿದ್ದಿತು. ಆದರೆ ಮಹಾಭಾರತದ ಸಂಪಾದಕನಿಗೆ ವಾಲ್ಮೀಕಿ ರಾಮಾಯಣದ ಪರಿಚಯವಿದ್ದಿತೆಂದು ಸಾಧಿಸುವುದು ಕಷ್ಟ. ಮಹಾಭಾರತದಲ್ಲಿ ಎಲ್ಲಿಯೂ ವಾಲ್ಮೀಕಿ ಕವಿಯೆಂಬ ಕೀರ್ತಿಯಾಗಲೀ, ಅವನ ಕಾವ್ಯದ ಪ್ರಸ್ತಾಪವಾಗಲೀ ಬರುವುದಿಲ್ಲ.

ಮಹಾಭಾರತದ ಹಲವೆಡೆ ರಾಮನ, ರಾಮನ ಕಥೆಯ ಉಲ್ಲೇಖವಿದೆ. ಪ್ರಮುಖವಾಗಿ ವನಪರ್ವದ 374ನೆಯ ಅಧ್ಯಾಯದಿಂದ ಹದಿನೆಂಟು ಸಣ್ಣಸಣ್ಣ ಅಧ್ಯಾಯಗಳಲ್ಲಿ ರಾಮನ ಕಥೆ ಬರುತ್ತದೆ; ಇದಕ್ಕೆ 'ರಾಮೋಪಾಖ್ಯಾನ'ವೆಂದು ಹೆಸರಿಟ್ಟಿದ್ದಾರೆ. ಜಯದ್ರಥನಿಂದ ಅಪಹರಿಸಲ್ಪಟ್ಟ ದ್ರೌಪದಿಯನ್ನು ಪಾಂಡವರು ಬಿಡಿಸಿಕೊಂಡು ಬಂದಮೇಲೆ ಮಾರ್ಕಂಡೇಯ ಋಷಿ ಯುಧಿಷ್ಠಿರನ ಪ್ರಶ್ನೆಗೆ ಉತ್ತರವಾಗಿ ರಾಮನ ಕಥೆಯನ್ನು ಹೇಳುತ್ತಾನೆ. ದುಷ್ಟರಿಂದ ಸಜ್ಜನರಿಗೆ ಹಿಂದೆಯೂ ಅಪಚಾರವಾಗಿದೆಯೆಂಬುದಕ್ಕೆ

ಸೀತಾಹರಣವನ್ನು ಮಾರ್ಕಂಡೇಯ ನಿದರ್ಶನವನ್ನಾಗಿ ಕೊಡುತ್ತಾನೆ. ಯುಧಿಷ್ಠಿರನಿಗೆ ರಾಮ 'ಶ್ರುತಪೂರ್ವ'ನಾಗಿದ್ದಾನೆ.

ಇಕ್ಷ್ವಾಕುವಂಶದಲ್ಲಿ ಅಜನ ಮೊಮ್ಮಗನಾಗಿ, ದಶರಥನ ಮಗನಾಗಿ ಹುಟ್ಟಿಬೆಳೆದ ರಾಮನ ಕಥೆ ಸುಮಾರಾಗಿ ವಾಲ್ಮೀಕಿಯ ಜಾಡನ್ನೇ ಅನುಸರಿಸುತ್ತದೆ. ಪೌಲಸ್ತ್ಯನಾದ ರಾವಣ ಗಂಧರ್ವ-ದೇವಾಸುರ-ಯಕ್ಷ-ರಾಕ್ಷಸರಿಂದಲೂ ಸರ್ಪ-ಕಿನ್ನರ ಭೂತಗಳಿಂದಲೂ ಪರಾಭವವಾಗದಂತೆ ಬ್ರಹ್ಮನಿಂದ ವರವನ್ನು ಪಡೆದು ಲೋಕಕಂಟಕನಾದದ್ದು; ಬ್ರಹ್ಮನಲ್ಲಿ ದೇವತೆಗಳ ಮೊರೆ; ಋಕ್ಷವಾನರಯೋನಿಗಳಲ್ಲಿ ದೇವತೆಗಳ ಅವತರಣ; ರಾಮನ ರಾಜ್ಯಾಭಿಷೇಕ ಸಮಾರಂಭ; ಮಂಥರಾಕೈಕಯಿಯರ ವ್ಯಾಘಾತ; ರಾಮನ ವನಗಮನ; ಭರತನ ಚಿತ್ರಕೂಟಯಾತ್ರೆ; ಖರದೂಷಣಾದಿ ರಾಕ್ಷಸರ ವಧೆ; ಮೃಗರೂಪದ ಮಾರೀಚನ ವಧೆ; ಸೀತಾಪಹರಣ; ಜಟಾಯುವಿನ ವಧೆ; ಕಬಂಧಕದನ; ರಾಮ-ಸುಗ್ರೀವರ ಸಖ್ಯ; ವಾಲಿವಧೆ; ಅಶೋಕವನಿಕೆಯಲ್ಲಿ ರಾವಣಸೀತಾಸಂವಾದ; ಸೀತಾನ್ವೇಷಣೆಗೆಂದು ವಾನರರ ಪ್ರೇಷಣೆ; ಹನುಮದ್ವೃತ್ತಾಂತ; ವಾನರರ ಸೈನ್ಯಸಂಘಟನೆ; ಸೇತುಬಂಧ; ವಿಭೀಷಣನಿಗೆ ಲಂಕಾರಾಜ್ಯಾಭಿಷೇಕ; ರಾಮಸಂದೇಶ; ರಾಕ್ಷಸ-ವಾನರರ ಘೋರ ಸಂಗ್ರಾಮ; ರಾಮ-ರಾವಣಸೈನ್ಯದ ದ್ವಂದ್ವಯುದ್ಧ; ಕುಂಭಕರ್ಣವಧೆ; ಇಂದ್ರಜಿತುವಿನ ಮಾಯಾಯುದ್ಧ; ರಾಮ-ಲಕ್ಷ್ಮಣರ ಮೂರ್ಛೆ; ಇಂದ್ರಜಿದ್ವಧೆ; ರಾವಣವಧೆ; ಸೀತೆಯ ವಿಚಾರದಲ್ಲಿ ರಾಮನ ಸಂಶಯ; ದೇವತೆಗಳಿಂದ ಆಕೆಯ ಶುದ್ಧಿಸಮರ್ಥನೆ; ಅಯೋಧ್ಯಾಪ್ರತ್ಯಾಗಮನ; ಭರತನೊಂದಿಗೆ ಸಮಾಗಮ; ರಾಮನ ರಾಜ್ಯಾಭಿಷೇಕ—ಹೀಗೆ ರಾಮೋಪಾಖ್ಯಾನ ಸಾಗುತ್ತದೆ.

ಕಡೆಯಲ್ಲಿ ಮಾರ್ಕಂಡೇಯ ಯುಧಿಷ್ಠಿರನಿಗೆ "ದುಃಖಿಸಬೇಡ, ಹಿಂದೆ ಹೀಗೆ ಅಮಿತತೇಜಸ್ಸಿನ ರಾಮನಿಗೇ ವನವಾಸದಲ್ಲಿ ಅತ್ಯುಗ್ರವಾದ ವ್ಯಸನ ಒದಗಿತು. ರಾಮ ಅಸಹಾಯನಾಗಿದ್ದವನು; ಕೋತಿಗಳೇ ('ಶಾಖಾ ಮೃಗಾಃ') ಅವನ ನೇಹಿಗರು; ಕರಡಿಗಳೇ ನಂಟರು. ಹೀಗಿದ್ದೂ ವೈದೇಹಿಯನ್ನು ಅಪಹರಿಸಿಕೊಂಡುಹೋದ ರಾಕ್ಷಸದಶಗ್ರೀವ

ಧೀರವಿಕ್ರಮನಾಗಿದ್ದರೂ ರಾಮ ಅವನನ್ನು ಯುದ್ಧದಲ್ಲಿ ಕೊಂದನಷ್ಟೆ" ಎಂದು ಆಶ್ವಾಸನೆ ಮಾಡುತ್ತಾನೆ *(292-11)*.

ವಾಲ್ಮೀಕಿರಾಮಾಯಣದಲ್ಲಿ ಬರುವ ದಶರಥನ ಪುತ್ರಕಾಮೇಷ್ಟಿ, ರಾಮನ ಧನುರ್ಭಂಗ, ಸೀತಾಸ್ವಯಂವರ, ವಿಶ್ವಾಮಿತ್ರಾದಿಗಳ ವೃತ್ತಾಂತ, ಶಬರೀಪ್ರಸಂಗ ಮುಂತಾದ ಹಲವು ವಿವರಗಳು ಇಲ್ಲಿ ಕಾಣುವುದಿಲ್ಲ. ಇಡೀ ಉತ್ತರಕಾಂಡದ ಕಥೆಯೇ ಇಲ್ಲಿಲ್ಲ. ರಾಮನ ಕಥೆ ರಾಜ್ಯಾಭಿಷೇಕದಲ್ಲಿ ಪರ್ಯವಸಾನವಾಗುತ್ತದೆ. ಬಾಲಕಾಂಡದಲ್ಲಿ ಬರುವ ಹಲವಾರು ಕಥೆಗಳೂ ಉಪಕಥೆಗಳೂ ಪ್ರಸಂಗಗಳೂ ಇಲ್ಲಿ ಬಂದಿಲ್ಲ. ಅಂದಮೇಲೆ ವಾಲ್ಮೀಕಿರಾಮಾಯಣವನ್ನೇ ಅವಲಂಬಿಸಿ ರಾಮೋಪಾಖ್ಯಾನವನ್ನು ಬರೆದಿದ್ದಾರೆ ಎನ್ನುವುದಕ್ಕಿಂತ ಎರಡೂ ಸ್ವತಂತ್ರ ಸಂಪ್ರದಾಯಗಳನ್ನು ಆಧಾರವಾಗಿರಿಸಿಕೊಂಡು ವಿರಚಿತವಾದವು ಎನ್ನಬಹುದು.

ವೀಬರ್ ಪಂಡಿತರೇನೋ ಮಹಾಭಾರತದಲ್ಲಿರುವ ರಾಮೋಪಾಖ್ಯಾನವೇ ಹಿಂದಿನ ಕಥೆಯೆಂದೂ ಅದನ್ನೇ ವಿಸ್ತರಿಸಿ ಮುಂದೆ ವಾಲ್ಮೀಕಿರಾಮಾಯಣ ರೂಪಗೊಂಡಿತೆಂದೂ ವಾದ ಹೂಡಿದ್ದಾರೆ; ರಮೇಶಚಂದ್ರದತ್ತರೂ ಈ ವಾದಕ್ಕೆ ಹೂಗುಟ್ಟಿದ್ದಾರೆ. ಆದರೆ ನಮ್ಮ ಸಂಪ್ರದಾಯದ ಕಲ್ಪನೆಯಂತೆ ರಾಮಾಯಣವೇ ಪ್ರಾಚೀನಕೃತಿ. ಮಹಾಭಾರತದ ಕಾಲಕ್ಕೇ ರಾಮನ ಕಥೆ ಪ್ರಸಿದ್ಧವಾಗಿದ್ದಿತು; ಹಾಗೆಯೇ ಅಗ್ನಿ, ಪದ್ಮ, ಸ್ಕಾಂದ ಮುಂತಾದ ಹಲವಾರು ಪುರಾಣಗಳಲ್ಲಿ ಕೂಡ ರಾಮನ ಕಥೆ ಬರುತ್ತದೆ. ಹೀಗೆ ಪ್ರಚಲಿತವಾಗಿದ್ದ ಜಾನಪದಕಥೆಯನ್ನು ವಾಲ್ಮೀಕಿಯು ಕಾವ್ಯದಲ್ಲೂ ಮಹಾಭಾರತದ ಸಂಪಾದಕನು ಆಖ್ಯಾನದ ರೂಪದಲ್ಲೂ ರಚಿಸಿದರು ಎನ್ನಲು ಅಡ್ಡಿಯಿಲ್ಲ.

ವನಪರ್ವದಲ್ಲಿ ರಾಮೋಪಾಖ್ಯಾನ ಸಮಗ್ರವಾದ ಸುವಿಸ್ತಾರವಾದ ನಿರೂಪಣೆ. ಆದರೆ ರಾಮನ ಕಥೆಯ ಖಂಡಗಳು ದ್ರೋಣಪರ್ವದಲ್ಲೂ, ಶಾಂತಿಪರ್ವದಲ್ಲೂ, ಹರಿವಂಶವೆಂಬ ಭಾರತದ ಖಿಲದಲ್ಲೂ ಬರುತ್ತವೆ. ದ್ರೋಣಪರ್ವದ 59ನೆಯ ಅಧ್ಯಾಯದಲ್ಲಿ ಇಪ್ಪತ್ತೈದು ಶ್ಲೋಕಗಳಲ್ಲಿ ರಾಮಾಯಣದ ಕಥೆ, ರಾಮರಾಜ್ಯದಲ್ಲಿ ಇದ್ದ ಗುಣವಿಶೇಷಗಳು ಅಡಗಿವೆ.

ಪುತ್ರಶೋಕಸಂತಪ್ತನಾದ ಸೃಂಜಯ(ಶ್ವೈತ್ಯ)ನನ್ನು ಕುರಿತು ನಾರದನು, "ನಿನ್ನ ಮಗನಿಗಿಂತ ಹೆಚ್ಚಿನ ಪುಣ್ಯದವರೇ ಸತ್ತರು, ನೀನು ಅಳಲೇಕೆ?" ಎಂದು ಸಮಾಧಾನ ಮಾಡುತ್ತ ಮರುತ್ತ, ಸುಹೋದ್ರ, ಪೌರವ, ಶಿಬಿ, ರಾಮ, ಭಗೀರಥ, ದಿಲೀಪ, ಮಾಂಧಾತ, ಯಯಾತಿ, ಅಂಬರೀಷ, ಶತಬಿಂದು, ಗಯ, ರಂತಿದೇವ, ಭರತ, ಅಭಿಮನ್ಯು, ಪರಶುರಾಮ—ಹೀಗೆ ಹದಿನಾರು ಹಿಂದಿನ ವೀರರ ವೃತ್ತಾಂತವನ್ನು ಹೇಳುತ್ತಾನೆ. ಅವರಲ್ಲಿ ಪ್ರತಿಯೊಬ್ಬರೂ ಗುಣಶಾಲಿಗಳು, ಅಮಿತತೇಜಸ್ವಿಗಳು, ಮಹಾವೀರರು; ಕೇಳುತ್ತಿರುವ ಸೃಂಜಯನಿಗಿಂತ ನಾಲ್ಕುಪಾಲು ಹೆಚ್ಚಿನ ಮಂಗಳದವರು ('ಚತುರ್ಭದ್ರತರಸ್ತ್ವಯಾ'); ಹಾಗಿದ್ದರೂ ಸತ್ತರಷ್ಟೆ? ರಾಮನ ವಿಚಾರವನ್ನೂ ಹೀಗೆಯೇ 'ರಾಮಂ ದಾಶರಥಿಂ ಚೈವ ಮೃತಂ ಸೃಂಜಯ ಶುಶ್ರುಮ' ಎಂದು ಆರಂಭಿಸಿ ರಾಮ ರಾಜ್ಯವಾಳುತ್ತಿದ್ದಾಗ ('ರಾಮೇ ರಾಜ್ಯಂ ಪ್ರಶಾಸತಿ') ಅನಾವೃಷ್ಟಿಭಯವಾಗಲೀ ದುರ್ಭಿಕ್ಷವಾಗಲೀ ವ್ಯಾಧಿಗಳಾಗಲೀ ಇರಲಿಲ್ಲ ಎಂದು ಹೇಳುತ್ತಾನೆ.

> ಸರ್ವಂ ಪ್ರಸನ್ನಮೇವಾಸೀತ್ ಅತ್ಯಂತ ಸುಖ ಸಂಯುತಂ ।
> ಏವಂ ಲೋಕೋಽಭವತ್ ಸರ್ವೋ ರಾಮೇ ರಾಜ್ಯಂ ಪ್ರಶಾಸತಿ ॥

ಮತ್ತೆ ಪ್ರಜೆಗಳಲ್ಲೆಲ್ಲ ರಾಮನ ಮಾತೇ ಮಾತಾಗಿದ್ದಿತು.

> ರಾಮೋ ರಾಮೋ ರಾಮ ಇತಿ ಪ್ರಜಾನಾಮಭವತ್ ಕಥಾ ।
> ರಾಮಭೂತಂ ಜಗದಭೂತ್ ರಾಮೇ ರಾಜ್ಯಂ ಪ್ರಶಾಸತಿ ॥

ಹೀಗೆ ಸರ್ವಭೂತಮನಃಕಾಂತನಾಗಿದ್ದ ರಾಮನೂ ಕಡೆಗೆ ಸತ್ತನು. ಆದ್ದರಿಂದ 'ಮಾ ಪುತ್ರಂ ಅನುತಪ್ಯಥಾಃ'.

ಇದೇ ವಸ್ತುವೇ ಶಾಂತಿಪರ್ವದ 29ನೆಯ ಅಧ್ಯಾಯದಲ್ಲೂ ಮರಳಿ ಬಂದಿದೆ; ಮೇಲಿನ ಶ್ಲೋಕಗಳೇ ಬಹು ಮಟ್ಟಿಗೆ ಪುನರಾವರ್ತಿತವಾಗಿವೆ. ಆದರೆ ಇಲ್ಲಿ ಜ್ಞಾತಿಶೋಕಸಂತಪ್ತನಾದ ಯುಧಿಷ್ಠಿರನನ್ನು ಕೃಷ್ಣನು ಹಿಂದಿನ ವೀರರ ನಿದರ್ಶನದಿಂದ ಸಮಾಧಾನ ಮಾಡುತ್ತಾನೆ. 'ರಾಮೇ ರಾಜ್ಯಂ ಪ್ರಶಾಸತಿ' ಎಂದು ಮುಗಿಯುವ ರಾಮರಾಜ್ಯದ ವೈಭವವನ್ನು ಹೇಳುವ ಆರು

ಶ್ಲೋಕಗಳಿವೆ. ಆದರೆ ರಾಮನ ಕಥೆಯೇನೂ ಬರುವುದಿಲ್ಲ. ವನಪರ್ವದ 25ನೆಯ ಅಧ್ಯಾಯದಲ್ಲಿ ದ್ವೈತವನಪ್ರವೇಶಮಾಡಿದ ಪಾಂಡವರನ್ನು ನೋಡಿ ಮಾರ್ಕಂಡೇಯಋಷಿ ರಾಮನನ್ನು ನೆನಸಿಕೊಳ್ಳುತ್ತಾನೆ. ಪಾಂಡವರಂತೆಯೇ ಕಷ್ಟದಲ್ಲಿ ಸಿಕ್ಕ, ಸತ್ಯವ್ರತನಾದ ದಾಶರಥಿ ತಂದೆಯ ಆಣತಿಯಂತೆ ಲಕ್ಷ್ಮಣನೊಂದಿಗೆ ಧನುಸ್ಸು ಹಿಡಿದು ಕಾಡಿನಲ್ಲಿ ಅಲೆದಾಡುತ್ತಿದ್ದಾಗ ಋಷ್ಯಮೂಕಪರ್ವತದ ಮೇಲೆ ಮಾರ್ಕಂಡೇಯ ಅವನನ್ನು ಸಂಧಿಸಿದ್ದನಂತೆ. ರಾಮನನ್ನು 'ಸಹಸ್ರನೇತ್ರಪ್ರತಿಮ', 'ಮಹಾತ್ಮ', 'ಮಹಾನುಭಾವ', 'ಸಮರೇಷ್ವಜೇಯ', 'ಯಮಸ್ಯ ನೇತಾ ನಮುಚೇಶ್ಚ ಹಂತಾ' ಎಂದು ಮುಂತಾಗಿ ವರ್ಣಿಸಿದ್ದಾನೆ. ನಾಲ್ಕು ಶ್ಲೋಕಗಳಲ್ಲಿ ಬರುವ ಈ ರಾಮನ ಪ್ರಸ್ತಾಪದಲ್ಲಿ ಸೀತೆಯ ಉಲ್ಲೇಖವಿಲ್ಲ: ಕಾಡಿಗೆ ಹೋದದ್ದು 'ಸ ಚಾಪಿ ರಾಜಾ ಸಹ ಲಕ್ಷ್ಮಣೇನ' ಎಂದಷ್ಟೇ ಹೇಳಿದ್ದಾರೆ. ರಾಮನನ್ನು ಹೆಸರಿಸಿದ ಉಸಿರಿನಲ್ಲೇ ಮಾರ್ಕಂಡೇಯನು ನಾಭಾಗ, ಭಗೀರಥ ಮುಂತಾದ 'ಭೂಪ'ರನ್ನೂ ಹೆಸರಿಸಿದ್ದಾನೆ. ಬಲಿಷ್ಠರಾದರೂ ಅಧರ್ಮ ಮಾಡಲಿಲ್ಲವೆಂದು ಇವರೆಲ್ಲರ ಹೆಗ್ಗಳಿಕೆ.

ಅಂತೂ ಹಿಂದೆ ಇದ್ದು, ಆಳಿ, ಕೀರ್ತಿಶೇಷರಾದ ರಾಜರ ಪಟ್ಟಿಯಲ್ಲಿ ರಾಮನು ಸೇರಿದ್ದಾನೆ. ರಾಮನೆಂಬ ರಾಜನ ಶುಭ್ರವಾದ ಯಶಸ್ಸು ಆಗಲೇ ಪ್ರಸಿದ್ಧವಾಗಿದ್ದುದು ಮಹಾಭಾರತದ ಹಲವೆಡೆ ತಿಳಿದುಬರುತ್ತದೆ. ರಾಮ-ರಾವಣರ ಯುದ್ಧ ಅದ್ಭುತವಾಗಿದ್ದಿತೆಂಬುದೂ ಆಗಿನ ಪ್ರಖ್ಯಾತಿಯೇ. ದ್ರೋಣಪರ್ವದಲ್ಲಿ ಘಟೋತ್ಕಚ-ಭೀಮಸೇನರ ದ್ವಂದ್ವಯುದ್ಧವನ್ನು ವರ್ಣಿಸುತ್ತಾ 'ಯಾದೃಶಂ ಹಿ ಪುರಾ ವೃತ್ತಂ ರಾಮರಾವಣಯೋರ್ಮೃಧೇ' ಎಂದು ಸಂಜಯ ಹೇಳುತ್ತಾನೆ *(96ನೆಯ ಅಧ್ಯಾಯ, ಶ್ಲೋಕ 28)*. ರಾಮ-ರಾವಣರ ನಡುವೆ ನಡೆದ ಯುದ್ಧವನ್ನು 'ಹಿಂದೆ ನಡೆದದ್ದು' ('ಪುರಾ ವೃತ್ತಂ') ಎಂದು ಹೇಳಿರುವುದನ್ನು ಗಮನಿಸಬೇಕು. ಪುನಃ ಅದೇ ಪರ್ವದ 194ನೆಯ ಅಧ್ಯಾಯದಲ್ಲಿ ಧೃತರಾಷ್ಟ್ರನು ಅಶ್ವತ್ಥಾಮನ ವಿಚಾರವನ್ನು ಹೇಳುತ್ತ 'ಮಹೋದಧಿಯಂತೆ ಅಕ್ಷೋಭ್ಯನಾದವನು—ದಶರಥನ ಮಗ ರಾಮನಂತೆ' *(ಶ್ಲೋಕ 12)* ಎಂದು ಹೇಳುತ್ತಾನೆ. ರಾಮನ ಕೀರ್ತಿ ಹೀಗೆ ಮಹಾಭಾರತದಲ್ಲಿ ವಿಶಾಲವಾಗಿ ಹರಡಿದೆ. ದೈವತ್ವದ ಆರೋಪಣೆ ಇಲ್ಲಿ

ಇಲ್ಲವೇ ಇಲ್ಲವೆನ್ನಬಹುದು. ಮನುಷ್ಯನಾದ ರಾಜ ತನ್ನ ಹಿರಿಮೆಯಿಂದ ಅಜರಾಮರವಾದ ಯಶಸ್ಸಿಗೆ ಆಕರನಾದನೆಂದು ಹೇಳಲು ಅಡ್ಡಿಯಿಲ್ಲ.

ಆದರೆ ಇದಕ್ಕೆ ಅಪವಾದವೆಂಬಂತೆ ವನಪರ್ವದಲ್ಲಿ ಹನುಮಂತನೇ ಹೇಳುವ ರಾಮನ ಕಥೆಯಲ್ಲಿ ಅವತಾರದ ಸೂಚನೆಯಿದೆ. ಭೀಮಸೇನನು ಲೋಮಶತೀರ್ಥಯಾತ್ರೆ ಮಾಡುತ್ತ ಕದಲೀಷಂಡವನ್ನು ಹೊಕ್ಕಾಗ ಹನುಮಂತನನ್ನು ಸಂಧಿಸುತ್ತಾನೆ. ಮಾತಿಗೆ ಮಾತು ಬೆಳೆದು ಭೀಮನು 'ಗುಣಶ್ಲಾಘ್ಯ'ನಾದ, 'ಬುದ್ಧಿಸತ್ತ್ವಬಲಾನ್ವಿತ'ನಾದ ರಾಮಾಯಣದಲ್ಲಿ 'ಅತಿವಿಖ್ಯಾತ'ನಾದ, 'ವಾನರಪುಂಗವ'ನಾದ ಹನುಮಂತನನ್ನು ಹೆಸರಿಸುತ್ತಾನೆ. ಆಗ ಹನುಮಂತನು ಒಲಿದು ತನ್ನ ವೃತ್ತಾಂತವನ್ನು ಹೇಳಿಕೊಳ್ಳುತ್ತಾನೆ. ಆ ಸಂದರ್ಭದಲ್ಲಿ ಸಂಕ್ಷೇಪವಾಗಿ ರಾಮಾಯಣದ ಕಥೆಯ ನಿರೂಪಣೆಯಿದೆ. ರಾಮನ ವಿಚಾರ ಹೇಳುತ್ತ 'ಅಥ ದಾಶರಥಿರ್ವೀರೋ ರಾಮೋ ನಾಮ ಮಹಾಬಲಃ । ವಿಷ್ಣುರ್ಮಾನುಷರೂಪೇಣ ಚಚಾರ ವಸುಧಾತಲಂ' ಎನ್ನುವ ಮಾತು ಬರುತ್ತದೆ. ವಿಷ್ಣುವು ಮನುಷ್ಯರೂಪದಿಂದ ಭೂಮಿಯ ಮೇಲೆ ಬಂದನೆಂಬುದು ಭಕ್ತಿಯಿಂದ ಹೇಳಿದ ಔಪಚಾರಿಕವಾದ ಮಾತೋ ಅಥವಾ ನಿಜವಾಗಿ ಅವತಾರದ ಕಲ್ಪನೆಯನ್ನು ಇಲ್ಲಿ ಕಾಣಬಹುದೋ, ನಿರ್ಧರಿಸುವುದು ಕಷ್ಟ. ಅಂತೂ ಇದೊಂದು ಉಲ್ಲೇಖವನ್ನು ಬಿಟ್ಟರೆ ಮಹಾಭಾರತದಲ್ಲಿ ರಾಮ ಎಷ್ಟು ಮಹಾತ್ಮನಾದರೂ ಮನುಷ್ಯಮಟ್ಟವನ್ನು ಮೀರಿಲ್ಲ, ಮೀರುವ ಪ್ರಸಂಗ ಅವನಿಗೆ ಒದಗಲಿಲ್ಲ.

ವಾಲ್ಮೀಕಿಯ ರಾಮಾಯಣದಲ್ಲಿ ಮಹಾಭಾರತದ ಕಥೆಯಾಗಲೀ, ಪ್ರಸ್ತಾಪವಾಗಲೀ, ಪಾತ್ರಗಳ ಉಲ್ಲೇಖವಾಗಲೀ ಬರುವುದಿಲ್ಲ. ಆದರೆ ಇದೊಂದರಿಂದ ವಾಲ್ಮೀಕಿರಾಮಾಯಣದ ಪ್ರಾಚೀನತೆಯನ್ನು ಸಾಧಿಸುವುದು ಆಗದು. ಅಪರಿಮಿತವ್ಯಾಪ್ತಿಯಿರುವ ಮಹಾಭಾರತದ ಸ್ವರೂಪವೇ ವಿವಿಧ ಆಖ್ಯಾನಗಳ, ಉಪಾಖ್ಯಾನಗಳ, ವೃತ್ತಾಂತಗಳ, ಉಲ್ಲೇಖಗಳ ಸಂಗ್ರಹ; ಅದರಲ್ಲಿ ಏಕರಸವೆಂಬುದು ಬಹುದೀರ್ಘಸೂತ್ರ. ಆದರೆ ರಾಮಾಯಣದ ವಸ್ತು ಪರಿಮಿತವಾದದ್ದು. ಅದು ಕೆಲವೇ ಪ್ರಸಂಗಗಳನ್ನು ಹಿಡಿದು ಅವುಗಳ ಸುತ್ತ ನಾಜೂಕಾಗಿ ಹಣೆದಿರುವ ಕಾವ್ಯವೇಣಿ. ಅದರಲ್ಲಿ ಬೇರೆ ವಿಷಯಕ್ಕೆ

ಬೇರೆ ಮಾತಿಗೆ ಅವಕಾಶವಿಲ್ಲ. ಅನೈಜವಾಗಿ ಬೆಳೆದಿರುವ ಇಡೀ ಉತ್ತರಕಾಂಡ ಮತ್ತು ಬಾಲಕಾಂಡದ ಬಹು ಭಾಗಗಳನ್ನು ಬಿಟ್ಟರೆ ಉಳಿದ ಎಲ್ಲೂ ಯಾವ ಆಖ್ಯಾನವೂ ಕಾಣಬರುವುದಿಲ್ಲ. ಅದುಕಾರಣ ಮಹಾಭಾರತದ ಪ್ರಸ್ತಾಪ ಅಲ್ಲಿ ಬರದಿದ್ದರೆ ಆಶ್ಚರ್ಯವೇನಲ್ಲ.

ಮಹಾಭಾರತದ ಮುಖ್ಯಪಕ್ಷಗಳಾದ ಕುರುಗಳ ಮತ್ತು ಭರತರ ಉಲ್ಲೇಖ ವೈದಿಕವಾಙ್ಮಯದಲ್ಲೇ ಬರುತ್ತದೆ; ಭಾರತಯುದ್ಧ ಪಾಣಿನಿಗೆ ತಿಳಿದಿದ್ದಿತೆಂದು ಹೇಳಲು ಆಧಾರವುಂಟು. ಮಹಾಭಾರತದ ವಸ್ತುವಾದ ಯುದ್ಧ ದ್ವಾಪರಯುಗದ ಅಂತ್ಯದಲ್ಲಿ, ಅಂದರೆ ಕ್ರಿಸ್ತಪೂರ್ವ 3139ರಲ್ಲಿ ನಡೆಯಿತೆಂದು ಸಾಂಪ್ರದಾಯಿಕವಾದ ಶ್ರದ್ಧೆ; ಇದು 830 ವರ್ಷಗಳ ಹಿಂದಿದ್ದ ಕಲ್ಹಣನ ಕಾಲದಿಂದ ಬಲವಾಗಿರುವ ಶ್ರದ್ಧೆ. ಆದರೆ ಭಾರತವೆಂಬ ಗ್ರಂಥದ ಪ್ರಪ್ರಥಮ ಉಲ್ಲೇಖ ನಮಗೆ ಕಾಣಿಸುವುದು ಆಶ್ವಲಾಯನಗೃಹ್ಯಸೂತ್ರದಲ್ಲಿ; ಎಂದರೆ, ಕ್ರಿಸ್ತಪೂರ್ವ ಐದನೆಯ ಶತಮಾನದ ಸುಮಾರಿಗೆ ಭಾರತದ ಪ್ರಾಚೀನಸಂಸ್ಕರಣವಂತೂ ಸಿದ್ಧವಾಗಿರಬಹುದು. ಕಾಲಾನುಕ್ರಮದಲ್ಲಿ ಗ್ರಂಥ ಹಿಗ್ಗಿಬಂದಿತೆಂಬುದು ನಿರ್ವಿವಾದ. ನಮ್ಮಲ್ಲಿ ಇಂದು ಪ್ರಸಿದ್ಧವಾಗಿರುವ ಮಹಾಭಾರತದ ಪಾಠ ಕ್ರಿಸ್ತಾಬ್ದ ಮೂರು ನಾಲ್ಕನೆಯ ಶತಮಾನದ್ದೆಂದು ತಜ್ಞರ ಅಭಿಪ್ರಾಯ. ಮುಂಚಿನ ಪಾಠಗಳಲ್ಲಿ ರಾಮನ ಕಥೆ ಇದ್ದಿತೋ ಇಲ್ಲವೋ ಹೇಳಲು ಬರುವುದಿಲ್ಲ.

ನೆರೆನಾಡುಗಳಲ್ಲಿ

ಕ್ರಿಸ್ತಾಬ್ದದ ತರುಣದಲ್ಲೇ ಭಾರತೀಯಸಂಸ್ಕೃತಿಯು ನೆರೆನಾಡುಗಳಲ್ಲಿ ಕಾಲಿಟ್ಟು ಬೆಳೆಯಿತಷ್ಟೆ. ನಮ್ಮ ಸಂಸ್ಕೃತಿಯ ಸಂಪರ್ಕದಿಂದಲೇ ಬಲಗೊಂಡು, ಸಿಂಹಳ, ಬರ್ಮ, ಕಂಬುಜ, ಅನ್ನಾಂ, ಮಲಯ, ಸುಮಾತ್ರ, ಜಾವಾ, ಚೀನಾ, ಚೀನೀತುರ್ಕಿಸ್ಥಾನ, ಇಂಡೋಚೀನ, ಟಿಬೆಟ್ ಮುಂತಾದ ರಾಷ್ಟ್ರಗಳ ವಿಭಿನ್ನಸಂಸ್ಕೃತಿಗಳು ಊರ್ಜಿತವಾದವು. ಭಾರತದಿಂದ ಹೀಗೆ ಪ್ರಭಾವಿತ ವಾದ ದೇಶಗಳನ್ನೆಲ್ಲ ಒಟ್ಟಾರೆ ವಿಶಾಲಭಾರತ ಅಥವಾ ಬೃಹದ್ಭಾರತವೆಂದು ವ್ಯವಹರಿಸುವ ಪರಿಪಾಠವಿದೆ. ವಿಶಾಲಭಾರತದ ಸಮಷ್ಟಿರೂಪಕ್ಕೆ ಆಧಾರವಾಗಿ ಉಳಿದಿರುವ ವಿವರಗಳಲ್ಲಿ ಪ್ರಮುಖವಾದುದು ರಾಮಾಯಣ. ರಾಮನ ನಿರವಧಿಕಚಾರಿತ್ರ್ಯ, ವಾಲ್ಮೀಕಿಯ ಅನುಪಮಕಾವ್ಯ—ಎರಡೂ ಕಲೆತು ನಮ್ಮ ದೇಶದಲ್ಲಿ ರಾಮನ ಕಥೆ ಜನಪ್ರಿಯವಾಯಿತು. ಈ ಜನಪ್ರಿಯತೆಯೇ ವಿಶಾಲಭಾರತದ ನಾಡುಗಳಿಗೆಲ್ಲ ರಾಮನ ಕಥೆಯನ್ನು ಒಯ್ದಿತು. ಆ ದೇಶಗಳ ಸಾಹಿತ್ಯದಲ್ಲಿ, ಚಿತ್ರಕಲೆಯಲ್ಲಿ, ಶಿಲ್ಪದಲ್ಲಿ, ನೃತ್ಯದಲ್ಲಿ ರಾಮಾಯಣದ ಪ್ರಭಾವ ಫಲಿಸಿಬಂದಿತು.

ಈ ನಾಡುಗಳಲ್ಲಿ ಹರಡಿದ ರಾಮನ ಕಥೆಗೆ ಆಕರ ಯಾವುದು? ಇಲ್ಲೆಲ್ಲ ಪ್ರಚಲಿತವಾಗಿರುವ ಕಥೆಗಳಲ್ಲಿ ಸ್ಥೂಲವಾದ ನಡೆ ಒಂದೇ ಇದ್ದರೂ ವಿವರಗಳಲ್ಲಿ ತುಂಬ ವೈವಿಧ್ಯ ವ್ಯಕ್ತವಾಗುತ್ತದೆ. ಅವುಗಳಲ್ಲಿ ಹಲವು ನಮ್ಮ ಸಂಪ್ರದಾಯದ ಜಾಡನ್ನು ಬಿಟ್ಟವು, ನಮ್ಮ ಸಾಂಸ್ಕೃತಿಕ ಮನೋಧರ್ಮಕ್ಕೆ ಅಸಮಂಜಸವಾದವು, ಆಯಾ ದೇಶಗಳ ಪೂರ್ವೇತಿಹಾಸವನ್ನು ಅವಲಂಬಿಸಿದವು. ವಾಲ್ಮೀಕಿಯ ಆದಿಕಾವ್ಯವೇ ಮೂಲಾಧಾರವೆಂದರೂ ಇಲ್ಲಿಯೇ ಜನಗಳ ನಡುವೆ ಬಳಕೆಯಲ್ಲಿದ್ದ ಹಲವಾರು ಇತರ

ಇತಿವೃತ್ತಗಳೂ ವಿಶಾಲಭಾರತದ ರಾಮಾಯಣಗಳಲ್ಲಿ ಸೇರಿವೆಯೆಂದು ಒಪ್ಪಬೇಕು.

ಕ್ರಿಸ್ತಶಕದ ಆದಿಶತಕದಲ್ಲೇ ಸಂಸ್ಕೃತರಾಮಾಯಣ ಜಾವಾದೇಶವನ್ನು ಪ್ರವೇಶಿಸಿತು. ಆಗಿನ ಜಾವಾ ಅರಸರು ಹಿಂದುಗಳು, ಶೈವಪಕ್ಷಪಾತಿಗಳು. ಅವರ ರಾಜಧಾನಿಯು ಮಜಪಹಿತ್ ಎಂಬ ನಗರ; ಅದರ ಪರಿಸರದಲ್ಲಿ ಸೆಲಕೆಲಿರ್ ಎಂಬ ಬೆಟ್ಟವಿದ್ದಿತು. ಇಲ್ಲಿಯೂ ಪೂರ್ವಜಾವಾದ ಪನತರನ್ ಎಂಬಲ್ಲಿಯೂ ಹಲವಾರು ಶಿವದೇವಾಲಯಗಳನ್ನು ಈ ರಾಜರು ಕಟ್ಟಿಸಿದರು. ಇಲ್ಲಿ ಪ್ರಾಕಾರಗಳ ಮೇಲೆ ರಾಮಾಯಣದ ವಸ್ತುಗಳನ್ನು ಶಿಲ್ಪದಲ್ಲಿ ಬಿಡಿಸಿರುವುದನ್ನು ಕಾಣಬಹುದು. ಪ್ರಂಬನನ್ ಎಂಬಲ್ಲಿನ ಲಾರಾ ಜೋಂಗ್ರಂಗ್ ದೇವಾಲಯದಲ್ಲಿ ನಲವತ್ತೆರಡು ಶಿಲ್ಪಚಿತ್ರಗಳು ರಾಮನ ಕಥೆಯನ್ನು ನಿರೂಪಿಸುತ್ತವೆ. ರಾಮನ ಸೈನ್ಯ ಲಂಕಾನಗರವನ್ನು ಮುಟ್ಟಿದುದೇ ಈ ನಿರೂಪಣೆಯ ಕೊನೆಯ ಘಟ್ಟ. ಉತ್ತರಕಾಂಡದ ಕಥೆ ಈ ಕಡೆ ಪ್ರಚಲಿತವಾಗಿಲ್ಲ. ಇಲ್ಲಿ ಬಳಕೆಯಲ್ಲಿರುವ ಕವಿಭಾಷೆಯ ರಾಮಾಯಣವು ಲಂಕಾಕಾಂಡದಲ್ಲೇ ಸಮಾಪ್ತವಾಗುತ್ತದೆ. ನಮ್ಮಲ್ಲಿ ರಾಮನು ಒಂದೇ ಅಶ್ವಮೇಧಯಾಗ ಮಾಡಿದನಾದರೆ ಜಾವಾನೀರಾಮಾಯಣದಲ್ಲಿ ಹತ್ತು ಅಶ್ವಮೇಧಯಾಗಗಳನ್ನು ಮಾಡಿದವನು ರಾಮ.

ಶಿಲ್ಪಚಿತ್ರಗಳೂ ಮೇಲೆ ಹೇಳಿದ ಕವಿರಾಮಾಯಣವೂ ಬಹುಮಟ್ಟಿಗೆ ವಾಲ್ಮೀಕಿಯ ಕಥೆಯನ್ನೇ ಅವಲಂಬಿಸಿವೆಯೆನ್ನಬಹುದು. ಆದರೆ ವಾಲ್ಮೀಕಿಯ ಜಾಡನ್ನು ಹಿಡಿಯದೆ ಬೇರೊಂದು ಸಂಪ್ರದಾಯವನ್ನು ಅನುಸರಿಸಿ ನಿಂತ ರಾಮಾಯಣದ ಪಾಠವೊಂದು ಜಾವಾದಲ್ಲಿ ಬಳಕೆಯಲ್ಲಿದೆ. ಈ ದೇಶದಲ್ಲಿ ಜನಪ್ರಿಯವಾಗಿರುವ ವಯಂಗ್ ಎಂಬ ಛಾಯಾಚಿತ್ರ-ನೃತ್ಯನಿರೂಪಣೆಗಳೂ ಈ ಸಂಪ್ರದಾಯದಿಂದಲೇ ಪ್ರಭಾವಿತವಾದಂತೆ ತಿಳಿದುಬರುತ್ತದೆ. ಜಾವಾದೇಶದ ಪ್ರಾಚೀನ ಭಾಷೆ ಕಕವಿನ್ ಎಂಬುದು; ಸಂಸ್ಕೃತ ಮತ್ತು ಪಾಲಿನೀಷ್ಯನ್-ಭಾಷೆಗಳ ಮಿಶ್ರಣದಿಂದ ಉದ್ಭೂತವಾದ ಭಾಷೆಯಿದು. ಈ ಭಾಷೆಯಲ್ಲಿ ಕ್ರಿಸ್ತಾಬ್ದ 1104ರ ಸುಮಾರಿಗೆ ವಿರಚಿತವಾದ ರಾಮಾಯಣದ ಪಾಠವೊಂದು ಉಳಿದುಬಂದಿದೆ. ಈ ಪಾಠವು ವೈಷ್ಣವಧರ್ಮದಿಂದ ಪ್ರಭಾವಿತವಾದದ್ದು. ಇದರಲ್ಲಿ ರಾವಣನ ಪೂರ್ವಚರಿತ್ರೆಯಾಗಲೀ

ಯುದ್ಧೋತ್ತರಕಾಂಡದ ಪ್ರಸ್ತಾಪವಾಗಲೀ ಬರುವುದಿಲ್ಲ. ಇದೇ ದೇಶದಲ್ಲಿ ಜಸಧಿಪುರನೆಂಬಾತ ರಚಿಸಿದ 'ಸೆರತ್‌ರಾಮ' ಎಂಬ ಇನ್ನೊಂದು ರಾಮಾಯಣವೂ ಬಳಕೆಯಲ್ಲಿದೆ. ಇದರಲ್ಲಿ ರಾವಣನ ಪೂರ್ವಕಥೆ ಸುವಿಸ್ತಾರವಾಗಿ ಬರುತ್ತದೆ. ಉತ್ತರಕಾಂಡದ ಕಥೆಯನ್ನು ಸಂಗ್ರಹವಾಗಿ ಹೇಳುವ ಗದ್ಯಗ್ರಂಥವೊಂದೂ ಈ ಕಡೆ ಉಳಿದಿದೆ. ಇವೆರಡೂ ಅರ್ವಾಚೀನಕೃತಿಗಳು.

ಭಾರತಭೂಭಾಗಕ್ಕೆ ಮೈತಾಕಿಸಿ ನಿಂತ ಮಲಯವು ಒಂದು ಕಾಲಕ್ಕೆ ಜಾವಾದ ಅರಸರ ಅಂಕೆಯಲ್ಲೇ ಇದ್ದಿತು. ಮಲಯದಲ್ಲಿ ಬಳಕೆಯಲ್ಲಿದ್ದ ರಾಮನ ಕಥೆಗಳೂ ಜಾವಾದೇಶದಲ್ಲಿ ಪ್ರಚಲಿತವಾದುವು. ಮಲಯದಲ್ಲಿ ಹದಿನಾಲ್ಕಕ್ಕೂ ಮೀರಿ ರಾಮನ ಕಥೆಗಳು ಬಳಕೆಯಲ್ಲಿವೆ. ಇವುಗಳಲ್ಲಿ ಭಾರತೀಯ ವಿವರಗಳೊಂದಿಗೆ ಮಲಯಾ ಜಾನಪದಗಾಥೆಗಳೂ ಸೇರಿ ಸ್ವಾರಸ್ಯವಾದ ಕಥೆಗಳಾಗಿವೆ. ತಂದೆಯಿಂದ ಹೊರದೂಡಲ್ಪಟ್ಟ ರಾವಣನು ನಾವೆಯೊಂದನ್ನೇರಿ ಸೆರೆನ್‌ದ್ವೀಪ(ಎಂದರೆ ಸಿಂಹಳ ದ್ವೀಪ)ವನ್ನು ಸೇರಿ, ಅಲ್ಲಿ ಹನ್ನೆರಡು ವರ್ಷಗಳು ಉಗ್ರತಪಶ್ಚರ್ಯೆ ಮಾಡಿ ಆದಂ(!)ನ ಪ್ರತ್ಯಕ್ಷ ಮಾಡಿಕೊಳ್ಳುತ್ತಾನೆ. ಹಿಂದೂ ರಾಮಾಯಣದಲ್ಲಿ ಮುಸ್ಲಿಂ ಆದಂ ಬರುವ ಸಂದರ್ಭ ಸ್ವಾರಸ್ಯವಾದುದು. ಜಾವಾ ಕದಿರಿಯ ರಣವಿಜಯ ರಾಜನ ಅನಂತರ ಪೂರ್ವತೀರದ ಮುಸ್ಲಿಮರು ಪ್ರಬಲರಾಗಿ, ಮಲಯ, ಮಲಚ್ಚ, ಷಹಾಂಗ್, ಮುಂತಾದೆಡೆಗಳಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಂಡರು. ಇವರು ಮೊದಲಿಗೆ ಮಲಬಾರ್ ಮತ್ತು ಕೋರಮಂಡಲತೀರದವ ರಾದುದರಿಂದ ಹಿಂದೂಸಂಸ್ಕೃತಿಯನ್ನು ಅಷ್ಟಿಷ್ಟು ಅರಗಿಸಿಕೊಂಡಿದ್ದರು. ಅಷ್ಟೇ ಅಲ್ಲ, ತಮ್ಮ ಮೂಲಪುರುಷನು ಮಲಚ್ಚದ ಪರಮೇಶ್ವರನೆಂಬ ಹಿಂದೂದೊರೆಯೆಂದೇ ಅವರ ಕಲ್ಪನೆಯಿದ್ದಿತು. ಇದು ರಾವಣನಿಗೂ ಆದಂಗೂ ಒದಗಿದ ಸಂಬಂಧದ ಹಿನ್ನೆಲೆ.

ಮಲಯದ ರಾಮಾಯಣಗಳಲ್ಲಿ ಪ್ರಮುಖವಾದುದು 'ಹಿಕಾಯತ್ ಸೆರಿ ರಾಮ' ಎಂಬುದು. ಪ್ರಾಚೀನಪಾಠಗಳೆನಿಸಿದ 'ರಾಮ ಕ್ಲಿಂಗ್' ಮತ್ತು 'ಸೆರತ್ ಕಂಡ' ಎರಡನ್ನೂ ಅವಲಂಬಿಸಿ ಈ ರಾಮಾಯಣವು ಸಿದ್ಧವಾಯಿತೆಂದು ಹೇಳುತ್ತಾರೆ. ದಶಮುಖನು ವಿದ್ಯಾಧರಿಯೊಬ್ಬಳನ್ನು

ಮೋಹಿಸಿ ಅವಳನ್ನು ಬಲಾತ್ಕಾರವಾಗಿ ಅಪಹರಿಸಿದುದೂ, ಅವಳಿಂದ ಇಂದ್ರಜಿತ್ತು ಹುಟ್ಟಿದುದೂ 'ರಾಮಕ್ಲಿಂಗ್'ನಲ್ಲಿ ವಿಸ್ತಾರವಾಗಿ ಬರುತ್ತದೆ. 'ಸೆರತ್ ಕಂಡ'ವೆಂಬುದು ಹಲವು ಗ್ರಂಥಗಳ ಸಂಕಲನ. ಇಲ್ಲಿ ವಿಚಿತ್ರವಾದ ವಿವರಗಳು ಕಾಣಿಸಿಕೊಳ್ಳುತ್ತವೆ. ಮೆಕ್ಕಪಟ್ಟಣದಲ್ಲಿ ಆದಂ ತನ್ನ ಮಕ್ಕಳಾದ ಸೈತಾನ್, ಅಬಿಲ್ ಮತ್ತು ಕಬಿಲ್‌ರೊಡನೆ ಇದ್ದುದರಿಂದ ಆರಂಭವಾಗುವ ಈ ಸಂಕಲನದಲ್ಲಿ ಹಿಂದೂ, ಕ್ರೈಸ್ತ, ಮುಸ್ಲಿಂದೇವತೆಗಳು ನಿರಾತಂಕವಾಗಿ ಓಡಾಡುತ್ತಾರೆ. ನೋಆ ಎಂಬ ಪುರುಷನಿಗೂ ಉಮಾ ಎಂಬ ಸ್ತ್ರೀಗೂ ಬೆಳೆದುಬಂದ ಬಾಂಧವ್ಯದ ಫಲವಾಗಿ ಶಿವ ಹುಟ್ಟಿಕೊಳ್ಳುತ್ತಾನೆಂದು ಇಲ್ಲಿ ಬರುವ ವಿವರ.

ವಿಷ್ಣುವಿನ ಮತ್ತು ಪ್ರಾಚೀನ ಜಾವಾನೀದೊರೆಗಳ ಪೂರ್ವೇತಿಹಾಸವೇ ಸುಮಾರು ಇಪ್ಪತ್ತು ಪರಿಚ್ಛೇದಗಳನ್ನು ಆಕ್ರಮಿಸಿದೆ. ಇಪ್ಪತ್ತೆರಡನೆಯ ಪರಿಚ್ಛೇದದಲ್ಲೇ ರಾಮನ ಕಥೆಯು ಆರಂಭವಾಗುವುದು. ಆದರೆ ನಲವತ್ತೈದನೆಯ ಪರಿಚ್ಛೇದದವರೆಗೂ ರಾಮನ ಮತ್ತು ರಾವಣನ ಪೂರ್ವಜರ ಪುರಾಣವೇ ಬಂದಿದೆ. ಜಾವಾನೀದೊರೆಗಳು ರಾಮನ ವಂಶಜರೆಂದು ಅಲ್ಲಿನವರ ಶ್ರದ್ಧೆಯಾದುದರಿಂದ ರಾಮನ ವಂಶವೃತ್ತಕ್ಕೆ ಇಷ್ಟು ಪ್ರಾಶಸ್ತ್ಯ. ಇಲ್ಲಿ ರಾಮನನ್ನು ಭಾರ್ಗವನೆಂದೂ, ಲಕ್ಷ್ಮಣನನ್ನು ಮುರ್ಧಕನೆಂದೂ, ಸೀತೆಯನ್ನು ಸಿಂತೆಯೆಂದೂ, ಜನಕನನ್ನು ಕಾಲನೆಂದೂ, ಜಟಾಯುವನ್ನು ಜಿಂತಯನೆಂದೂ ವ್ಯವಹರಿಸುವುದು ಸ್ವಾರಸ್ಯವಾಗಿದೆ. ಇಲ್ಲಿನ ಹನುಮಂತ (ಅನುಮಾನ್) ರಾಮ-ಸೀತೆಯರ ಮಗನೇ! ಒಮ್ಮೆ ಸೀತಾ-ರಾಮರು ಕಪಿರೂಪಗಳನ್ನು ಧರಿಸಿ ವಿಹರಿಸುತ್ತಿದ್ದರಂತೆ. ಆಗ ಅವರ ಸಂಸರ್ಗದ ಸಂತಾನವಾಗಿ ಹನುಮಂತ ಬಂದನಂತೆ! ಹೀಗೆಯೇ ಅಡ್ಡಾದಿಡ್ಡಿಯಾಗಿ ರಾಮನ ಕಥೆ ಮುಂದುವರಿದು ಲಂಕಾಪ್ರವೇಶದ ಘಟ್ಟವನ್ನು ಮುಟ್ಟಿದೊಡನೆ ಹೇಗೋ ತಟ್ಟನೆ ಮಹಾಭಾರತದ ಕಥೆ ಒದಗಿಬಂದು, ಮುಂದೆ ಎಪ್ಪತ್ತನೆಯ ಪರಿಚ್ಛೇದದವರೆಗೂ ಮಹಾಭಾರತದ ಕಥೆಯೇ ಕಾಣಿಸಿಕೊಳ್ಳುತ್ತದೆ.

ರಾವಣನ ವಧೆಯಾದನಂತರ ಸೀತಾಪರಿತ್ಯಾಗದ ಪ್ರಸಂಗ ಬರುತ್ತದೆ. ರಾವಣನ ಚಿತ್ರವನ್ನು ಮೂಡಿಸಿದ್ದ ಬೀಸಣಿಗೆಯೊಂದು ಸೀತೆಯ

ವಶದಲ್ಲಿದ್ದಿತೆಂದೂ ಅದರಿಂದ ಸೀತೆಯ ಚಾರಿತ್ರ್ಯದ ಬಗ್ಗೆ ಸಂಶಯಗ್ರಸ್ತನಾದ ರಾಮನು ಸೀತೆಯನ್ನು ಕಾಡಿಗಟ್ಟಿದನೆಂದೂ ಇಲ್ಲಿ ಬರುವ ವಿವರ. ಮುಂದೆ ಸೀತಾರಾಮರ ಪುನರ್ಮಿಲನ ಕಾಲಮಹರ್ಷಿಯ ಆಶ್ರಮದಲ್ಲಿ ನಡೆಯುತ್ತದೆ. ರಾವಣನ ಚಿತ್ರವನ್ನು ಬೀಸಣಿಗೆಯ ಮೇಲೆ ಬಿಡಿಸಿದವಳು ಸೀತೆಯೇ; ಹಾಗೆ ಬಿಡಿಸಲು ಕಾರಣಳಾದವಳು ಕೈಕೇಯಿ. ಇಲ್ಲಿನ ಕೈಕೇಯಿ ರಾಮನ ಮಲತಾಯಿಯಲ್ಲ, ತಂಗಿ; ಮುಂದೆ ಆಕೆ ವಿಭೀಷಣನ ಮಡದಿಯಾಗುತ್ತಾಳೆ. ರಾಮನ ಮಗ ಲವಕುಮಾರನು ಮದುವೆಯಾಗುವುದು ರಾವಣನ ಮೊಮ್ಮಗಳ(ಇಂದ್ರಜಿತ್ತುವಿನ ಮಗಳ)ನ್ನು. ಇಂಥ ವಿಚಿತ್ರವಾದ ನೂರಾರು ವಿವರಗಳು ಈ ಗ್ರಂಥದಲ್ಲಿ ಉಪಲಬ್ಧವಿವೆ.

ಮಲಯಾದೇಶದ ಉತ್ತರದಿಗ್ಭಾಗದಿಂದ ಕ್ರಿಸ್ತಾಬ್ದ ಮೂರನೆಯ ಶತಮಾನದ ಸುಮಾರಿಗೆ ಕೌಂಡಿನ್ಯನೆಂಬ ಬ್ರಾಹ್ಮಣನು ಸಮುದ್ರಮಾರ್ಗವಾಗಿ ಕಂಬೋಡಿಯದೇಶವನ್ನು ಸೇರಿದಂತೆ ತಿಳಿದುಬರುತ್ತದೆ. ಭಾರತೀಯರು ಈ ಪ್ರದೇಶವನ್ನು ಕಂಬುಜವೆಂದೂ ಚೀನೀಜನರು ಫುನಾನ್ ಎಂದೂ ಕರೆಯುತ್ತಿದ್ದರು. ಕೌಂಡಿನ್ಯನು ಇಲ್ಲಿಗೆ ಬಂದು ಬ್ರಾಹ್ಮಣ ಅರಸೊತ್ತಿಗೆ ಯೊಂದನ್ನು ಸ್ಥಾಪಿಸಿದನೆಂದು ಹೇಳುತ್ತಾರೆ. ಶೈವಪಕ್ಷಪಾತಿಗಳಾದ ಈ ಅರಸರು ವೈಷ್ಣವಧರ್ಮವನ್ನೂ ಬೌದ್ಧಧರ್ಮವನ್ನೂ ರಕ್ಷಿಸಿದರು. ಚೀನೀಬೌದ್ಧಧರ್ಮವನ್ನು ರೂಪಿಸಿದ ಭಿಕ್ಷುಗಳು ಇಲ್ಲಿಂದ ಹೋದವರೇ. ಅಂತೂ ಕೌಂಡಿನ್ಯಪರಂಪರೆಯಲ್ಲಿ ಬಂದ ಜಯವರ್ಮನೆಂಬ ರಾಜನು (968-1001) ಬಪು ಆನ್ (ಹೇಮಶೃಂಗಗಿರಿ) ಎಂಬಲ್ಲಿ ದೇವಾಲಯ ವೊಂದನ್ನು ಕಟ್ಟಿಸಿ ಅದರ ಗೋಡೆಗಳ ಮೇಲೆ ರಾಮಾಯಣದ ಪ್ರಸಂಗಗಳನ್ನು ಅಧಿಕರಿಸಿದ ಶಿಲ್ಪಗಳನ್ನು ಕಡೆಸಿದನು. ರಾಮಲಕ್ಷ್ಮಣರ ವನಗಮನ, ಸುಗ್ರೀವಸಮಾಗಮ, ವಾಲಿಸುಗ್ರೀವರ ಸಮರ, ಅಶೋಕವನಿಕೆಯಲ್ಲಿ ಸೀತೆ, ಸಿಂಹಾರೂಢನಾದ ದಶಕಂಠ, ಹನುಮಂತನ ಬೆನ್ನೇರಿ ಯುದ್ಧಸನ್ನದ್ಧನಾದ ರಾಮ, ಸೀತಾರಾಮರ ಪಟ್ಟಾಭಿಷೇಕ ಮುಂತಾದ ಪ್ರಸಂಗಗಳೆಲ್ಲ ಸ್ವಾರಸ್ಯವಾಗಿ ಶಿಲೆಯಲ್ಲಿ ನಿರೂಪಿತವಾಗಿವೆ. ಹನ್ನೆರಡನೆಯ ಶತಮಾನದಲ್ಲಿ ಇಮ್ಮಡಿ ಸೂರ್ಯವರ್ಮನೆಂಬ ಕಂಬುಜರಾಜನು ಅಂಕೋರ್‌ವಾಟದಲ್ಲಿ ತನಗಾಗಿ ಸಮಾಧಿಮಂದಿರವೊಂದನ್ನು ಕಟ್ಟಿಸಿದನು. ವಿಶ್ವದಲ್ಲೇ

ಅತಿವಿಶಾಲವಾದ ದೇವಮಂದಿರವೆಂದು ವಿಖ್ಯಾತವಾದ ಈ ಅಂಕೋರ್ ವಾಟದಲ್ಲಿ ರಾಮಾಯಣದ ಕಥೆ ಭವ್ಯವಾದ ಭಿತ್ತಿಶಿಲ್ಪಗಳಲ್ಲಿ ಮೂಡಿಬಂದಿದೆ. ಪರಮವಿಷ್ಣುವೇ ರಾಮನ ರೂಪದಲ್ಲಿ ಪ್ರಮುಖದೇವತೆಯೆಂಬ ಕಲ್ಪನೆ ಇಲ್ಲಿ ಕಾಣುತ್ತದೆ.

ಕಂಬೋಡಿಯಕ್ಕೆ ಹೊಂದಿಕೊಂಡಿರುವ ಸಯಾಂ (ಥಾಯ್‌ಲ್ಯಾಂಡ್) ದೇಶದಲ್ಲಿಯೂ ಅರಸನು ರಾಮನ ಅವತಾರವೆಂದೇ ಪ್ರತೀತಿ. 1350ರಲ್ಲಿ ಪಟ್ಟವೇರಿದ ಅರಸು ರಾಮಾಧಿಪತಿಯೆಂಬುವನು ತನ್ನ ರಾಜಧಾನಿಗೆ ಅಯೋಧ್ಯೆಯೆಂದೇ ಹೆಸರಿಟ್ಟನು. ಇಂದು ನಾಮಾವಶೇಷವಾಗಿರುವ ಈ ಊರು ಈಗಿನ ಬಾಂಗ್‌ಕಾಕ್‌ನ ಬಳಿಯಿದ್ದಿತು. ರಾಜಧಾನಿ ಅಯೋಧ್ಯೆಯಿಂದ ಬಾಂಗ್‌ಕಾಕ್‌ಗೇ ಹೋದಂದು ಅಲ್ಲಿ ಕಟ್ಟಿಸಿದ ಅರಮನೆಗಳಲ್ಲಿ ರಾಮಾಯಣದ ದೃಶ್ಯಗಳನ್ನು ಭಿತ್ತಿಚಿತ್ರಗಳಲ್ಲಿ ಮೂಡಿಸಿದರು. ಬಾಂಗ್‌ಕಾಕ್‌ನಲ್ಲಿರುವ ವಾಟ್ ಚತು ಫೋನ್ ಎಂಬ ಬೌದ್ಧವಿಹಾರದ ದ್ವಾರಗಳ ಮೇಲೆ ಬೆಳ್ಳಿಯ ತಗಡಿನಲ್ಲಿ ರಾಮನ ಕಥೆಯನ್ನು ಬಿಡಿಸಿದ್ದಾರೆ.

ಕ್ರಿಸ್ತಾಬ್ದದ ಎರಡನೆಯ ಶತಮಾನದ ಸುಮಾರಿಗೇ ಇಂಡೋಚೀನದಲ್ಲೂ ಭಾರತೀಯಸಂಸ್ಕೃತಿ ಬೆಳೆಯಲಾರಂಭಿಸಿತು. ಇಲ್ಲಿಯೂ ಮೊದಲಿನಿಂದ ರಾಮಾಯಣವು ಪ್ರಚಲಿತವಾಗಿದ್ದಿತು. ಶಾಸನಗಳಲ್ಲಿ, ಶಿಲ್ಪದಲ್ಲಿ, ವಾಸ್ತುವಿನಲ್ಲಿ ರಾಮನ ಕಥೆಯನ್ನು ನಿಲ್ಲಿಸುವ ಸಂಪ್ರದಾಯ ಇಲ್ಲಿ ಪ್ರಾಚೀನವಾದುದು. ಕ್ರಿಸ್ತಾಬ್ದ 600ರ ಶಾಸನವೊಂದರಲ್ಲಿ ಸೋಮಶರ್ಮನೆಂಬಾತನು ಕಂಬುಜದ ದೇವಾಲಯವೊಂದಕ್ಕೆ ರಾಮಾಯಣವನ್ನು ದಾನಮಾಡಿ ದಿನಂಪ್ರತಿ ಅದರ ಪಾರಾಯಣದ ವ್ಯವಸ್ಥೆಯನ್ನು ಮಾಡಿದ ಉಲ್ಲೇಖವಿದೆ. ಹಿಂದಿನ ಚಂಪರಾಜ್ಯದಲ್ಲಿ ತ್ರಾ-ಕಿಎನ್ ಎಂಬೆಡೆ ಪ್ರಕಾಶಧರ್ಮನೆಂಬ ರಾಜನು (653-679) ವಾಲ್ಮೀಕಿಗೆಂದೇ ಒಂದು ದೇವಾಲಯವನ್ನು ಕಟ್ಟಿಸಿದ್ದನಂತೆ. ಅಲ್ಲಿನ ಶಾಸನದಲ್ಲಿ 'ಕವೇರಾದ್ಯಸ್ಯ ವಾಲ್ಮೀಕಿ... ಪೂಜಾಸ್ಥಾನಂ' ಎನ್ನುವ ಮಾತು ಮೂಡಿಬಂದಿದೆ. ಮತ್ತು 'ಯಸ್ಯ ಶೋಕಾತ್ ಸಮುತ್ಪನ್ನಂ ಶ್ಲೋಕಂ' ಎಂಬ ವಿವರಣೆಯೂ, ರಾಮನನ್ನು ಕುರಿತು 'ವಿಷ್ಣೋಃ ಪುಂಸಃ ಪುರಾಣಸ್ಯ ಮಾನುಷಸ್ಯಾತ್ಮರೂಪಿಣಃ' ಎನ್ನುವ ಲಕ್ಷಣವೂ ಇದೇ ಶಾಸನದಲ್ಲಿ ಕಂಡಬರುತ್ತದೆ.

ಅನ್ನಾಂದೇಶದ ಪ್ರಾಚೀನ ಐತಿಹಾಸಿಕಕಥನಗಳ ಸಂಗ್ರಹದಲ್ಲಿ ರಾಮಾಯಣವೊಂದು ಸೇರಿದೆ. ಇದನ್ನು ಪ್ರೊ. ಹ್ಯುಬರ್ ಎಂಬ ಪಂಡಿತರು 1905ರಲ್ಲಿ ಸಂಶೋಧಿಸಿದರು. ಈ ರಾಮಾಯಣಕ್ಕೆ 'ರಾಕ್ಷಸರಾಜ' ಎಂದು ಹೆಸರಂತೆ. ಇಲ್ಲಿ ರಾಮ, ಸೀತೆ ಎಂಬ ಹೆಸರುಗಳೇನೋ ಕಾಣಸಿಗುವುದಿಲ್ಲ. ಆದರೆ ಈ ಕಥೆಯಲ್ಲಿ ದಶರಥ ಇದ್ದಾನೆ, ದಶಾನನ ಬರುತ್ತಾನೆ. ದಶರಥನು ಹೊ-ತೊನ್-ಕಿನ್ಹಾ (ಎಂದರೆ ಚಂಪಾ) ಎಂಬಲ್ಲಿ ರಾಜನಾಗಿದ್ದನಂತೆ. ಅನ್ನಾಂ ದೇಶದ ಥಾಮ್ ಎಂಬ ಜನರು ಅಂದಿನ ಚಂಪಾವಾಸಿಗಳ ವಂಶಜರಂತೆ. ಸೀತೆಯ ಲಾವಣ್ಯಕ್ಕೆ ಮನಸೋತ ದಶಾನನನು ದಶರಥನ ರಾಜ್ಯದ ಮೇಲೆ ದಾಳಿಮಾಡಿ ಆಕೆಯನ್ನು ಚಂಪಾರಾಜ್ಯದ ದಕ್ಷಿಣಭಾಗದಲ್ಲಿದ್ದ ತನ್ನ ಊರಿಗೆ ಕರೆದೊಯ್ದನಂತೆ. ಅನಂತರ ದಶರಥನ ಮಗನಾದ ರಾಮನು ಕಪಿಗಳ ಸೈನ್ಯವೊಂದನ್ನು ಸೇರಿಸಿ, ದಾರಿಗೆ ಅಡ್ಡಲಾಗಿ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿಸಿ, ದಶಾನನನ ರಾಜ್ಯವನ್ನು ಮುತ್ತಿ ಸೀತೆಯನ್ನು ಬಿಡಿಸಿಕೊಂಡು ಬಂದನಂತೆ.

ಕ್ರಿಸ್ತಾಬ್ದ 250ರ ಸುಮಾರಿಗೆ ಚೀನಾದೇಶದ ಸೋಗ್ದಿಯನ ಎಂಬ ಭಿಕ್ಷುವು ರಾಮಾಯಣವನ್ನು ಚೀನೀಭಾಷೆಗೆ ಪರಿವರ್ತಿಸಿದ್ದಾನೆ. ಇದು ಚೀನೀತ್ರಿಪಿಟಕದಲ್ಲಿ ಜಾತಕದ ರೂಪದಲ್ಲಿ ಉಳಿದುಬಂದಿದೆ. ಇಲ್ಲಿ ರಾಮ, ಸೀತೆ, ರಾವಣ ಇವರ ಹೆಸರುಗಳನ್ನು ನೇರವಾಗಿ ಹೇಳುವುದಿಲ್ಲ; ಆದರೆ ಕಥೆಯೇನೋ ರಾಮಾಯಣವೇ ಎನ್ನಲು ಅಡ್ಡಿಯಿಲ್ಲ. ರಾವಣನಿಂದ ಸೀತಾಪಹರಣವಾದದ್ದು, ಜಟಾಯುವು ರಾವಣನನ್ನು ತಡೆದದ್ದು, ಕಪಿಸೇನೆಯು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದ್ದು, ಸೀತೆ ಶುದ್ಧಿಯಾದದ್ದು ಮುಂತಾದ ವಿವರಗಳೆಲ್ಲ ಇಲ್ಲಿ ಬರುತ್ತದೆ. ಆದರೆ ರಾಮನ ವನವಾಸದಲ್ಲಿ ಮಲತಾಯಿಯ ಕೈವಾಡವಿಲ್ಲ; ನೆರೆನಾಡಿನ ರಾಜನಾಗಿದ್ದ ತನ್ನ ಚಿಕ್ಕಪ್ಪನ ಆಕ್ರಮಣಪ್ರವೃತ್ತಿಗೆ ಅಂಜಿ ತಾನೇ ರಾಜ್ಯ ಪರಿತ್ಯಾಗಮಾಡಿ ಕಾಡಿಗೆ ಹೋಗುತ್ತಾನೆ. ಮೊದಲು ತನ್ನ ದೇಶವನ್ನು ದೋಚಿಕೊಳ್ಳಲು ಹವಣಿಸುತ್ತಿದ್ದ ಚಿಕ್ಕಪ್ಪನನ್ನು ಹಗರಣದಲ್ಲಿ ಹಿಮ್ಮೆಟ್ಟಿಸಲು ಇಲ್ಲಿನ ರಾಮನು ನಿರ್ಧರಿಸುತ್ತಾನೆ. ಆದರೆ ಸಮರ ಸಂಭವಿಸಿದರೆ ಅನಿವಾರ್ಯವಾಗಿ ಒದಗುವ ರಕ್ತಪಾತವು ಅವನ ಹೃದಯವನ್ನು ಹಿಂಡುತ್ತದೆ. ಹೀಗೆ ರಕ್ತಪಾತಕ್ಕೆ ಕಾರಣವಾಗು

ವುದಕ್ಕಿಂತ ವನವಾಸವೇ ಲೇಸೆಂದು ನಿರ್ಧರಿಸುತ್ತಾನೆ. ಅವನು ವನವಾಸ ಮುಗಿಸಿ ಹಿಂದಿರುಗುವ ಹೊತ್ತಿಗೆ ಚಿಕ್ಕಪ್ಪನು ತೀರಿಕೊಂಡಿರುತ್ತಾನೆ. ಹೀಗೆ ನಿರಾತಂಕವಾಗಿ ಅವನ ರಾಜ್ಯಭಾರ ಮತ್ತೆ ಪ್ರಾರಂಭವಾಗುತ್ತದೆ.

ಇದೇ ಪ್ರಸಂಗವು ವಾಲಿ-ಸುಗ್ರೀವರ ಮಲ್ಲಯುದ್ಧವನ್ನು ಹೇಳುವ ಕಥಾಭಾಗದಲ್ಲಿ ಕೂಡ ಬಂದಿದೆ. ಕಥಾನಾಯಕನು ಬೋಧಿಸತ್ತ್ವನಾದುದರಿಂದ ವಾಲಿಯನ್ನು ಕೊಲ್ಲುವುದಿಲ್ಲ. ಸುಗ್ರೀವನಿಗೆ ಸಹಾಯಕನಾಗಿ ನಿಂತ ನಾಯಕ(ರಾಮ)ನನ್ನು ಕಂಡೊಡನೆ ವಾಲಿಯು ಹಿಮ್ಮೆಟ್ಟಿ ಓಡಿಹೋಗುತ್ತಾನೆ. ಇಲ್ಲಿನ ವಾಲಿಯು ಸುಗ್ರೀವನ ಸೋದರನಲ್ಲ, ಚಿಕ್ಕಪ್ಪ. ಹೀಗೆ, (ವಾಲಿಯನ್ನು) ಕೊಲ್ಲದಿರುವುದು ಈ ಪಾಠದ ವೈಶಿಷ್ಟ್ಯ. ಇಲ್ಲಿ ಉತ್ತರಕಾಂಡದ ಕಥೆಯ ಪ್ರಸ್ತಾಪವಿಲ್ಲ.

ಈಗ ಟಿಬೆಟ್ಟಿನಾಚೆ ಇರುವ ಪೂರ್ವ ಇರಾನ್-ಪ್ರದೇಶವು ಮೊದಲಿಗೆ ಗೌಸ್ತನ ಅಥವಾ ಖೋಟಾನ್ ಎನಿಸಿಕೊಳ್ಳುತ್ತಿದ್ದಿತು. ಇದನ್ನು ಚೀನೀ-ತುರ್ಕಿಸ್ಥಾನವೆಂದೂ ಕರೆಯುತ್ತಿದ್ದರು. ಅಲ್ಲಿ ಭಾರತೀಯಸಂಸ್ಕೃತಿಗೆ ಸಂಬಂಧಿಸಿದ ಸಾರಸ್ವತ ಅವಶೇಷಗಳಿದ್ದುದನ್ನು ಪೆಲ್ಲಿಯೋ ಮುಂತಾದ ವಿದ್ವಾಂಸರು ಹೊರತೆಗೆದಿದ್ದಾರೆ. ಅಲ್ಲಿ ಉಪಲಬ್ಧವಿದ್ದ ಪ್ರಾಚೀನ ಗ್ರಂಥಗಳನ್ನೆಲ್ಲ ಪ್ಯಾರಿಸ್ಸಿನ 'ಬಿಬ್ಲಿಯೋಥಿಕ್ ನ್ಯಾಷನೆಲ್' ಎಂಬ ಗ್ರಂಥಾಲಯದಲ್ಲಿ ನಿಕ್ಷೇಪಮಾಡಿದ್ದಾರೆ. ಈ ಗ್ರಂಥಗಳಲ್ಲಿ ರಾಮಾಯಣದ ಕಥೆಯನ್ನು ಹೇಳುವ ಮೂರು ಪ್ರಾಚೀನಪತ್ರಸುರುಳಿಗಳು ಸೇರಿವೆ. ಕೇಂಬ್ರಿಜ್ ವಿಶ್ವವಿದ್ಯಾಲಯದ ಬೆಯ್‌ಲಿ ಎಂಬ ಪಂಡಿತರು ತುನ್ಹ್-ಉ-ಅಂಗ್ ಎಂಬಲ್ಲಿ ದೊರೆತ ಈ ರಾಮಾಯಣವನ್ನು ಪರಿಶೋಧಿಸಿ ಪ್ರಕಟಿಸಲು ಪ್ರಯತ್ನಪಟ್ಟಿದ್ದಾರೆ. ಈ ಕಾವ್ಯಗ್ರಂಥದ ಭಾಷೆ ಖೋಟಾನೀಸ್. ನಮಗೆ ಪರಿಚಯವಿರುವ ವಾಲ್ಮೀಕಿರಾಮಾಯಣದ ಜಾಡನ್ನು ಸ್ಥೂಲವಾಗಿ ಹಿಡಿದರೂ ಈ ಕಥೆಯಲ್ಲಿ ಅಸಾಧಾರಣವಾದ ವಿವರಗಳು ಹಲವಾರು ಇವೆ. ಈ ಗ್ರಂಥ ಸಿದ್ಧವಾದದ್ದು ಸುಮಾರು ಒಂದು ಸಾವಿರ ವರ್ಷಗಳಷ್ಟು ಹಿಂದೆ ಎನ್ನಬಹುದು.

ಈ ಕಥೆಯಲ್ಲಿ ದಶರಥನ ಪಾಲಿಗೆ ಸಹಸ್ರಬಾಹು-

ಕಾರ್ತವೀರ್ಯಾರ್ಜುನನು ಜಮದಗ್ನಿಋಷಿಗೆ ಮಾಡಿದ ಅಪಚಾರದ ವೃತ್ತಾಂತವನ್ನು ಜೋಡಿಸಿದ್ದಾರೆ; ದಶರಥನಿಗೆ ಸಹಸ್ರಬಾಹುವೆಂಬ ಹೆಸರನ್ನೂ ಹೇಳಿದ್ದಾರೆ. ಅವನ ಅಪಚಾರಕ್ಕೆ ಪಾತ್ರನಾದ ಬ್ರಾಹ್ಮಣನ ಮಗನನ್ನು ಪರಶುರಾಮನೆಂದೂ ಕರೆದಿದ್ದಾರೆ. ಪರಶುರಾಮನು ಕ್ಷತ್ರಿಯರನ್ನು ಧ್ವಂಸಮಾಡಿದುದ್ದೂ ಇಲ್ಲಿ ಬರುತ್ತದೆ. ಆದರೆ ಪರಶುರಾಮನ ಕೋಪಕ್ಕೆ ಅಂಜಿ ದಶರಥನ ಮಕ್ಕಳಾದ ರಾಮ-ಲಕ್ಷ್ಮಣರನ್ನು ಹನ್ನೆರಡು ವರ್ಷ ನೆಲಮಾಳಿಗೆಯಲ್ಲಿ ಅಡಗಿಸಿಟ್ಟಿದ್ದನೆಂದು ಇಲ್ಲಿ ಬರುವ ವಿವರ ನಮ್ಮಲ್ಲಿಲ್ಲವಷ್ಟೆ. ಸೀತೆಯು ದಶಗ್ರೀವ (ರಾವಣ)ನ ಮಗಳೆಂದು ಇಲ್ಲಿನ ವಿವರ. ಮುಂದೆ ರಾವಣನೇ ಅವಳನ್ನು ಕಂಡು ಮೋಹಿಸುತ್ತಾನೆ. ಮಗಳನ್ನೇ ಮೋಹಿಸಿದ ಪಾಪವು ಅವನನ್ನು ದುರ್ಗತಿಗೆ ಎಳೆಯುತ್ತದೆ. ಈ ವಿವರವು ನಮ್ಮ ದೇಶದಲ್ಲಿಯೂ ಅಲ್ಲಲ್ಲಿ ಪ್ರಚಲಿತವಾಗಿದೆ. ಜೈನರಾಮಾಯಣಗಳಲ್ಲಿ ಕೂಡ ಇದೇ ವಿವರವಿರುವುದು ಕಾಣಬರುತ್ತದೆ. ರಾಮನು ಸೀತೆಯನ್ನು ವರಿಸುವುದೂ ಇಲ್ಲಿ ಮೋಹದಿಂದಲೇ; ಸ್ವಯಂವರ ಅಥವಾ ಧನುರ್ಭಂಗದ ಪ್ರಸ್ತಾಪವಿಲ್ಲ. ಕಾಡಿನಲ್ಲಿ ರಾಮ-ಲಕ್ಷ್ಮಣರು ಅಡ್ಡಾಡುತ್ತಿದ್ದಾಗ ಈ ಋಷಿಕನ್ಯೆಯನ್ನು ಕಂಡು ಮೋಹಿಸಿ ಅವಳನ್ನು ಒಲಿಸಿಕೊಂಡು ತಮ್ಮ ರಾಜ್ಯಕ್ಕೆ ಕರೆದೊಯ್ಯುತ್ತಾರಷ್ಟೆ. ಇಲ್ಲಿನ ಪಾಠದಲ್ಲಿ ಸುಗ್ರೀವನೊಂದಿಗೆ ಮಲ್ಲಯುದ್ಧ ಮಾಡುತ್ತಿದ್ದ ಸೋದರಕಪಿ ವಾಲಿಯಲ್ಲ, ನಂದ. ಮುಂದೆ ನಂದನೇ ಸೀತಾಪರಿಮಾರ್ಗಣದಲ್ಲಿ ರಾಮನಿಗೆ ನೆರವಾಗುವುದು; ಇಲ್ಲಿ ಹನುಮಂತನ ಪ್ರಸ್ತಾಪ ಬರುವುದಿಲ್ಲ.

ಇಲ್ಲಿ, ಸೀತೆಯ ಸುಳಿವನ್ನು ಕಪಿಗಳು ಕಂಡುಕೊಂಡ ಬಗೆ ಸ್ವಾರಸ್ಯವಾಗಿದೆ. ನಂದನು ತನ್ನ ಪರಿವಾರವನ್ನೆಲ್ಲ ಕರೆದು ಮುಂದಿನ ಏಳು ದಿನಗಳಲ್ಲಿ ಸೀತೆಯು ಇರುವ ಸ್ಥಳವನ್ನು ಪತ್ತೆಮಾಡಬೇಕೆಂದೂ ತಪ್ಪಿದರೆ ಎಲ್ಲರ ಕಣ್ಣುಕೀಳಿಸುವೆನೆಂದೂ ವಿಧಿಸುತ್ತಾನೆ. ಕಪಿಗಳ ಪಡೆ ಎಡೆಬಿಡದೆ ಏಳೂ ದಿನ ಹುಡುಕಿದರೂ ಸೀತೆಯ ಸುಳಿವು ಸಿಗಲಿಲ್ಲ. ಆದರೆ ಏಳನೆಯ ದಿನ ಲಘೂಷಳೆಂಬ ಹೆಣ್ಣುಕಪಿ ಮರದ ಮೇಲೆ ಕೂತಿದ್ದಾಗ ಪಕ್ಕದಲ್ಲಿ ಎಲೆಗಳ ಸಂದಿನಿಂದ ಹಕ್ಕಿಯೊಂದು ತನ್ನ ಮರಿಗೆ "ಮಗು, ನಾಳೆ ನಿನಗೆ ಬೇಕಾದಷ್ಟು ಕಪಿಗಳ ಕಣ್ಣುಗಳನ್ನು ತಿನ್ನಲು ತಂದುಕೊಡುತ್ತೇನೆ.

ಹೇಗೂ ಅವಕ್ಕೆ ಸೀತೆ ಲಂಕಾಪುರದಲ್ಲಿರುವಳೆಂಬ ಸುದ್ದಿ ತಿಳಿಯುವುದಿಲ್ಲ" ಎಂದು ಹೇಳುತ್ತಿದ್ದುದನ್ನು ಕೇಳಿತು. ಬೇರೊಂದು ಕಪಿಯು ಲಘೂಷಳಿಂದ ಈ ಸುದ್ದಿಯನ್ನು ಸಂಗ್ರಹಿಸಿ ಒಡೆಯನಾದ ನಂದನಿಗೆ ಮುಟ್ಟಿಸಿತು.

ಸೀತಾಪರಿತ್ಯಾಗದ ವಿಚಾರ ಇಲ್ಲಿ ಬೇರೊಂದು ತೆರನಾಗಿ ಬಂದಿದೆ. ರಾಮ-ಲಕ್ಷ್ಮಣರು ಸೀತೆಯನ್ನು ಪಡೆದು ಹಿಂದಿರುಗಿದಮೇಲೆ ನೂರು ವರ್ಷವಾದರೂ ಅವರಿಗಾಗಲೀ ಪ್ರಜೆಗಳಿಗಾಗಲೀ ಸಮಾಧಾನವಿರಲಿಲ್ಲ. ತನ್ನ ಶೀಲದ ವಿಚಾರವಾಗಿ ಶಂಕೆಯು ಎಲ್ಲರ ಮನಸ್ಸನ್ನೂ ಕದಡಿದ್ದುದನ್ನು ಸೀತೆಯೇ ಅರಿತು ಇದನ್ನು ರಾಮಲಕ್ಷ್ಮಣರಿಗೆ ಹೇಳಿ ಭೂಮಿಯೊಳಗಿಳಿದು ಮರೆಯಾದಳು. ಸೀತೆಗೆ ರಾಮನೊಬ್ಬನೇ ಗಂಡನೆಂದು ಇಲ್ಲಿ ಸ್ಪಷ್ಟವಾಗಿಲ್ಲ; ಮೊದಲಿನಿಂದಲೂ ರಾಮ-ಲಕ್ಷ್ಮಣರಿಬ್ಬರೂ ಅವಳಲ್ಲಿ ಅನುರಕ್ತರು. ದಶರಥನಿಗೂ ಇಲ್ಲಿ ರಾಮ-ಲಕ್ಷ್ಮಣರಿಬ್ಬರೇ ಮಕ್ಕಳು. ರಾಮ-ರಾವಣರ ಯುದ್ಧದಲ್ಲಿ ರಾವಣ ಮಡಿಯುವುದಿಲ್ಲ; ಪರಾಜಿತನಾಗಿ ರಾಮನ ಕ್ಷಮೆಯನ್ನು ಪಡೆದು ಉಳಿದುಕೊಳ್ಳುತ್ತಾನೆ.

ಪೂರ್ವ-ಇರಾನಿನ ಈ ಕಥೆಯಲ್ಲಿ ಬೌದ್ಧಧರ್ಮದ ಪ್ರಭಾವ ಸ್ಪಷ್ಟವಾಗಿದೆ. ಗ್ರಂಥಾರಂಭದಲ್ಲೂ ಸಮಾಪ್ತಿಯಲ್ಲೂ ಬೌದ್ಧಧರ್ಮದ ಹೆಗ್ಗಳಿಕೆಯ ಉಲ್ಲೇಖವಿದೆ. ಕಥೆ ಮುಗಿದಮೇಲೆ ಜಾತಕಕಥೆಗಳಲ್ಲಿರುವಂತೆ ಪಾತ್ರ ಪರಿಚಯವಿದೆ. ಇಲ್ಲಿಯ ರಾಮನು ಶಾಕ್ಯಮುನಿ-ಬುದ್ಧನೇ; ಮೈತ್ರೇಯನೇ ಲಕ್ಷ್ಮಣ. ದಶಗ್ರೀವನು ಸೋತನಂತರ ರಾಮನ ಬಳಿಗೆ ಬಂದು ಧರ್ಮದೀಕ್ಷೆ ಪಡೆಯುತ್ತಾನೆ. ಅವನನ್ನು ಕೊಲ್ಲದೆ ಉಳಿಸಿ ಅವನ ಶೀಲದಲ್ಲಿ ಪರಿವರ್ತನೆಯನ್ನು ಒದಗಿಸಿದುದು ಬುದ್ಧನ ಕಾರುಣ್ಯಾಪಾರಮಿತೆಯನ್ನು ಸೂಚಿಸುತ್ತದೆ.

ಈ ಕಥೆಯಲ್ಲಿ ಜರುಗುವ ಪ್ರಸಂಗಗಳು ಜಟಿಲವಾಗಿಲ್ಲದೆ ಸರಳವಾಗಿರುವುದು ಅದರ ಪ್ರಾಚೀನತೆಯನ್ನು ಹೇಳುತ್ತದೆ. ನಿರೂಪಣೆಯಲ್ಲಿ ಕೂಡ ಅನವಶ್ಯವಾದ ಅಲಂಕರಣ ಆವೇಶವಿಲ್ಲ. ಜಾನಪದಕವನದಂತೆ ಹಣೆಯಲ್ಪಟ್ಟಿರುವ ಈ ಕಥೆಯು ವಾಲ್ಮೀಕಿರಾಮಾಯಣದಿಂದ ಎಷ್ಟರಮಟ್ಟಿಗೆ ಪ್ರಭಾವಿತವಾಗಿದೆಯೆಂದು ನಿರ್ಧರಿಸುವುದು ಕಷ್ಟ. ಬಹುಶಃ ವಾಲ್ಮೀಕಿಯ

ಕಾವ್ಯಕ್ಕಿಂತ ಪ್ರಾಚೀನವಾದ ಸಂಪ್ರದಾಯವೊಂದನ್ನವಲಂಬಿಸಿ ಈ ಕಥೆ ಸಿದ್ಧವಾಗಿರಬಹುದು.

ಹೀಗೆ ನೆರೆನಾಡುಗಳಲ್ಲಿ ರಾಮಾಯಣವು ಪ್ರಚಲಿತವಾಗಿರುವುದು ಮಾತ್ರವಲ್ಲ, ವಿವರಗಳಲ್ಲಿ ವಿಪುಲವಾದ ವೈವಿಧ್ಯವೂ ಉಳಿದುಬಂದಿದೆ. ರಾಮನ ಕಥೆಯ ಪ್ರಾಚೀನತೆಯ ಬಗ್ಗೆ, ವಾಲ್ಮೀಕಿಯ ಕಾಲಕ್ಕೆ ಸಿದ್ಧವಾಗಿದ್ದ ಸಂಪ್ರದಾಯ ಬೆಳೆದುಬಂದುದರ ಬಗ್ಗೆ ಈ ದೇಶಾಂತರಗಳ ರಾಮಾಯಣ ಪಾಠಗಳು ಬೆಳಕು ಚೆಲ್ಲಬಹುದು.

●

'ಭಾರತತೀರ್ಥ'

ಭಾರತೀಯತೆಯ ಸಾರಸ್ವತಯಜ್ಞದಲ್ಲಿ ನೀವೂ ಭಾಗಿಯಾಗಬಹುದು, ಹೀಗೆ—

- ❖ ಭಾರತತೀರ್ಥಗ್ರಂಥಮಾಲಿಕೆಯ ಕೃತಿಗಳನ್ನು ಕೊಂಡು ಓದುವುದು ಹಾಗೂ ಸ್ನೇಹಿತರನ್ನೂ, ಬಂಧು-ಬಳಗದವರನ್ನೂ ಓದಿಗೆ ಪ್ರೇರಿಸುವ ಮೂಲಕ,
- ❖ ಉಪನಯನ, ಮದುವೆ, ಹುಟ್ಟುಹಬ್ಬ ಮುಂತಾದ ಶುಭಸಮಾರಂಭಗಳಲ್ಲಿ 'ಭಾರತತೀರ್ಥ'ಕೃತಿಗಳನ್ನು ಉಡುಗೊರೆಯಾಗಿ ನೀಡುವ ಮೂಲಕ,
- ❖ ಈ ಯೋಜನೆಗೆ ಸರಿಹೊಂದುವಂಥ ವಿಷಯಗಳನ್ನೂ, ಲೇಖಕರನ್ನೂ ಸೂಚಿಸುವ ಮೂಲಕ,
- ❖ ಪುಸ್ತಕಗಳ ಪ್ರಕಟನೆಗೆ ಉದಾರವಾಗಿ ಧನಸಹಾಯವನ್ನು ಒದಗಿಸುವ ಮೂಲಕ,

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

—ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ
panditsurya@yahoo.co.in
✆ 94484 94949

ಅಭಿಜ್ಞಾನ

ಬೆಂಗಳೂರು - 560 019 ✆ 2242 1414, 9448 49 49 49
abhijnanam@yahoo.com; abhijnanabooks@yahoo.com

ಸಂಸ್ಕೃತಿ-ಕಲೆ-ಸಾಹಿತ್ಯ— ಈ ಕ್ಷೇತ್ರಗಳಲ್ಲಿ ತನ್ನನ್ನು ಗುರುತಿಸಿಕೊಂಡ ಅಭಿಜ್ಞಾನ ಶ್ರೀಯುತ ಡಿ.ವಿ.ಜಿ. ಮತ್ತು ಡಾ. ಆನಂದ ಕೆ. ಕುಮಾರಸ್ವಾಮಿ ಅವರ ಜೀವನ-ದರ್ಶನಗಳ ಬೆಳಕಿನಲ್ಲಿ 1996ರಲ್ಲಿ ಅಸ್ತಿತ್ವಕ್ಕೆ ಬಂದಿತು. ಭಾರತೀಯಪರಂಪರೆಯನ್ನು ಪ್ರತಿಬಿಂಬಿಸುವಂಥ ಚಟುವಟಿಕೆಗಳ ಕಡೆಗೆ ನಮ್ಮ ಮುಖ್ಯ ಲಕ್ಷ್ಯ; ಆದರೆ ಜಗತ್ತಿನ ಪ್ರತಿಯೊಂದು ಸಾತ್ತ್ವಿಕಸ್ವರೂಪವೂ ನಮಗೆ ಪೂಜ್ಯ. ಪೌರಸ್ತ್ಯ-ಪಾಶ್ಚಾತ್ಯ ಪ್ರಪಂಚದ ಶುದ್ಧ-ಶುಭ್ರ ಪ್ರಜ್ಞಾಪ್ರವಾಹದ ಸಂಗಮಸ್ಥಾನ ಅಭಿಜ್ಞಾನ.

ಅಭಿಜ್ಞಾನದೊಂದಿಗೆ ನೀವು ಹೇಗೆ ಗುರುತಿಸಿಕೊಳ್ಳಬಹುದು?

- ಅಭಿಜ್ಞಾನದ ಪ್ರಕಟನೆಗಳನ್ನು ಕೊಂಡು ಓದುವುದರ ಮೂಲಕ,
- ಅಭಿಜ್ಞಾನ ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಂಧು-ಮಿತ್ರರೊಡಗೂಡಿ ಭಾಗವಹಿಸುವ ಮೂಲಕ,
- ಅಭಿಜ್ಞಾನದ ಚಟುವಟಿಕೆಗಳಿಗೆ ಹಾಗೂ ಗ್ರಂಥಯೋಜನೆಗಳಿಗೆ ಉದಾರವಾಗಿ ತನು-ಮನ-ಧನಸಹಾಯವನ್ನು ಒದಗಿಸುವ ಮೂಲಕ.

ಆತ್ಮೀಯರೇ, ಅಭಿಜ್ಞಾನದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಪ್ರೋತ್ಸಾಹಿಸಿ, ಬೆಂಬಲಿಸಿ, ಬೆಳಸಿ.

ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ
E-mail: panditsurya@yahoo.co.in

ಅಭಿಜ್ಞಾನದ ಮುಂದಿನ ಕೆಲವು ಪ್ರಕಟನೆಗಳು

ಪೂರ್ಣಪ್ರಜ್ಞಪ್ರಶಸ್ತಿ / ಪ್ರೊ. ಸಾ. ಕೃ. ರಾಮಚಂದ್ರರಾವ್ • *ಬುದ್ಧನ ಬಾಳು-ಬೆಳಕು* / ಪ್ರೊ. ಸಾ. ಕೃ. ರಾಮಚಂದ್ರರಾವ್ • *ಶ್ರೀಕೃಷ್ಣನ ವ್ಯಕ್ತಿತ್ವ*/ ಪ್ರೊ. ಸಾ. ಕೃ. ರಾಮಚಂದ್ರರಾವ್ • *ಮೇಘದೂತ ಒಂದು ಹಳೆಯ ಕಥೆ*/ ಹಜಾರಿಪ್ರಸಾದ್ ದ್ವಿವೇದಿ / ಮ. ಸು. ಕೃಷ್ಣಮೂರ್ತಿ • *ಧರ್ಮಚಕ್ರ* / ಪ್ರೊ. ಜಿ. ಎನ್. ಚಕ್ರವರ್ತಿ • *ತರ್ಕಸಂಗ್ರಹ* / ಮಹೇಶ ಅಡಕೋಳಿ, ಶಂಕರಭಟ್ಟ • *ಪ್ರಜ್ಞಾರಂಗ*/ ವಿದ್ವಾನ್ ಎನ್. ರಂಗನಾಥಶರ್ಮ ಅವರ ಸಮಗ್ರ ಲೇಖನಗಳು • *ಸಾಮಾನ್ಯಪ್ರಜ್ಞೆಯೇ ಬುದ್ಧಪ್ರಜ್ಞೆ* / ಎಸ್. ಸೂರ್ಯಪ್ರಕಾಶ ಪಂಡಿತ್ • *ಜೀವನ ಮತ್ತು ಕಲೆ* / ಎಸ್. ಸೂರ್ಯಪ್ರಕಾಶ ಪಂಡಿತ್

ಮುಂದಿನ ಕೆಲವು ಗ್ರಂಥಯೋಜನೆಗಳು

ಪುರುಷಾರ್ಥಗಳು • ಭಾರತದಲ್ಲಿ ವ್ರತ, ಪರ್ವ, ಉತ್ಸವಗಳು - ಒಂದು ಸಾಂಸ್ಕೃತಿಕ ಅವಲೋಕನ • ಅಲಂಕಾರಶಾಸ್ತ್ರ • ಝೆನ್‌ದರ್ಶನ

ಅಭಿಜ್ಞಾನದ ಕೆಲವು ಪ್ರಕಟನೆಗಳು

- *ಶ್ರೀಸೂಕ್ತ* / ಪ್ರೊ. ಸಾ. ಕೃ. ರಾಮಚಂದ್ರರಾವ್ (ಅಚ್ಚಿನಲ್ಲಿದೆ)
- *ಕಲಾತತ್ತ್ವಮಹರ್ಷಿ ಆನಂದ ಕುಮಾರಸ್ವಾಮಿ* / ಪ್ರೊ. ಸಾ. ಕೃ. ರಾಮಚಂದ್ರರಾವ್
  (ಜೀವನಚರಿತ್ರೆ) ರೂ. 25
- *ಪ್ರಥಮ ಸೋಪಾನ* / ಸ್ವಾಮೀ ಪರಮಾನಂದ ಭಾರತೀ ರೂ. 45
  (ದೇವರು-ಪುನರ್ಜನ್ಮ-ವೇದಗಳನ್ನು ಕುರಿತ ಮೀಮಾಂಸೆ)
- *ವಿಲಿಯಂ ಷೇಕ್ಸ್‌ಪಿಯರ್* / ಪ್ರೊ. ಎಲ್. ಎಸ್. ಶೇಷಗಿರಿ ರಾವ್ ರೂ. 110
- *ಮೆಲುಗಾಳಿಯ ಮಾತುಗಳು* / ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ ರೂ. 90
  (ತೊಂಬತ್ತು ಚಿಂತನಗಳ ಸಂಗ್ರಹ)
- *ಅಣ್ಣಪ್ಪದೈವ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 65
- *ಶಾರದಾಪೀಠದ ಮಾಣಿಕ್ಯ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 90
- *Śaṅkara and Adhyāsa-bhāśya*/
  Prof. S. K. Ramachandra Rao Rs. 100
- *ಅಭಿನವಗುಪ್ತ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 50
  (ಯೋಗಿ, ಸಿದ್ಧ, ದಾರ್ಶನಿಕ, ಆಲಂಕಾರಿಕನ ಜೀವನ-ದರ್ಶನ)
- *ಕಾಮ ಒಂದು ಪುರುಷಾರ್ಥ* / ಡಾ. ವಿ. ಕೆ. ಹಂಪಿಹೊಳಿ ರೂ. 75
- *ಧಾರ್ಮಿಕ ಸಂಸ್ಕಾರಗಳಲ್ಲಿ ಸಂಗೀತ* / ಡಾ. ರಾ. ಸತ್ಯನಾರಾಯಣ ರೂ. 145
- *ಚಿಂತನ ಚಿಲುಮೆ* / ಸತ್ಯೇಶ್ ಎನ್. ಬೆಳ್ಳೂರ್ ರೂ. 70
- *ಹೃದಯಸಂಪನ್ನತೆ* / ಪ್ರೊ. ಶ್ರೀಕಂಠಕುಮಾರಸ್ವಾಮಿ ರೂ. 60
- *Śṛṅgeri* / Prof. A. V. Narasimhamurthy Rs. 140
  (The Holy Abode of the Shankaracharyas of the South)
- *ತಿರುಪತಿ ತಿಮ್ಮಪ್ಪ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 450
- *ಚಂಪೂರಾಮಾಯಣಮ್ ಕಿಷ್ಕಿಂಧಾಕಾಂಡಮ್* / ಡಾ. ಮಹೇಶ ಅಡಕೋಳಿ
  (ಮೂಲ, ಅನ್ವಯ, ಕನ್ನಡ ಅನುವಾದ, ಟಿಪ್ಪಣಿಗಳು) ರೂ. 45
- *ಸೂಕ್ತಿಕೋಶ* / ಪ್ರೊ. ಕೆ. ಎಸ್. ಕಣ್ಣನ್ ರೂ. 120
- *ಚಂಪೂರಾಮಾಯಣಮ್ ಬಾಲಕಾಂಡಮ್* / ಡಾ. ಮಹೇಶ ಅಡಕೋಳಿ
  (ಮೂಲ, ಅನ್ವಯ, ಕನ್ನಡ ಅನುವಾದ, ಟಿಪ್ಪಣಿಗಳು) ರೂ. 75
- *ಶ್ರೀದತ್ತಭಾವಸುಧಾರಸಸ್ತೋತ್ರಮ್* / ಶೇಷಾಚಲಶರ್ಮಾ ರೂ. 25
- *ಗಣಪತಿಯ ಕಲ್ಪನೆ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 60
- *ವಾಲ್ಮೀಕಿಪ್ರತಿಭೆ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 45
- *ಶ್ರೀಕೃಷ್ಣನ ವ್ಯಕ್ತಿತ್ವ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 60
- *ಗೀತಗೋವಿಂದ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 45

ಭಾರತದೇಶದ ಋಷಿ-ಮುನಿಗಳು, ಸಿದ್ಧರು-ಸಂತರು-ಮಹಾಪುರುಷರು, ತೀರ್ಥಕ್ಷೇತ್ರಗಳು, ಕಲಾಪ್ರಕಾರಗಳು, ಸಾಹಿತ್ಯ, ದರ್ಶನಪ್ರಸ್ಥಾನಗಳು, ಕಲ್ಪನೆಗಳು, ಇತಿಹಾಸ, ವಿಜ್ಞಾನ, ಜೀವನಪದ್ಧತಿಗಳು—ಹೀಗೆ ಸಮಸ್ತ ಭಾರತೀಯವಿದ್ಯೆಗಳನ್ನು ಕುರಿತು ಪ್ರಕಟವಾಗುವ ಗ್ರಂಥಮಾಲಿಕೆಯೇ 'ಭಾರತತೀರ್ಥ'.

ಪ್ರಪಂಚದಲ್ಲಿ ನಮಗೆ ದೊರೆತಿರುವ ಮೊಟ್ಟಮೊದಲನೆಯ ಕಾವ್ಯವೇ ವಾಲ್ಮೀಕಿ-ರಾಮಾಯಣ. ಈ ಆದಿಕಾವ್ಯವೇ ಕಾವ್ಯದ ಎಲ್ಲ ಸಲ್ಲಕ್ಷಣಗಳಿಗೆ ಆದರ್ಶವೂ ಆಗಿದೆ; ಸರ್ವಾಂಗಪರಿಪೂರ್ಣವೂ, ಸರ್ವಾಂಗಸುಂದರವೂ ಆಗಿದೆ. ರಾಮಾಯಣವನ್ನೂ, ಅದರ ಕರ್ತೃ ಋಷಿಕವಿ ವಾಲ್ಮೀಕಿಗಳ ಪ್ರತಿಭೆಯನ್ನೂ ಈ ಕೃತಿಯು ಪರಿಚಯಿಸುತ್ತದೆ.

ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರರಾವ್ ನಮ್ಮ ನಾಡು ಕಂಡಿರುವ ಶ್ರೇಷ್ಠವಿದ್ವಾಂಸರಲ್ಲಿ ಒಬ್ಬರು; ವೇದ-ವೇದಾಂತ-ಬೌದ್ಧ-ಜೈನ-ಆಗಮ-ತಂತ್ರ-ಶಿಲ್ಪ-ಚಿತ್ರ-ಆಯುರ್ವೇದ-ಯೋಗ—ಹೀಗೆ ಹತ್ತಾರು ವಿಷಯಗಳ ಬಗ್ಗೆ ಕನ್ನಡ-ಇಂಗ್ಲಿಷ್‌ಭಾಷೆಗಳಲ್ಲಿ ಇನ್ನೂರಕ್ಕೂ ಹೆಚ್ಚು ಮೌಲಿಕ ಗ್ರಂಥಗಳನ್ನು ರಚಿಸಿರುವವರು.

ಅಭಿಜ್ಞಾನ
ಬೆಂಗಳೂರು

ISBN: 978-81-88278-17-6
9 788188 278176

ರೂ. 45